ಶ್ರೀ ಎಸ್. ಆರ್. ಬೊಮ್ಮಾಯಿ.—ಇದರ ಬಗೆಗ್ಗೆ ಸಾಕಷ್ಟು ಚರ್ಚೆಯಾಗಿದೆ, ಇದರ ಹಿನ್ನೆಲೆಯಲ್ಲಿ ತಪ್ಪಿತಸ್ಥರು ಯಾರಿದ್ದಾರೆ, ಅವರಿಗೆ ಶಿಕ್ಷೆಯನ್ನು ಮಾಡತಕ್ಕಂಥ ಕಾರ್ಯವನ್ನು ಸರ್ಕಾರ ಮಾಡಬೇಕು.

SRI K. BHASKAR NAIDU.—Hon. Memebr Sri Armugam raised this subject because it is a grave matter. We have discussed this thread.-bare and we have given credit that it is a fit matter for discussion. If we tried to discuss further more the very importance with which Mr. Armugam brought this matter here will lose its importance. If we still want to discuss further, some other time may be given. Otherwise it will lose its importance.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಮಾನ್ಯ ಸದಸ್ಯರುಗಳು ಈ ವಿಷಯದ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ವಿಚಾರಣೆ ಮಾಡಬೇಕು. ವಿಚಾರಣೆ ಮಾಡುವುದರಲ್ಲಿ ಯಾರದೂ ಆಕ್ಷೇಪ ಇಲ್ಲ. ನಮ್ಮ ಯೂನಿವರ್ಸಿಟಿ ಚೆನ್ನಾಗಿ ನಡೆಯಬೇಕು ಎನ್ನುವ ಉದ್ದೇಶ ಎಲ್ಲರಿಗೂ ಇರುವಂಥಾದ್ದೆ ಇದರ ಹಿನ್ನೆಲೆ ಗಾಯಕರು ಯಾರಿದ್ದಾರೆ ಎನ್ನುವ ಬಗ್ಗೆ ವಿಚಾರಣೆ ಮಾಡಬೇಕಾಗಿದೆ. ಸಿಂಡಿಕೇಟ್ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ದೇವೇಗೌಡರು ಹೇಳಿದರು. According to Section 24 they are all *ex officio* Memebrs of the Syndicate. ಮತ್ತೆ ಮಾನ್ಯ ಸದಸ್ಯರಾದ ಶ್ರೀ ಮಳ್ಳೂರು ಆನಂದರಾಯರು ಒಬ್ಬರ ಹೆಸರನ್ನು ಹೇಳಿದರು. According to my information he is an elected member of the Syndicate. That is what I learnt. ಮಾನ್ಯ ಸದಸ್ಯರಾದ ಮಳ್ಳೂರು ಆನಂದರಾಯರು ಅವರು ನಾಮಿನೇಟೆಡ್ ಮೆಂಬರ್ ಎಂದು ಹೇಳಿದರು. I hope hon. Member would correct hemself.

MR. SPEAKAR.—Now we will take up the Motion of Thanks to the Governor's address.

Motion of Thanks to the Governor's Address (Debate Continued)

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಮೊನ್ನೆ ರಾಜ್ಯಪಾಲರು ವಿಧಾನಮಂಡಲದಲ್ಲಿ ಮಾಡಿದ ಭಾಷಣದ ಮೇಲೆ ಚರ್ಚೆ ನಡೆಯುತ್ತಾ ಇದೆ. ಬಹುಶ: ರಾಜ್ಯಪಾಲರು ಅವರ ಭಾಷಣವನ್ನು ಚುನಾವಣೆಗಳ ಹಿನ್ನೆಲೆಯಲ್ಲಿ ಪ್ರಾರಂಭಮಾಡಿದ್ದಾರೆ. ಒಬ್ಬ ಸದಸ್ಯರು ಬಹುಶಃ ಚುನಾವಣೆಗಳು ನಡೆಯುವುದಕ್ಕೆ ಹಿಂದೆ ೨ ತಿಂಗಳ ಕಾಲ ಈ ರಾಜ್ಯದಲ್ಲಿ ರಾಷ್ಟ್ರಪತಿಯವರ ಆಡಳಿತವನ್ನು ತಂದಿದ್ದು ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿರಲಿಲ್ಲ. It was undemocratic ಎಂದು ಹೇಳುವ ಮಟ್ಟಕ್ಕೆ ಹೋದರು. ಶ್ರೀಮಾನ್ ಶೀರ್‍ನಾಳಿ ಚಂದ್ರಶೇಖರ್ ಅವರು ಇದರ ಬಗ್ಗೆ ಪ್ರಸ್ತಾಪ ಮಾಡಿದರು. ನಾನು ಆಕಡೆ ಕುಳಿತುಕೊಂಡಿರತಕ್ಕಂಥ ಸದಸ್ಯರನ್ನು ಕೇಳುತ್ತೇನೆ. ರಾಷ್ಟ್ರಪತಿಯವರ ಆಡಳಿತ ಈ ರಾಜ್ಯದಲ್ಲಿ ಬಂದಂಥ ಹಿನ್ನೆಲೆಯನ್ನು ತಾವು ಜ್ಞಾಪಕಮಾಡಿಕೊಳ್ಳಬೇಕು. ಆಡಳಿತ ನಡೆಸತ್ತಾ ಇರತಕ್ಕಂಥ ಪಕ್ಷಕ್ಕೆ ವಿಧಾನ ಸಭೆಯಲ್ಲಿ ಬಹುಮತ ಕಳೆದುಕೊಂಡ ಕೂಡಲೇ ರಾಜ್ಯಾಂಗದತ್ತವಾಗಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ತಾವು ಆಲೋಚನೆ ಮಾಡಬೇಕು. ಇವತ್ತು ತಮ್ಮ ಪಕ್ಷದಲ್ಲಿ ೧೫೧ ಜನ ಇದ್ದೀರಿ, ಸರ್ಕಾರ ನಡೆಸುತ್ತಾ ಇದ್ದೀರಿ. ೫೦ ಜನ ಈ ಕಡೆ ಬಂದರೆ ಸರ್ಕಾರದ ಪರಿಸ್ಥಿತಿ ಏನಾಗುತ್ತದೆ. ಅಂತಹ ಕಾಲದಲ್ಲಿ ರಾಷ್ಟ್ರಪತಿಯವರ ಆಡಳಿತ ಈ ರಾಜ್ಯದಲ್ಲಿ ತಂದರೆ ಅದು ಅನ್ ಡೆಮಾಕ್ರಟಿಕ್ ಆಗುವುದೇ ಎನುವುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು.

ಶ್ರೀ ಕೆ. ಎಚ್. ರಂಗನಾಥ್.—ಎಣಿಕೆ ಎಲ್ಲಿ ಪ್ರಾರಂಭವಾಗಬೇಕು ?

ಶ್ರೀ ಎಂ. ಸಿ. ಬಸಪ್ಪ.—ರಾಜ್ಯಪಾಲರ ಮುಂದೆ ಪ್ರದರ್ಶನ ನಡೆದಿದೆ. ರಾಜ್ಯಪಾಲರು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಆ ಕೆಲಸ ಈ ಸಭೆಯಲ್ಲೇ ಆಗಿದ್ದರೆ ಒಳ್ಳೆಯದಲ್ಲವೇ ?

ಶ್ರೀ ಎಂ. ಸಿ. ಬಸಪ್ಪ.—ಜವಾಬ್ದಾರಿಯುತರಾದ ಸದಸ್ಯರು ನಾವು ಸರ್ಕಾರಕ್ಕೆ ಕೊಡತಕ್ಕಂಥ ಬೆಂಬಲವನ್ನು ಹಿಂದಕ್ಕೆ ತೆಗೆದುಕೊಂಡಿದ್ದೇವೆ ಎಂದು ರಾಜ್ಯಪಾಲರ ಮುಂದೆ ಹೇಳಿದ್ದಾರೆ. ರಾಜ್ಯ ಪಾಲರು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಅದರ ಹಿನ್ನೆಲೆಯಲ್ಲಿ ರಾಷ್ಟ್ರಪತಿ ಯವರ ಆಡಳಿತ ಬಂತು.

ಶ್ರೀ ಎಸ್. ವಿ. ನಾಯಕ್.—ಜನರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ನಾವು ಇಲ್ಲಿ ಬಂದು ಕುಳಿತ್ತಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ರಾಜ್ಯದಲ್ಲಿ ಚುನಾವಣೆಗಳು ಆಗಬೇಕು ಎಂದು ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಂಡಿತು, ಚುನಾವಣೆಗಳು ನಡೆದಿದೆ ತಾವು ಬಂದಿದ್ದೀರಿ. ಆ ವಿಚಾರ ನಾನು ಹೇಳುತ್ತಾ ಇಲ್ಲ. ಈ ರಾಜ್ಯದಲ್ಲಿ ರಾಷ್ಟ್ರಪತಿಯವರ ಆಡಳಿತ ಬಂದಿರುವುದು ಅನ್ ಡೆಮಾಕ್ರಟಿಕ್ ಎಂದು ಹೇಳಿದರೆ, ಯಾವಾಗ ಆಡಳಿತ ಪಕ್ಷ ಬಹುಮತ ಕಳೆದುಕೊಳ್ಳುತ್ತದೋ ಗ ಕೇಂದ್ರ ಸರ್ಕಾರ ವಿಧಿ ಯಿಲ್ಲದೆ ರಾಷ್ಟ್ರಪತಿಯವರ ಆಡಳಿತವನ್ನು ತಂದರು. ಕೇಂದ್ರಸರ್ಕಾರ ಡೆಮಾಕ್ರಟಿಕ್ ಆಗಿ ನಡೆದು ಕೊಂಡಿದೆ. ಕೇವಲ ೬೦ ದಿನಗಳಲ್ಲಿ ಚುನಾವಣ ಸರ್ಕಾರವನ್ನು ಈ ರಾಜ್ಯಕ್ಕೆ ಕೊಟ್ಟಿದೆ. ಆದುದ ರಿಂದ ಕೇಂದ್ರಸರ್ಕಾರ ಅನ್ ಡೆಮಾಕ್ರಟಿಕ್ ಆಗಿ ನಡೆಯಿತು, ಮಾಡಿತು ಎಂದು ಪ್ರಸಾಪ ಮಾಡುವುದು ಸರಿಯಾದುದಲ್ಲ ಎಂದು ನಾನು ಮೊಟ್ಟ ಮೊದಲನೆಯದಾಗಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ರಾಜ್ಯ ಪಾಲರ ಭಾಷಣದಲ್ಲಿ ಈ ಬಗ್ಗೆ ಉಲ್ಲೇಖವಿರುವುದರಿಂದ ನಾನು ಉತ್ತರ ಕೊಡಬೇಕಾಯಿತು. ಇವತ್ತು ತಮ್ಮ ಪಕ್ಷಕ್ಕೆ ಬಹುಮತ ಬಂದಿದೆ ತಾವು ಆಡಳಿತ ನಡೆಸುತ್ತಿದ್ದೀರಿ. ಹಿಂದೆ ೬೦ ದಿನಗಳ ಕಾಲ ನಡೆದ ಆಡಳಿತ ಅನ್ ಡೆಮಾಕ್ರಟಿಕ್ ಎಂದು ಏನು ಹೇಳುತ್ತೀರಿ ಅದು ಸರಿಯಲ್ಲ. There was no other go except the President' s Rule. It was done constitutionally and according to law. ಎಂದು ಹೇಳುತ್ತೇನೆ. ತಾವು ಬಂದು ಆಡಳಿತ ನಡೆಸುವುದಕ್ಕೆ ಬೇಡ ಎಂದು ನಾನು ಹೇಳುವುದಿಲ್ಲ. ೫೦ ಜನ ಈ ಕಡೆ ಬಂದರೆ ಸರ್ಕಾರ ಬೀಳುತ್ತದೆ.

ಶ್ರೀ ಆರ್. ಗುಂಡೂರಾವ .—ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಪಕ್ಷಾಂತರ ಮಾಡಿದರೆ ಸರ್ಕಾರ ಬೀಳುತ್ತದೆ. ಆದರೆ ಅಂತಹವರನ್ನೆಲ್ಲಾ ಜನ ಕೈಬಿಟ್ಟಿದ್ದಾರೆ. ಅಂತವರು ನಿಮ್ಮ ಕಡೆಯೂ ಇಲ್ಲ, ನಮ್ಮ ಕಡೆಯೂ ಇಲ್ಲ

ಶ್ರೀ ಎಂ. ಸಿ. ಬಸಪ್ಪ.—ರಾಷ್ಟ್ರಪತಿ ಆಡಳಿತ ಯಾವರೀತಿ ಬಂತು ಎನ್ನುವುದಕ್ಕೆ ಉದಾಹರಣೆ ಕೊಟ್ಟೆ ಅಷ್ಟೆ. ೫೦ ಜನ ಈ ಕಡೆ ಬಂದು ನಿಮ್ಮ ಸರ್ಕಾರ ಬಿದ್ದು ಹೋಗಲಿ ಎನ್ನುವುದು ನನ್ನ ಅಪೇಕ್ಷೆ ಯಲ್ಲ, ನನ್ನ ಆಸೆಯಲ್ಲ.

ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಚುನಾವಣೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ರಾಜ್ಯ ದಲ್ಲಿದ್ದಂಥ ಅಭಾವ ಪರಿಸ್ಥಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಬಹುಶಃ ಅವರು ಅಭಾವ ಪರಿಸ್ಥಿತಿಯು ಇದ್ದಂಥ ಕಾಲದಲ್ಲಿ ಮುಖ್ಯವಾದ ಕಾರ್ಯಗಳನ್ನು ಸರ್ಕಾರ ಕೈಗೊಂಡಿದೆ ಎಂದು ಹೇಳಿದ್ದಾರೆ. ಸುಮಾರು ೧೧ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಸುಮಾರು ೧೨೮ ತಾಲ್ಲೂಕುಗಳಲ್ಲಿ ಅಭಾವ ಪರಿಸ್ಥಿತಿಗೆ ಒಳಗಾಗಿದ್ದಂಥ ತಾಲ್ಲೂಕುಗಳಲ್ಲಿ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ಸರ್ಕಾರದ ಹಣ ಯಾವ ರೀತಿಯಾಗಿ ಪೋಲು ಆಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ, ಅಭಾವ ಪರಿಸ್ಥಿತಿಯ ಹೆಸರಿನಲ್ಲಿ ಅನೇಕ ಕೆಲಸಗಳನ್ನು ಸ್ಕೇರ್ಸಿಟಿ ಪ್ರದೇಶ ಗಳಲ್ಲಿ ಮಾಡಿಸಿದರು ಆದರೆ ಹಿಂದೆ ಅಭಾವ ಇದ್ದಂಥ ಕಾಲದಲ್ಲಿ ಆ ಕ್ಷೇತ್ರಗಳಲ್ಲಿ ಕಲಸಗಳನ್ನು ತೆಗೆದು ಕೊಳ್ಳಬೇಕಾದರೆ ಸರ್ಕಾರದ ಏಜೆನ್ಸಿ ಮುಖಾಂತರ ಅಂದರೆ ಅದು ರೆವಿನ್ಯೂ ಆಗಿರಬಹುದು, ಪಿಡಬ್ಲ್ಯುಡಿ ಆಗಿರಬಹುದು, ನಾಮಿನಲ್ ರೋಲ್ ಬೇಸಿಸ್ ಮೇಲೆ ಸರ್ಕಾರ ಹಣವನ್ನು ಖರ್ಚುಮಾಡುತ್ತಿದ್ದರು. ಅದರಿಂದ ನಿರ್ಗತಿಕನಾದವನಿಗೆ ಅವನ ಕೈಗೆ ಹಣ ಸರಿಯಾಗಿ ಹೋಗಿ ಮುಟ್ಟುತಿತ್ತು. ಆದರೆ ಕಳೆದ ೨-೩ ವರ್ಷಗಳಲ್ಲಿ ಏನು ವ್ಯವಹಾರ ಮಾಡಿದ್ದಾರೆಂದರೆ, ಕಂಟ್ರ್ಯಾಕ್ಟರ್‌ಗಳ ಮುಖಾಂತರ ಅಭಾವಕ್ಕೆ ಒಳಗಾದಂಥ ಪ್ರದೇಶದಲ್ಲಿ ಕಷ್ಟಪಡುತ್ತಿರುವ ಜನಗಳಿಗೆ ಹಣ ಸರಿಯಾಗಿ ಹೋಗುವುದರ ಬದಲು ಈ ಮಧ್ಯವರ್ತಿ ಜನಗಳಾದ ಕಂಟ್ರ್ಯಾಕ್ಟರ್‌ಗಳ ಕೈಗೆ ಕೊಟ್ಟು ಕೆಲಸವನ್ನು ಮಾಡಿಸಿದ್ದಾರೆ,

ಶ್ರೀ ಕೆ. ಎಚ್. ರಂಗನಾಥ್.—ಡಿಪಾರ್ಟ್‌ಮೆಂಟ್ ಮುಖಾಂತರ ಮಾಡಿಸಿದ್ದೇನೆ.

ಶ್ರೀ ಎಂ. ಸಿ. ಬಸಪ್ಪ.—ಡಿಪಾರ್ಟ್‌ಮೆಂಟ್‌ಗಳ ಮುಖಾಂತರ ಮಾಡಿಸಿಲ್ಲ. ಅಲ್ಲಿ ಪೀಸ್ ವರ್ಕ್‌ನ ಮೇಲೆ ಕಂಟ್ರಾಕ್ಟರ್‌ಗಳ ಮುಖಾಂತರ ಕೆಲಸ ಮಾಡಿಸಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ನನಗೆ ಗೊತ್ತಿರುವ ಹಾಗೆ, ಮೈನರ್ ಇರಿಗೇಷನ್ ಕೆಲಸ ವಾಗಲೀ, ಡ್ರೌಟ್ ಕೆಲಸವಾಗಲೀ ಇದರ ಬಗ್ಗೆ ಸರ್ಕಾರದ ನಿಲವು ತೆಗೆದುಕೊಂಡಿದೆ ಅದು ಏನೆಂದರೇ ಕಂಟ್ರ್ಯಾಕ್ಟ್ ಕೊಡದೇ ಸರ್ಕಾರದವರೇ ನೇರವಾಗಿ ಡಿಪಾರ್ಟ್‌ಮೆಂಟ್ ಮುಖಾಂತರ ಮಾಡಿಸಬೇಕೆಂದು ತೀರ್ಮಾನವಿದೆ. ಒಂದು ವೇಳೆ ಎಲ್ಲಿಯಾದರೂ ಲೋಪದೋಷಗಳು ಇರುವುದು ಮಾನ್ಯ ಸದಸ್ಯರ ಗಮನಕ್ಕೆ ಬಂದಿದ್ದರೆ ತಿಳಿಸಬಹುದು.

ಅಧ್ಯಕ್ಷರು.—ಯಾವ ಕಂಟ್ರ್ಯಾಕ್ಟರ್ ಮುಖಾಂತರ ಮಾಡಿಸಿದ್ದಾರೆ ಎನ್ನುವ ಬಗ್ಗೆ ತಮ್ಮ ಹತ್ತಿರ ಏನಾದರೂ ದಾಖಲಾತಿಗಳು ಇವೆಯೋ ?

ಶ್ರೀ ಎಂ. ಸಿ. ಬಸಪ್ಪ.—ಅದು ರಿಕಾರ್ಡ್‌ನಲ್ಲಿದೆ. ೩-೪ ರೂಪಾಯಿಗಳಷ್ಟು ಹಣ ಅವನಿಗೆ ಸೇರ ಬೇಕಾಗಿದ್ದರೆ ೧ ರೂಪಾಯಿ ಹನ್ನೆರಡು ಆಣೆ ಅವನಿಗೆ ಸೇರುತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದಕ್ಕೆ ಮಾನ್ಯ ಸಚಿವರಾದ ಶ್ರೀ ರಂಗನಾಥ್ ರವರು ಸರ್ಕಾರದ ನೀತಿ ಏನಿದೆ ಎನ್ನುವುದನ್ನು ತಿಳಿಸಿದ್ದಾರೆ. ಈಗ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಆ ರೀತಿ ಒಂದು ವೇಳೆ ಏನಾದರೂ ನಡೆದಿದ್ದಲ್ಲಿ, ಅದರ ದಾಖಲೆಗಳನ್ನು ಕಳುಹಿಸಿ ಕೊಡಿ ವಿಚಾರಣೆ ಮಾಡುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—೧೨೮ ತಾಲ್ಲೂಕುಗಳಲ್ಲಿ ನಮ್ಮ ಮೈಸೂರು ಜಿಲ್ಲೆಯ ೬-೭ ತಾಲೂಕು ಗಳೂ ಬರುತ್ತವೆ. ಇದರ ಬಗ್ಗೆ ತಮಗೆ ಏನಾದರೂ ಹೆಚ್ಚಿನ ವಿವರ ಬೇಕಾಗಿದ್ದರೆ ನಿಮ್ಮ ಬ್ಲಾಕ್ ಏಜೆನ್ಸಿ ನಿಮ್ಮ ಇಂಜಿನಿಯರಿಂಗ್ ಡಿಫಾರ್ಟ್‌ಮೆಂಟಿನವರನ್ನೇ ಕೇಳಿದರೆ ಕೊಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಎಲ್ಲಿ ಆ ರೀತಿ ನಡೆದಿದೆ ಎಂದು ಹೇಳಿದಿರಿ?

ಶ್ರೀ ಎಂ. ಸಿ. ಬಸಪ್ಪ.—ಮೈಸೂರು ಜಿಲ್ಲೆಯ ಕೆಲವು ಭಾಗದಲ್ಲಿ ಅನುಸರಿಸಿರತಕ್ಕದ್ದನ್ನು ನಾನು ಹೇಳುತ್ತಿದ್ದೇನೆ, ಅಲ್ಲಿ ಈ ಪೀಸ್ ವರ್ಕ್ ಪ್ಯಾಟ್ರನನ್ನು ಅಡಾಪ್ಟ್ ಮಾಡಿದ್ದಾರೆ. ಆದುದರಿಂದ ಇವತ್ತು ನೇರವಾಗಿ ಕೊಟ್ಟಿದ್ದ ಪಕ್ಷದಲ್ಲಿ ಅಭಾವ ಪರಿಸ್ಥಿತಿಗೆ ಒಳಗಾಗಿದ್ದ ಮನುಷ್ಯನಿಗೆ ಹಣ ಸರಿಯಾಗಿ ತಲುಪಿದ್ದರೆ ಒಳ್ಳೆಯ ಕೆಲಸವಾಗುತ್ತಿತ್ತು. ಆದರೆ ಆ ಕೆಲಸ ಇವತ್ತು ಆಗಲಿಲ್ಲ. ಇನ್ನು ಎರಡನೆಯದಾಗಿ ಸರ್ಕಾರದ ಆಹಾರ ದಾಸ್ತಾನು ಏನಿದೆ ಅಂತ ಹೇಳಿದ್ದಾರೆ. ಆ ರೀತಿ ಸರ್ಕಾರದಲಿ ಆಹಾರದ ದಾಸ್ತಾನು ಇದ್ದಂಥ ಕಾಲದಲ್ಲಿ ಕಳೆದ ವರ್ಷ ಅಭಾವ ಪರಿಸ್ಥಿತಿ ಕಾಲದಲ್ಲಿ, ಫುಡ್ ಫಾರ್ ವರ್ಕ್ ಪ್ರೋಗ್ರಾಂನಲ್ಲಿ ಕೆಲಸ ಮಾಡಿದವರಿಗೆ ಆಹಾರ ಧಾನ್ಯವನ್ನು ಕೊಡುವುದರ ಮುಖಾಂತರ ಫ್ಯಾಮಿಲಿ ರಿಲೀಫ್ ವರ್ಕ್ ತೆಗೆದುಕೊಂಡಿದ್ದರೆ...

ಶ್ರೀ ಎಂ. ಮಲ್ಲಪ್ಪ.—ಎಲ್ಲಾ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರಿಗೂ ಕೆಲಸಗಾರರಿಗೆ ಕೊಡಲು ಗೋಧಿ ಕೊಟ್ಟಿದ್ದೇವೆ, ಅಕ್ಕಿ ಕೊಟ್ಟಿದ್ದೇವೆ, ಇರತಕ್ಕಂಥ ದಾಸ್ತಾನು ಯಾವುದಿದೆ ಅದನ್ನು ಲೇಬರ್‌ಗೆ ಕೊಡಿಸಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ನನ್ನ ಅನುಭವದ ಪ್ರಕಾರ ಹೇಳುತ್ತಿದ್ದೇನೆ ಬಹುಶಃ ನಮ್ಮ ತಾಲ್ಲೂಕಿನಲ್ಲಿ ಫ್ಯಾಮಿಲಿ ರಿಲೀಫ್ ವರ್ಕ್ ಮಾಡಿಸಿದ್ದು ನಿಜ ಇಲ್ಲವೆಂದು ಹೇಳುವುದಿಲ್ಲ ಹಣ ಖರ್ಚಾಗಿದೆ ಫುಡ್ ಫಾರ್ ವರ್ಕ್ ಎಂದು ಏನು ಮಾಡಿದ್ದಾರೆ ಅಲ್ಲಿ ಪೀಸ್ ವರ್ಕ್ ಮುಖಾಂತರ ಮಾಡಿಸಲು ಒಬ್ಬ ಕಂಟ್ರಾಕ್ಟರಿಗೆ ಕೊಟ್ಟಿದ್ದಾರೆಂದು ನನಗೆ ವರದಿ ಬಂದಿದೆ. ತಾವು ಬೇಕಾದರೆ ತಮ್ಮ ಅಧಿಕಾರಿಗಳನ್ನು ವಿಚಾರಿಸಬಹುದು. ಆಹಾರ ಧಾನ್ಯವನ್ನು ಜನರಿಗೆ ಒದಗಿಸಬೇಕು ಎನ್ನತಕ್ಕ ಇಚ್ಛೆ ಸರ್ಕಾರಕ್ಕೆ ಇತ್ತು ಎನ್ನುವುದು ಮಾನ್ಯ ಸಚಿವರ ಹೇಳಿಕೆಯಿಂದ ಗೊತ್ತಾಗುತ್ತದೆ ಆದರೆ ಆ ರೀತಿಯಾಗಿ ಅಲ್ಲಿ ನಡೆದಿಲ್ಲ ಎನ್ನುವುದು ನನ್ನ ಅನುಭವಕ್ಕೆ ಬಂದಿದೆ, ಆ ರೀತಿ ಆಗಿದ್ದರೆ ಅಲ್ಲಿಯ ಜನಗಳಿಗೆ ಬಹಳ ಅನುಕೂಲವಾಗುತ್ತಿತ್ತು ಎಂದು ನಾನಾದರೂ ಹೇಳುತ್ತೇನೆ.

ಇನ್ನು ಅನೇಕ ಇಲಾಖೆಗಳ ವಿಚಾರಗಳನ್ನು ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಎಲ್ಲಾ ವಿಚಾರಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ಅದರಲ್ಲಿ ಮುಖ್ಯವಾಗಿ ವಿದ್ಯಾಭ್ಯಾಸಕ್ಕೆ ಸುಮಾರು ೧೩೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆಂದು ರಾಜ್ಯಪಾಲರು ಭಾಷಣದಲ್ಲಿ ಹೇಳಿಸಿದ್ದಾರೆ. ತಮಗೆ ಒಂದು ನಾನು ಪ್ರಶ್ನೆ ಮಾಡುತ್ತೇನೆ. ರಾಜ್ಯಾಂಗದಲ್ಲಿರುವ ಹಾಗೆ ತಾವು ಅಡಾಪ್ಟ್ ಮಾಡುವಂಥ ಸಂದರ್ಭದಲ್ಲಿ ೧೦ ವರ್ಷದೊಳಗೆ ಪ್ರತಿಯೊಬ್ಬರಿಗೂ ಪ್ರಾಥಮಿಕ ಫ್ರೀ ಎಜ್ಯುಕೇಷನ್ ಕೊಡತಕ್ಕದ್ದರ ಬಗ್ಗೆ ಏನು ಆಶ್ವಾಸನೆ ಕೊಟ್ಟಿದ್ದೀರಿ. ಅದರ ಬಗ್ಗೆ ಈ ದಿಶೆಯಲ್ಲಿ ತಾವು ಏನು ಸಾಧನೆ ಮಾಡಿದ್ದೀರಿ, ಇವತ್ತು ನಾವು ನೂರಕ್ಕೆ ಎಷ್ಟು ಜನ ವಿದ್ಯಾವಂತರಿದ್ದಾರೆ ಎಂದು ಕೇಳಬಯಸುತ್ತೇನೆ. ೧೩೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬಹುದು, ೨೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬಹುದು, ಆದರೆ ಸಾಧನೆ ಏನಾಗಿದೆ? ಇವತ್ತು ಏನು ವಿದ್ಯಾಭ್ಯಾಸವನ್ನು ನಮ್ಮ ಮಕ್ಕಳಿಗೆ ಕೊಡುತ್ತಿದ್ದೀರಿ, ಫ್ರೀ ಪ್ರೈಮರಿ ಎಜುಕೇಷನ್ ಬಗ್ಗೆ ಒಂದು ಉದಾಹರಣೆ ಕೊಡುವುದಾದರೆ ನಾನೊಂದು ಸ್ಕೂಲಿಗೆ ಹೋಗಿದ್ದೆ ಅಲ್ಲಿಯ ಸಂಖ್ಯೆ ೨೬೫. ಅಲ್ಲಿ ೭ನೇ ಸ್ಟ್ಯಾಂಡರ್ಡ್ ವರೆಗೆ ಇದೆ. ಅಲ್ಲಿ ಇರತಕ್ಕಂಥ ಮೂರೇ ಕೊಠಡಿಗಳಲ್ಲಿ ತರಗತಿಗಳನ್ನು ೭ ಜನ ಉಪಾಧ್ಯಾಯರುಗಳು ಮಾಡಬೇಕಾಗಿದೆ, ಅಂದರೆ ೩ ಜನ ಉಪಾಧ್ಯಾಯರು ೩ ಕೊಠಡಿಯಲ್ಲಿ ಪಾಠ ಮಾಡಬೇಕಾಗಿದೆ. ಅಂಗರೆ ಏನು ಸ್ಟ್ಯಾಂಡರ್ಡ್ ಆಫ್ ಎಜುಕೇಷನ್ ಮಕ್ಕಳಿಗೆ ಬರುತ್ತದೆ? ಈ ದಿಶೆಯಲ್ಲಿ ಅದನ್ನು ಪರಿಹಾರ ಮಾಡುವುದಕ್ಕೆ ತಾವೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ನಾವು ಈಗ ತಾನೇ ಬಹಳ ಗಂಭೀರವಾದ ವಿಚಾರವನ್ನು ಪ್ರಸ್ತಾಪ ಮಾಡಿದೆವು, ಇವತ್ತು ನಮ್ಮ ರಾಜ್ಯದಲ್ಲಿ ಹಲವಾರು ವಿಶ್ವವಿದ್ಯಾನಿಲಯಗಳು ಇವೆ, ನಾವು ಹುಡುಗರನ್ನು ವಿದ್ಯಾವಂತರನ್ನಾಗಿ ಮಾಡುತ್ತಿದ್ದೇವೆ. ಆದರೆ ಈ ರೀತಿಯಾಗಿ ವಿಶ್ವವಿದ್ಯಾನಿಲಯಗಳೇ ವಿದ್ಯಾಭ್ಯಾಸವನ್ನು ಕೊಡುತ್ತಿರುವುದರಿಂದ ಅದರಿಂದ ನಮಗೆ ಏನು ಅನುಕೂಲವಾಗುತ್ತಿದೆ? There must be a radical change in the educational system. ಇವತ್ತು ಏನಾಗಿದೆ? ಈ ದಿಶೆಯಲ್ಲಿ ಏನು ಸಾಧನೆ ಮಾಡಿದ್ದೀರಿ ಎಂದು ಪ್ರಶ್ನೆ ಮಾಡುತ್ತೇನೆ. ಇವತ್ತು ನಾವು ಮೈಸೂರು ಯೂನಿವರ್ಸಿಟಿಯಲ್ಲಿ ವೈಸ್ ಚಾನ್ಸಲರ್ ಅನ್ಯಾಯ ಮಾಡಿದ್ದಾರೆಂದು ಒಂದು ಎನ್‌ಕ್ವೈರಿ ನೇಮಕ ಮಾಡುವುದು, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮಾಲ್‌ಪ್ರಾಕ್ಟೀಸಸ್ ನಡೆದಿದೆ ಅದಕ್ಕೊಂದು ಎನ್‌ಕ್ವೈರಿ ಮಾಡುತ್ತಿದ್ದೇವೆ, ಇಷ್ಟೊಂದು ಯೂನಿವರ್ಸಿಟಿಗಳನ್ನು ಮಾಡಿ ಇಷ್ಟೊಂದು ಕೋಟ್ಯಾಂತರ ರೂಪಾಯಿಗಳನ್ನು ವ್ಯಯ ಮಾಡಿದ್ದರೂ ಅದರಿಂದ ನಮಗಾಗಿರತಕ್ಕಂಥ ಅನುಕೂಲ, ಮತ್ತು ಸಾಧನೆಯಾದರೂ ಏನು ಎಂದು ನಾನು ಪ್ರಶ್ನೆ ಮಾಡಬಯಸುತ್ತೇನೆ. ವಿದ್ಯಾಭ್ಯಾಸದ ಗುಣಮಟ್ಟವನ್ನು ಹೆಚ್ಚಿಸಿ ಎಲ್ಲರಿಗೂ ಮುಫತ್ತಾಗಿ ಪ್ರೈಮರಿ ಎಜ್ಯುಕೇಷನ್ ಕೊಡಿ, ಸೆಕೆಂಡರಿ ಎಜುಕೇಷನ್, ಹೈಯರ್ ಎಜುಕೇಷನ್ ನಮ್ಮ ದೇಶಕ್ಕೆ ಬಹಳ ಅಗತ್ಯವಿದೆ. ಇವತ್ತು ನಾನ್ ಎಂಪ್ಲಾಯ್ಡ್ ಟೆಕ್ನಿಕಲ್ ಗ್ರಾಜ್ಯುಯೇಟ್ಸ್ ಬಹಳ ಜನ ಇದ್ದಾರೆ. Unless the education system is re-oriented and unless it is job-oriented ಈ ದಿಶೆಯಲ್ಲಿ ಸಾಧನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಪ್ರಶ್ನೆ ಮಾಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ಮತ್ತೆ ಕೆಲವು ಕಾರ್ಯಕ್ರಮಗಳ ಬಗ್ಗೆ, ವಿಶೇಷವಾಗಿ ಹೇಳಿದ್ದಾರೆ ಹಳ್ಳಿಗಾಡಿನಲ್ಲಿ ಸೈಟುಗಳನ್ನು ಹಂಚಿದ್ದೇವೆಂದು ಹೇಳಿದ್ದಾರೆ. ಮತ್ತೆ ಕುಡಿಯುವ ನೀರಿನ ಕೊಳವೆ ಭಾವಿಗಳನ್ನು ಮತ್ತು ವೃದ್ಧರಿಗೆ ಪೆನ್‌ಷನ್ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ನಾನು ತಮಗೊಂದು ಪ್ರಶ್ನೆ ಮಾಡಬಯಸುತ್ತೇನೆ. ಕಷ್ಟದಲ್ಲಿರತಕ್ಕಂಥವರಿಗೆ ಒಂದು ರಿಲೀಫ್ ಕೊಡಿ, ಇವತ್ತು ಸೈಟ್ ಇಲ್ಲದವರೆಗೆ ಒಂದು ವಾಸಕ್ಕೆ ಸೈಟ್ ಕೊಡಿ, ಜೀವನಕ್ಕೆ ಮಾರ್ಗ ಇಲ್ಲದವರಿಗೆ ಪೆನ್‌ಷನ್ ಕೊಡಬೇಕು ಅದು ಒಂದು ಮಾರ್ಗ ಆದರೆ ಇವತ್ತು ದೇಶದ ಉತ್ಪನ್ನವನ್ನು ಜಾಸ್ತಿ ಮಾಡಿದ ಹಾಗೆ ಆಗುತ್ತಿದೆಯೇ?......

ಇವತ್ತು ಅಗ್ರಿಕಲ್ಚರ್‌ಗೆ ನಮ್ಮ ದೇಶದಲ್ಲಿ ಎಷ್ಟರಮಟ್ಟಿನ ಪ್ರಾಧಾನ್ಯತೆ ಕೊಟ್ಟಿದ್ದಾರೆ ಎನ್ನುವುದನ್ನು ನೋಡಿದರೆ ಅದು ಯಾವ ರೀತಿಯಿಂದಲೂ ಸಮಂಜಸವಾಗಿಲ್ಲ. ಕಾರಣವಾದರೂ ಇಷ್ಟೆ. ಸುಮಾರು ಶೇಕಡ ೮೦ರಷ್ಟು ಜನ ಹಳ್ಳಿಗಳಲ್ಲಿ ವಾಸಮಾಡುವವರು ಜೊತೆಗೆ ವ್ಯವಸಾಯ ಕಸುಬಿನಿಂದಲೆ ಜೀವನ ಮಾಡುವವರಿದ್ದಾರೆಂದರೆ ತಪ್ಪಾಗಲಾರದು. ವ್ಯವಸಾಯ ಅಭಿವೃದ್ಧಿ ಆಗಬೇಕು, ಹಳ್ಳಿಗಾಡಿನ ಜನಜೀವನ ಮಟ್ಟ ಜಾಸ್ತಿಯಾಗಬೇಕಾದರೆ. ತಾವು ಸಾಧನೆ ಮಾಡಿರತಕ್ಕದ್ದು ನೋಡಿದರೆ ಬಹಳ ಕಡಿಮೆ ಆದರೆ ಚುನಾವಣೆ ದೃಷ್ಟಿಯಿಂದಲೋ ಅಥವಾ ನಿಮ್ಮ ಪಕ್ಷದ ಹಿತದೃಷ್ಟಿಯಿಂದಲೋ ಜನರಿಗೆ ಬೇಕಾದಷ್ಟು ಸಹಾಯವನ್ನು ಮಾಡಿದ್ದೇವೆಂದು ಹೇಳಿಕೊಂಡು ಬರುತ್ತಿದ್ದೀರಿ. ಸುಮಾರು ಎರಡುವರೆ ಲಕ್ಷ ಸೈಟುಗಳನ್ನು ಹಂಚಿದ್ದೇವೆಂದು ಹೇಳುತ್ತೀರಿ. ಅದರಿಂದ ರೈತನ ಜೀವನಮಟ್ಟ ಏರಿದೆಯೇ? ರೈತನ ಮತ್ತು ರೈತ ಕೂಲಿಗಾರನ ವರಮಾನವನ್ನು ದಿವಸಕ್ಕೆ ಒಂದೂವರೆ ರೂಪಾಯಿನಿಂದ ೫ ರೂಪಾಯಿ

ಗಳಿಗ ಬರುವಂತೆ ಮಾಡಿದರೆ ಅವರಿಗೆ ಸ್ವಲ್ಪಮಟ್ಟಿನ ಸಹಾಯವಾಗುತ್ತದೆ. ರೈತನ ಅಭಿವೃದ್ಧಿ ಆಗ ಬೇಕಾದರೆ ವ್ಯವಸಾಯದ ಅಭಿವೃದ್ಧಿಯಾಗಬೇಕು, ವ್ಯವಸಾಯದ ಅಭಿವೃದ್ಧಿಯಾಗಬೇಕಾದರೆ ಇರ್ರಿ ಗೇಷನ್ ಫೆಸಿಲಿಟೀಸ್ ಜಾಸ್ತಿ ಕೊಡಬೇಕು, ಅಂದರೆ ಒಳ್ಳೆಯ ತಳಿ ಬೀಜಗಳನ್ನು, ರಸಾಯನಿಕ ಗೊಬ್ಬರ ಹಾಗೂ ಸಕಾಲದಲ್ಲಿ ಅವನಿಗೆ ಸಾಲದ ಸೌಲಭ್ಯ ಈ ಮೂರು ಮುಖ್ಯವಾದ ವಿಚಾರಗಳನ್ನು ಗಮನಿಸಿ ಸಹಾಯ ಮಾಡಿದರೆ ವ್ಯವಸಾಯದ ಅಭಿವೃದ್ಧಿಯಾಗುತ್ತದೆ. ಮುಖ್ಯವಾಗಿ ಸಕಾಲದಲ್ಲಿ ಅವನಿಗೆ ಸಾಲ ಸಿಕ್ಕುವಂತೆ ಹಣ ಸಹಾಯ ಮಾಡಿದರೆ ಅನುಕೂಲವಾಗುತ್ತದೆ. ಕಳೆದ ೨೦ ವರ್ಷಗಳಿಂದ ಇರ್ರಿಗೇಷನ್ ೭ ಪರ್ಸೆಂಟ್‌ನಿಂದ ೧೩ ಪರ್ಸೆಂಟ್‌ಗೆ ತಂದಿದ್ದೀರಿ? ಮೊನ್ನೆತಾನೆ ಮಾನ್ಯ ವಿರೋಧಪಕ್ಷದ ನಾಯಕರಾದ ಬೊಮ್ಮಾಯಿಯವರು ಹೇಳಿದ್ದಾರೆ, ತಾವು ಏನು ಹೇಳಿದ್ದೀರಿ ಎಂದರೆ ೧೯೭೨ನೇ ಇಸವಿಯಲ್ಲಿ ಮಾನ್ಯ ಘೋರ್ಪಡೆಯವರು ಬಜೆಟ್ ಭಾಷಣ ಮಾಡುವಾಗ ಏನು ಹೇಳಿದ್ದಾರೆಂದರೆ ಎರಾ ಆಫ್ ಕಾನ್‌ಫ್ರಂ ಟೇಷನ್ ಅಂಡ್ ಎರಾ ಆಫ್ ಕೋ ಆಪರೇಷನ್ ಎಂದು ಹೇಳಿದ್ದನ್ನು ಅವರು ಪ್ರಶ್ನೆ ಮಾಡಿದರು. ತಾವು ಎಷ್ಟು ಪ್ರಾಜೆಕ್ಟ್‌ಗೆ ಕ್ಲಿಯರೆನ್ಸ್ ತಂದಿದ್ದೀರಿ? ತಾವು ಕ್ಲೀಯರೆನ್ಸ್ ತಂದಿದ್ದರೆ ಕೇಂದ್ರದಿಂದ ಫೈನಾನ್ಸ್ ಮಾಡುತ್ತಿದ್ದರು. ಇವತ್ತು ತಾವು ಕ್ಲೀಯರೆನ್ಸ್ ತರದೇ ಇರುವುದರಿಂದ ನಿಮ್ಮ ಸ್ವಂತ ರಿಸೋರ್ಸ್‌ನಿಂದ ನಿಮ್ಮ ಪ್ರಾಜೆಕ್ಟ್‌ಗಳನ್ನು ಕಂಪ್ಲೀಟ್ ಮಾಡಿಕೊಳ್ಳಿ ಎಂದು ಅವರು ಹೇಳುತ್ತಿದ್ದಾರೆ. ಕಬಿನಿ ಪ್ರಾಜೆಕ್ಟ್‌ನಲ್ಲಿ ೧೦ ವರ್ಷಗಳಿಂದ ಕೆಲಸ ಮಾಡಿದರೂ ಕೂಡ ಅದರಿಂದ ಕುಡಿಯುವುದಕ್ಕೆ ನೀರು ಕೊಡಲು ಸಾಧ್ಯವಾಗಿದೆಯೋ ಹೊರತು ವ್ಯವಸಾಯಕ್ಕೆ ಆಗಲಿ ಅಥವಾ ವಿದ್ಯುಚ್ಛಕ್ತಿಗಾಗಲಿ ಪ್ರಯೋಜನ ವಾಗಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್ ದೆಹಲಿ ಯಲ್ಲಿ ನಡೆಯುತ್ತಿದೆ. ಅಲ್ಲಿ ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳು ಭಾಗವಹಿಸುತ್ತಿದ್ದಾರೆ, ಅದರಲೂ ಕೂಡ ಜನತಾ ಪಕ್ಷದ ಮುಖ್ಯಮಂತ್ರಿಗಳು ಕೂಡ ಕೇಂದ್ರದಿಂದ ರಾಜ್ಯಸರ್ಕಾರಗಳಿಗೆ ಧನಸಹಾಯ ಬರದೆ ಹೋದರೆ ತೊಂದರೆ ಆಗುತ್ತದೆಂದು ಮಾತನಾಡುತ್ತಿದ್ದಾರೆ. ಅದರಲ್ಲೂ ಮಾನ್ಯ ಶ್ರೀ ಕರ್ಪೂರಿ ಟಾಕೂರ್ ಅವರು ವೆಹಿಮೆಂಟ್ ಆಗಿ ಪ್ರಸ್ತಾಪ ಮಾಡಿದ್ದಾರೆಂದು ನಾನು ಪತ್ರಿಕೆಯಲ್ಲಿ ನೋಡಿದ್ದೇನೆ. ನಮ್ಮ ರಾಜ್ಯದ ಹಣಕಾಸು ಸಚಿವರು ಹೋಗಿದ್ದರು. ಆದರೆ ತಾವು ಹೇಳುವುದು ಕ್ಲೀಯರೆನ್ಸ್ ತಂದಿ ದ್ದರೆ ಹೆಚ್ಚು ಹಣ ಬರುತ್ತಾ ಇತ್ತು ಎಂದು ಹೇಳುತ್ತಿದ್ದೀರಿ? ಆದರೆ ಅದಕ್ಕೆನಾದರೂ ಗ್ಯಾರಂಟಿ ಇದೆಯೇ? ತಾವು ಹೇಳುವ ರೀತಿ ಎರಾ ಆಫ್ ಕಾನ್‌ಫ್ರಂಟೇಷನ್ ಬಗ್ಗೆ ಈಗ ಕೇಂದ್ರದಲ್ಲಿ ತಮ್ಮ ಸರ್ಕಾರ ಬಂದಿದೆ ತಾವು ಏನಾದರೂ ಶಿಫಾರಸ್ಸು ಮಾಡಿ ಕೊಡಿಸಿ. ತಾವು ಕೊಡಿಸಿದರೆ ನಮ್ಮ ಸರ್ಕಾರ ಬಂದ ಮೇಲೆ ಇಷ್ಟು ಜಾಸ್ತಿ ಕೊಟ್ಟಿದೆಯೆಂದು ತಾವು ಹೇಳಬಹುದು?

ಶ್ರೀ ಎಂ. ಸಿ. ಬಸಪ್ಪ.—ಸೆಂಟ್ರಲ್ ಕೋಟಾ ಏನು ಕೊಡಬೇಕೋ ಅದನ್ನು ಕೊಡುತ್ತಾರೆ?

ಶ್ರೀ ಕ. ಎಚ್. ರಂಗನಾಥ್.—ನಮ್ಮ ಸರ್ಕಾರದ ನೀತಿಯಾದರೂ ಇಷ್ಟೆ. ವ್ಯವಸಾಯಕ್ಕೆ ಬೇಕಾ ದಂತಹ ನೀರಾವರಿ ಮಾಡುವುದಕ್ಕೆ ನಮ್ಮ ರಾಜ್ಯದ ಆದಾಯದಲ್ಲಿ ಸಿಂಹಪಾಲು ಇದಕ್ಕೆ ವಹಿಸಿಕೊಂಡಿ ದ್ದೇವೆ. ಈಗ ಅದಕ್ಕೆ ತೊಂದರೆ ಆಗಿದೆ ಎಂದು ಕಂಡುಬಂದಿರುವುದರಿಂದ ನೀರಾವರಿಗೋಸ್ಕರ ಹೆಚ್ಚು ಆದ್ಯತೆ ಕೊಟ್ಟು ನಾವು ಕೆಲಸ ಮಾಡುತ್ತಿದ್ದೇವೆ. ಮಾನ್ಯ ಬಸಪ್ಪನವರಿಗೂ ಗೊತ್ತು. ಆದರೆ ಅವರು ತುಂಬು ಮನಸ್ಸಿನಿಂದ ಹೇಳುತ್ತಿಲ್ಲ. ಆದರೆ ಏನೋ ಹೇಳಬೇಕು ಎನ್ನುವ ಮನಸ್ಸಿನಿಂದ ಹೇಳುತ್ತಿದ್ದಾ ರೆಂದು ನಾನು ತಿಳಿದಿದ್ದೇನೆ. ನಾನು ಅವರು ಕೂಡಾ ಒಟ್ಟಿಗೆ ಕುಳಿತು ಕೆಲಸ ಮಾಡಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ತಮ್ಮ ಸರ್ಕಾರದವರು ಎರಾ ಆಫ್ ಕಾನ್‌ಫ್ರಂಟೇಷನ್ ಎಂದು ಏನು ಹೇಳುತಿದ್ದರು ಅದನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಕಬಿನಿ, ಹಾರಂಗಿ, ಹೇಮಾವತಿ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಿರಿ ಅದು ಯಾವ ಸ್ಟೇಜ್‌ನಲ್ಲಿ ಇದೆಯೆನ್ನುವ ವಿಚಾರದಲ್ಲಿ ನಮ್ಮ ಲೀಡರ್ ಅವರು ಪಾಯಿಂಟ್ ಔಟ್ ಮಾಡಿ ಹೇಳಿದ್ದಾರೆ. ತಮಗೆ ಬೇಕಾದರೆ ಕೊಡುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಹೇಮಾವತಿಗೆ ದುಡ್ಡು ಇಲ್ಲದೆ ನಾವು ಕೆಲಸವನ್ನು ನಿಲ್ಲಿಸಿಲ್ಲ ಕಲಸ ಪ್ರಾರಂಭಿಸಲಾಗುತ್ತದೆ. ಆದರೆ ಇನ್ನು ಹತ್ತು ಕೋಟಿಯನ್ನು ಖರ್ಚುಮಾಡಲು ಇದೆ ಆದರೂ ಈಗ ಅದರ ಬಗ್ಗೆ ಹೊಡೆದಾಟ ಆಗುವ ಮಟ್ಟಕ್ಕೆ ಬಂದಿದೆ. ಅದು ಯಾವ ಸ್ಟೇಜ್‌ನಲ್ಲೇ ಇರಲಿ, ಕ್ಲೀಯರೆನ್ಸ್ ಬರಲಿ ಬರದೆ ಇರಲಿ ಯಾವ ಕೆಲಸವನ್ನು ನಿಲ್ಲಿಸುವುದಿಲ್ಲ, ಆದರೆ ತಾವು ಯಾರಾದರೂ ಮುಂದೆ ಬಂದು ಜನತೆಯ ಹಿತದೃಷ್ಟಿಯಿಂದ ತಮ್ಮ ಸರ್ಕಾರ ಕೇಂದ್ರದಲ್ಲಿದೆ, ತಾವು ಹೇಳಿ ಕೊಡಿಸುತ್ತೇ ವೆಂದು ಹೇಳಿದರೆ ನಮ್ಮ ಮಂತ್ರಿಯವರನ್ನು ಕಳುಹಿಸುತ್ತೇನೆ,

ಶ್ರೀ ಪಾಟೀಲ್,—ರಾಜ್ಯದ ಹಿತದೃಷ್ಟಿ ಬಂದಾಗ ನಿಮಗಿಂತ ಹೆಚ್ಚಿಗೆ ಹಣ ತರುತ್ತೇವೆ. ಈಗ ನಿಮ್ಮ ಕೈಯಲ್ಲಿ ಇದೆ.

ಶ್ರೀ ಎಂ. ಸಿ. ಬಸಪ್ಪ,—ನಮ್ಮ ರಾಜ್ಯದಲ್ಲಿ ಇನ್ನು ಇರ್ರಿಗೇಷನ್ ೧೩ ಪರ್ಸೆಂಟ್ ಇದೆ. ಅದನ್ನು ಸರಿಯಾದ ರೀತಿಯಲ್ಲಿ ಮಾಡಿದ್ದರೆ ೨೦ ರಿಂದ ೨೫ರ ವರೆಗೆ ಹೋಗಬಹುದಿತ್ತು. ಮುಖ್ಯವಾಗಿ ನಾನು ಹೇಳುವುದೇನೆಂದರೆ ಕ್ರೆಡಿಟ್ ಟು ದಿ ಫಾರ್ಮರ್ ಎಂದು ತಾವು ಏನು ಸಹಕಾರಿ ಮಂತ್ರಿಗಳಾಗಿದ್ದಿರಿ ಆಗ ಹೇಳಿದ್ದೆ ಅದು ಇನ್ನು ಕಾರ್ಯಗತವಾಗಿಲ್ಲ. ನಾನು ಹೇಳುವುದು ಇಷ್ಟೆ ಸಹಕಾರಿ ಸಂಘಗಳನ್ನು ಸರಕಾರಿ ಸಂಘಗಳನ್ನಾಗಿ ಮಾಡಬೇಡಿ ಎಂದು ಹೇಳಿದ್ದೇನೆ.

ಒಬ್ಬೊಬ್ಬ ಮಂತ್ರಿಗಳನ್ನು ಒಂದೊಂದು ಜಿಲ್ಲೆಗೆ ಕಳಿಸಿದಿರಿ. ನಾವು ಮಾನ್ಯ ಚನ್ನಬಸಪ್ಪನವರನ್ನು ಹೋಗಿ ನೋಡಿದೆವು. ಸಹಕಾರ ಸಂಘಗಳು ನಡೆದುಕೊಂಡು ಹೋಗುತ್ತಿವೆ, ಏನಾದರೂ ಅನ್ಯಾಯಗಳಾಗಿದ್ದರೆ ಅಧಿಕಾರಿಗಳಿಗೆ ಹೇಳಿ, ಅವರು ಅವನ್ನು ಸರಿಮಾಡುತ್ತಾರೆ. ಸಹಕಾರ ಸಂಘಗಳನ್ನು ಸೂಪರ್‌ಸೀಡ್ ಮಾಡುವ ಪವರ್ ಇದೆ, ಆದರೆ ಅದು ಸಾಧ್ಯವಿಲ್ಲವೆಂದು ಹೇಳಿದರು. ಆ ಸಹಕಾರ ಸಂಘಗಳಿಗೆ ನೀವು ಹೇಳಿದಂತಹ ಮನುಷ್ಯನೇ ಡೈರೆಕ್ಟರ್ ಆಗಬೇಕು, ಅವನು ನಿಮ್ಮ ಪಕ್ಷದವನೇ ಆಗಬೇಕು, ಈ ರೀತಿ ಏತಕ್ಕೆ ಮಾಡಿದಿರಿ? ಇವತ್ತಿನ ದಿವಸ ಕೋ-ಆಪರೇಟಿವ್ ಖಾತೆ ನಿಮ್ಮ ಹತ್ತಿರವಿಲ್ಲ. ಆದರೂ ಹಿಂದೆ ಏನೇನು ಸಾಧನೆ ಮಾಡಿದ್ದೀರಿ ಎಂದು ಕೇಳುವುದಕ್ಕೆ ಬಯಸುತ್ತೇನೆ. ಇವತ್ತು ೧೧೧ ಸಿರಿಕಲ್ಚರ್ ಸರ್ವೀಸ್ ಕಮ್ ಕೋ-ಆಪರೇಟಿವ್ ಸೊಸೈಟಿಗಳ ಬಗ್ಗೆ ನಾವು ಕೇಳುತ್ತಿದ್ದೇವೆ. ಅಲ್ಲಿ ಒಬ್ಬೊಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್, ಮ್ಯಾನೇಜಿಂಗ್ ಡೈರೆಕ್ಟರ್‌ಗಳನ್ನು ಹಾಕಿದ್ದೀರಿ. ಹಿಂದೆ ಸೊಸೈಟಿಗಳು ಏನು ಕೆಲಸ ಮಾಡುತ್ತಿದ್ದವೋ ಅದಕ್ಕಿಂತ ಹೆಚ್ಚಿನ ಪ್ರಗತಿಯನ್ನು ಏನು ಸಾಧನೆ ಮಾಡಿದ್ದೀರಿ ನೀವು? ೪-೫ ಊರುಗಳನ್ನು ಒಂದು ಕಡೆ ಸೇರಿಸಿದ್ದೀರಿ. ಆದರೆ ಅವರಿಗೆ ಸೀಡ್ಸ್ ಸಪ್ಲೈ ಆಗುತ್ತಾ ಇಲ್ಲ, ಯಾವ ಕ್ರೆಡಿಟ್ ಸಹ ಸಿಕ್ಕುತ್ತಾ ಇಲ್ಲ.

3–00 P. M.

ಶ್ರೀ ಕೆ. ಎಚ್. ರಂಗನಾಥ್.—ಇವತ್ತಿನ ದಿವಸ ಸಹಕಾರ ಸಂಘಗಳಿಂದ ಫಾರ್ಮರ್ಸ್ ಏನು ಕ್ರೆಡಿಟ್ಸ್‌ಗಳನ್ನು ಪಡೆಯಬೇಕೋ ಆದನ್ನು ಅವರು ಪಡೆಯುತ್ತಾ ಇಲ್ಲ ಎಂದು ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಯೋ ಅದನ್ನು ನಾನು ಒಪ್ಪುತ್ತೇನೆ. ಅದಕ್ಕೆ ಕಾರಣ ಏನೆಂದರೆ ರಾಷ್ಟ್ರೀಕೃತ ಬ್ಯಾಂಕುಗಳ ಮನೋಭಾವನೆ ಸರಿಯಾಗಿ ಇಲ್ಲದೇ ಇರುವುದು. ಸಿರಿಕಲ್ಚರ್ ಸರ್ವೀಸ್ ಕಮ್ ಕೋ-ಆಪರೇಟಿವ್ ಸೊಸೈಗಳನ್ನೂ, ಸಿರಿಕಲ್ಚರ್ ಕೋ-ಆಪರೇಟಿವ್ ಸೊಸೈಟಿಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳಿಗೆ ನಾವು ಸೇರಿಸಿದ್ದೇವೆ. ಅವರೇ ರೈತರಿಗೆ ಹಣವನ್ನು ಒದಗಿಸಬೇಕು. ಅವರಿಗೆ ಬೇಕಾದಷ್ಟನ್ನು ರಾಷ್ಟ್ರೀಕೃತ ಬ್ಯಾಂಕುಗಳು ಕೊಡದೇ ಇರುವುದರಿಂದ ಇವತ್ತು ತೊಂದರೆಯಾಗುತ್ತಾ ಇದೆ. ಇವತ್ತು ಹಳ್ಳಿಗಾಡಿನ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಇರತಕ್ಕಂಥ ಡಿಪಾಸಿಟ್‌ಗಳನ್ನು ಮತ್ತು ಪಟ್ಟಣದಲ್ಲಿ ಬ್ಯಾಂಕ್‌ಗಳಲ್ಲಿ ಇರುತಕ್ಕಂಥ ಡಿಪಾಸಿಟ್‌ಗಳನ್ನು ನಾವು ನೋಡಿದರೆ ಹಳ್ಳಿಗಾಡಿನಲ್ಲಿರುವ ಬ್ಯಾಂಕ್‌ಗಳಲ್ಲಿ ಇರತಕ್ಕಂಥ ಡಿಪಾಜಿಟ್ ಬಹುಪಾಲು ಇದೆ. ಇವತ್ತು ೧೦ ಪರ್ಸೆಂಟ್ ಸಾಲ ಕೊಡುವ ವ್ಯವಸ್ಥೆ ಮಾಡಿದರೆ ಮಾನ್ಯ ಸದಸ್ಯರು ಏನು ಒಂದು ಕಳಕಳಿಯನ್ನು ವ್ಯಕ್ತ ಮಾಡುತ್ತಿದ್ದಾರೋ ಅದನ್ನು ಪೂರೈಕೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ವಿಚಾರವನ್ನು ನಾವು ಸಹ ತೀವ್ರವಾಗಿ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ, ಸರ್ಕಾರದವರೂ ಸಹ ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇವರಲ್ಲಿ ಮಾನ್ಯ ಸದಸ್ಯರೂ ಕೂಡ ಸಹಾಯ ಮಾಡಬೇಕಾಗುತ್ತದೆ The unhelpful attitude on the part of the Nationalised Banks itself is more responsible for these unhappy things.

ಶ್ರೀ ಪಿ. ರಾಮದೇವ್.—ರೂರಲ್ ಬ್ಯಾಂಕ್‌ಗಳ ಬಗ್ಗೆ ಏನು ಮಾಡಿದ್ದೀರಿ ಸ್ವಾಮಿ?

ಶ್ರೀ ಕೆ. ಎಚ್. ರಂಗನಾಥ್.—ಸರ್ಕಾರದವರು ಏನೇನು ಮಾಡಿದ್ದಾರೆ ಎನ್ನುವ ಬಗ್ಗೆ ಇನ್‌ಫರ್ಮೇಷನ್ ಬೇಕಾದರೆ ಕೊಡುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—I am happy that the Minister is aware that the Societies are not functioning well. ಈಗ ತಾವು ಡೆಪ್ಯುಟಿ ರಿಜಿಸ್ಟ್ರಾರ್, ಅಸಿಸ್ಟೆಂಟ್ ರಿಜಿಸ್ಟ್ರಾರ್, ಮ್ಯಾನೇಜಿಂಗ್ ಡೈರೆಕ್ಟರ್, ಸೀನಿಯರ್ ಆಡಿಟರ್ಸ್ ಈ ರೀತಿ ಒಬ್ಬೊಬ್ಬರನ್ನೂ

ಒಂದೊಂದು ಕಡೆ ಹಾಕಿದ್ದೀರಿ. ಅವರಿಂದ ತಾವು ರಿಪೋರ್ಟ್ ತರಿಸಿಕೊಂಡು ನೋಡಿ; ಈ ೧೧೧ ಸಿರಿಕಲ್ಚರ್ ಕವರ್ ಫಾರ್ವರ್ಡ್ಸ್ ಕೋ-ಆಪರೇಟಿವ್ ಸೊಸೈಟಿಗಳ ಪ್ರಗತಿ, ಅಮಾಲ್ಗಮೇಷನ್ ಮಾಡುವುದಕ್ಕೆ ಮುಂಚೆ ಹೇಗಿತ್ತು? ಈಗ ಹೇಗಿದೆ, ರೈತನ ಹಿತಸಾಧನೆ ಮಾಡಿದ್ದು ಏನು ಎಂಬುದನ್ನು ಅವರಿಂದ ರಿಪೋರ್ಟ್ ತರಿಸಿಕೊಂಡು ನೋಡಿ. ಒಂದು ಕಡೆ ನ್ಯಾಷನಲೈಸ್ಡ್ ಬ್ಯಾಂಕ್‌ಗಳಿಂದ ಸಹಾಯ ಬಾರದೆ ಇರತಕ್ಕಂಥಾದ್ದು ಒಂದು ಪ್ರಶ್ನೆ ಮತ್ತೆ ಈ ಕೋ-ಆಪರೇಟಿವ್ ಸೊಸೈಟಿಗಳು ಸರಿಯಾಗಿ ಕೆಲಸ ಮಾಡದೇ ಇರತಕ್ಕಂಥಾದ್ದು ಎರಡನೇ ಪ್ರಶ್ನೆ. ಇವೆಲ್ಲವನ್ನು ಅವಲೋಕನ ಮಾಡುವುದಾದರೆ ಸರ್ಕಾರ ಈ ದಿಶೆಯಲ್ಲಿ ತಪ್ಪು ಮಾಡಿದೆ, ಅಮಾಲ್ಗಮೇಷನ್ ಮಾಡಬಾರದಾಗಿತ್ತು, ಸೊಸೈಟಿಗಳು ಹಾಗೆಯೇ ಬೆಳೆಯುವುದಕ್ಕೆ ಬಿಡಬೇಕಾಗಿತ್ತು ಎಂದು ಅನ್ನಿಸುತ್ತದೆ. ಸೊಸೈಟಿಗಳಲ್ಲಿ ಯಾವುದೇ ರೀತಿಯ ಅನ್ಯಾಯಗಳು ಆಗದಿದ್ದರೆ ಕಲಮ್‌ಗಳ ಕೆಳಗೆ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಬರುತ್ತಿತ್ತು. ಅಮಾಲ್ಗಮೇಷನ್ ಮಾಡಿ ಸಹಕಾರ ಸಂಘಗಳನ್ನು ಬೆಳೆಸುವುದಕ್ಕೆ ಹೋದದ್ದು ತಪ್ಪಾಯಿತು.

ಶ್ರೀ ಕೆ. ಎಚ್. ರಂಗನಾಥ್.—ಶ್ರೀ ಬಸಪ್ಪನವರು ಸಾಮಾನ್ಯವಾಗಿ ಹಾಗೆ ಮಾತನಾಡುವುದಿಲ್ಲ. ಈಗ ಏತಕ್ಕೆ ಹಾಗೆ ಮಾತನಾಡುತ್ತಿದ್ದಾರೆಯೋ ಗೊತ್ತಿಲ್ಲ.

ಶ್ರೀ ಎಂ. ಸಿ. ಬಸಪ್ಪ.—ಇದ್ದ ವಿಚಾರವನ್ನು ನಾನು ಮಾತನಾಡುತ್ತಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—ತಾವು ಅಮಾಲ್ಗಮೇಷನ್ ಮಾಡಿರುವುದು ತಪ್ಪು ಎಂದು ಹೇಳುವುದನ್ನು ಹೈಕೋರ್ಟ್ ಆ ರೀತಿ ಹೇಳಿಲ್ಲ.

ಶ್ರೀ ಎಂ. ಸಿ. ಬಸಪ್ಪ.—ಹೇಳಿದೆ.

ಶ್ರೀ ಕೆ. ಎಚ್. ರಂಗನಾಥ್.—ಸೆಕ್ಷನ್ ೧೪(ಎ) ಯಾವುದಿದೆ ಅದು ಸಹಕಾರ ಸಂಘಗಳನ್ನು ಪುನರ್ರಚನೆ ಮಾಡುವುದಕ್ಕೆ ಅವಕಾಶ ಕೊಡುತ್ತದೆ. ಈ ಸೆಕ್ಷನ್ ಕಾನೂನು ಬದ್ಧವಾಗಿ ಇದೆ, ಸರಿಯಾಗಿದೆ ಎಂದು ಹೇಳಿದ್ದಾರೆ. ಇದನ್ನು ಏತಕ್ಕೆ ಹೇಳಿದ್ದಾರೆ ಎಂದರೆ ಕೊನೆಯಪಕ್ಷ ೨ ಲಕ್ಷ ರೂಪಾಯಿಗಳ ಅವ್ಯವಹಾರವನ್ನು ಮಾಡದೇ ಇರತಕ್ಕಂಥ ಸಹಕಾರ ಸಂಘಗಳು ಏನಿವೆ, ರೈತನಿಗೆ ಈ ಸಾಲದ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲದೇ ಇರುವ, ಸಂಘಗಳು ಏನಿವೆ ಈ ಸಹಕಾರ ಸಂಘಗಳನ್ನು ಪುನರ್ರಚನೆ ಮಾಡಬೇಕು ಎಂದು ರಿಸರ್ವ್ ಬ್ಯಾಂಕಿನ ಆದೇಶದ ಮೇಲೆ ಮತ್ತು ಕೇಂದ್ರ ಸರ್ಕಾರದವರ ಆದೇಶದ ಮೇಲೆ ಈ ಕೆಲಸವನ್ನು ಮಾಡಿದೆ. The High Court has upheld section 14(A). ಹಾಗೆ ಮಾಡುವಾಗ ಆಯಾ ಸಹಕಾರ ಸಂಘಗಳನ್ನು ಕೇಳಿ ಮಾಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. The section itself has not been struck down.

ಶ್ರೀ ಎಂ. ಸಿ. ಬಸಪ್ಪ.—The High Court having upheld the section ಅವರು ಏನು ಹೇಳಿದ್ದಾರೆ ಎಂದರೆ without taking consent of the Society this amalgamation is bad ಎಂದು ಹೇಳಿದ್ದಾರೆ. ಅದನ್ನು ನೀವು ತರಿಸಿ ನೋಡಿ. ಆಮೇಲೆ ತಾವು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಿ. ಇವತ್ತು ವ್ಯವಸಾಯಗಾರನ ಸ್ಥಿತಿ ಏನಾಗಿದೆ ಎಂದರೆ ಸೊಸೈಟಿಗಳು ಸರಿಯಾಗಿ ಫಂಕ್ಷನ್ ಮಾಡದೇ ಸಾಕಷ್ಟು ಅವನಿಗೆ ದೊರೆಯುತಕ್ಕಂಥ ಕ್ರೆಡಿಟ್ ದೊರೆಯುತ್ತಾ ಇಲ್ಲ. ಆದರೆ ಮೆನ್ಯೂರ್, ಅಪ್ಲೈಯನ್ಸಸ್ ದೊರೆಯುತ್ತಾ ಇಲ್ಲ. ಅಲ್ಲಿ ಈ ರೀತಿಯಾಗಿದೆ. ಇನ್ನು ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಮಂತ್ರಿಗಳು ಇಲ್ಲಿದ್ದಾರೆ. ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್‌ರಾಜ್‌ಗಳ ಬಗ್ಗೆ ಹೇಳಬೇಕೆಂದರೆ ಮಾನ್ಯ ದೇವರಾಜ ಅರಸ್‌ರವರ ಸರ್ಕಾರ ಬಂದು ೬ನೇ ವರ್ಷ ಮುಗಿದು ೭ನೇ ವರ್ಷ ನಡೆಯುತ್ತಿದೆ. ಪಂಚಾಯತಿಗಳಿಗೆ ಹಾಗೂ ತಾಲ್ಲೂಕು ಬೋರ್ಡ್‌ಗಳಿಗೆ ಏನು ಚುನಾವಣೆಗಳು ನಡೆಯಬೇಕಾಗಿತ್ತೋ ಅದು ಇನ್ನೂ ನಡೆದಿಲ್ಲ. ೧೯೭೪ನೇ ಇಸವಿಯಲ್ಲಿ ನಡೆಯಬೇಕಾದಂತ ಚುನಾವಣೆಗಳನ್ನು ಇಲ್ಲಿಯವರೆಗೆ ತಳ್ಳಿ ಕೊಂಡು ಬಂದರು. ಇವತ್ತು ನಾನು ಕೇಳುತ್ತೇನೆ ಹಳ್ಳಿಗಳ ಸ್ಥಿತಿ ಏನಾಗಿದೆ ಎಂದು. ೧೪೯೫೬ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದೇವೆಂದು ಗೌರ್ನರ್‌ರವರ ಕೈಯಲ್ಲಿ ಹೇಳಿಸಿದ್ದಾರೆ. ಎಷ್ಟು ಗ್ರಾಮದಲ್ಲಿ ಇವತ್ತು ದೀಪ ಉರಿಯುತ್ತಿದೆ ಎಂದು ಕೇಳುತ್ತೇನೆ. ವಿಲೇಜ್ ಅಡ್ಮಿನಿಸ್ಟ್ರೇಷನ್ ಇವತ್ತು ಏನಾಗಿದೆ ಎಂಬುದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಬಗ್ಗೆ ಒಂದೆರಡು ಉದಾಹರಣೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ರಾಜ್ಯದಲ್ಲಿ ಗೌರ್ನರ್ ಆಡಳಿತ ಬಂದಾಗ (ಅನ್‌ಡೆಮಾಕ್ರೆಟಿಕ್) ವಿಲೇಜ್ ಪಂಚಾಯತ್ ಮತ್ತು ತಾಲ್ಲೂಕು ಬೋರ್ಡ್‌ಗಳ ಆಡಳಿತವನ್ನು ಬಿ. ಡಿ. ಎ. ಅವರು

ನೋಡಿಕೊಳ್ಳುತ್ತಿದ್ದರು. ಎನ್‌ಟೈರ್ ೨ ಕೋಟಿ ರೂಪಾಯಿಗಳ ಆದಾಯ ಇರತಕ್ಕಂಥ ಗ್ರಾಮಪಂಚಾಯತಿಗಳು ಮತ್ತು ತಾಲ್ಲೂಕು ಬೋರ್ಡ್‌ಗಳಿಗೆ ಇವತ್ತಿನ ದಿವಸ ಗ್ರಾಂಟ್ ಕೊಟ್ಟು ಬಿ. ಡಿ. ಎ.ಯವರ ಕೈಯಲ್ಲಿ ಖರ್ಚು ಮಾಡಿಸುತ್ತಿದ್ದೀರಿ. ರಾಜ್ಯಪಾಲರ ಭಾಷಣದಲ್ಲಿ ೧೧ ಸಾವಿರ ಚಿಲ್ಲರೆ ಕೊಳವೆ ಭಾವಿಗಳನ್ನು ತೆಗೆದಿದ್ದೇವೆಂದು ಹೇಳಿದ್ದೀರಿ.

ಶ್ರೀ ಕೆ. ಎಚ್. ರಂಗನಾಥ್.—ಖುಷ್ಕಿ ಜಮೀನು ಇರತಕ್ಕಂಥ ಪ್ರದೇಶದಲ್ಲಿ ಅಲ್ಲಿರತಕ್ಕಂಥ ಜನರು ಕಂದಾಯವನ್ನು ನೂರಕ್ಕೆ ನೂರರಷ್ಟು ಪಂಚಾಯತಿಗೆ ಕೊಟ್ಟರೆ ಪಂಚಾಯತಿಗಳು ಆ ಹಣದಲ್ಲಿ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು, ದೀಪದ ವ್ಯವಸ್ಥೆಯನ್ನು, ಸ್ಯಾನಿಟರಿ ವ್ಯವಸ್ಥೆಯನ್ನು, ಇವೆಲ್ಲವನ್ನೂ ಮಾಡುವುದಕ್ಕಾಗುತ್ತದೆಯೇ ? ಈಗ ೨ ಕೋಟಿ ರೂಪಾಯಿಗಳ ಬಗ್ಗೆ ಮಾತನಾಡಿದರೆ ಆ ಪ್ರಶ್ನೆ ಬೇರೆ. ಈಗ ಒಂದು ಗ್ರಾಮವನ್ನೇ ತೆಗೆದುಕೊಂಡು ವಿಚಾರ ಮಾಡುವುದಾದರೆ ಇವತ್ತು ಅಲ್ಲಿ ಏನಾಗಿದೆ ಎಂದರೆ ಲ್ಯಾಂಡ್ ರೆವಿನ್ಯೂ ಅಂದರೆ ಅದು ಡ್ರೈ ಅಸೆಸ್‌ಮೆಂಟ್ ಒಂದು ಕಡೆ; ಇನ್ನೊಂದು ಕಡೆ ವಾಟರ್‌ರೇಟ್ ಬಗ್ಗೆ ಅದರಲ್ಲಿ ಇರತಕ್ಕಂಥ ವಿಚಾರ ಬೇರೆ; ಇದು ಸ್ವಲ್ಪ ವಿವಾದಗ್ರಸ್ಥವಾಗಿದೆ. ಅಲ್ಲಿ ಖುಷ್ಕಿ ಜಮೀನು ಇರತಕ್ಕಂಥ ಪ್ರದೇಶದಲ್ಲಿ ಕಂದಾಯವನ್ನು ನೂರಕ್ಕೆ ನೂರರಷ್ಟು ಕೊಟ್ಟರೂ ಎಲ್ಲಾ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಕೇಳಬೇಕಾಗಿದೆ.

ಶ್ರೀ ಎಂ. ಸಿ. ಬಸಪ್ಪ.—ಮಾನ್ಯ ಮಂತ್ರಿಗಳಲ್ಲಿ ನಾನು ಭಿನ್ನವಿಸಿಕೊಳ್ಳುವುದು ಇಷ್ಟೆ. ಈ ದಿಶೆಯಲ್ಲಿ ತಾವು ಪ್ರಯತ್ನ ಮಾಡಬೇಕು, ಇಷ್ಟಕ್ಕೆ ನಿಲ್ಲಿಸಬೇಡಿ. ಇನ್ನು ಪುರಸಭೆಗಳ ಆರ್ಥಿಕ ತೊಂದರೆಗಳನು ಕಡಿಮೆ ಮಾಡುವುದಕ್ಕಾಗಿ ಸರ್ಕಾರವು ರಾಜ್ಯದಲ್ಲಿ ಸಂಗ್ರಹಿಸಿದ ಮೋಟಾರು ವಾಹನ ತೆರಿಗೆಯ ಶೇ. ೫ರಷ್ಟನ್ನು ರಸ್ತೆಗಳ ದುರಸ್ತಿ ಮತ್ತು ನಿರ್ವಹಣೆಗೆ ಅನುದಾನ ರೂಪದಲ್ಲಿ ಮಂಜೂರು ಮಾಡಿದೆಯೆಂದು ಗೌರ್ನರ್‌ರವರ ಕೈಯಲ್ಲಿ ಹೇಳಿಸಿದ್ದೀರಿ. ಈ ರೀತಿ ಪಂಚಾಯತಿಗಳಿಗೆ ಸರಿಯಾದ ಆಡಳಿತವನ್ನು ಕೊಡಬೇಕು, ಸರಿಯಾದ ವರಮಾನ ಕೊಡಬೇಕೆಂದು ಸರ್ಕಾರದವರು ಯೋಜನೆ ಮಾಡಿದ್ದೀರಿ. ಈ ದಿಶೆಯಲ್ಲಿ ಯಾವುದಾದರೂ ವರಮಾನವನ್ನು ಕೊಡುವುದಕ್ಕೆ ಬರುತ್ತದೆ. ಆದರೆ ಅವರಿಂದ ವರಮಾನ ಇರಲಿಲ್ಲವೆಂದು ಚುನಾವಣೆಯನ್ನು ನಿಲ್ಲಿಸಿದ್ದು ಬಹಳ ಅನ್ಯಾಯ. ಆ ಮೇಲೆ ೧೪೫೫ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಎಷ್ಟು ಗ್ರಾಮಗಳಲ್ಲಿ ದೀಪ ಉರಿಯುತ್ತಿವೆ ? ಪಂಚಾಯತಿಯ ಚೇರ್‌ಮನ್ ಆಗಿರತಕ್ಕಂಥವರು ತಾವು ಚೇರ್‌ಮನ್ ಅನ್ನುವುದನ್ನು ಮರೆತ್ತಿದ್ದಾರೆ. ಪಂಚಾಯತಿಯ ಮೆಂಬರ್ ಆಗಿರುವವರೂ ಸಹ ತಾವು ಮೆಂಬರ್ ಅನ್ನುವುದನ್ನು ಮರೆತಿದ್ದಾರೆ. ಸೆಕ್ರೆಟರಿಗಳಾದಂತಹವರು ವಿಲೇಜ್ ಪಂಚಾಯತ್ ಚೇರ್‌ಮನ್‌ರ ಮೇಲೆ ಕಂಟ್ರೋಲ್ ಇಟ್ಟುಕೊಂಡಿಲ್ಲ. ಇದು ವಿಲೇಜ್ ಅಡ್ಮಿನಿಸ್ಟ್ರೇಷನ್! ಇವತ್ತು ಕೊಳವೆ ಭಾವಿಗಳನ್ನು ಮಾಡಿಸಿದ್ದೇವೆಂದು ಗೌರ್ನರ್ ಕೈಯಿಂದ ಹೇಳಿಸಿದ್ದೀರಿ. ನಿಮ್ಮ ಇಲಾಖೆಯವರು ೧೧ ಸಾವಿರ ಕೊಳವೇ ಭಾವಿಗಳನ್ನು ತೆಗೆಸಿದ್ದಾರೆ. ಈ ಬಗ್ಗೆ ಒಂದು ಉದಾರಣೆಯನ್ನು ಕೊಡುವುದಾದರೆ ಚಾಮರಾಜನಗರ ತಾಲ್ಲೂಕಿನಲ್ಲಿ ೨೫೦ ಕೊಳವೆ ಭಾವಿಗಳನ್ನು ತೆಗೆಸಿ ಪಂಪ್ ಹಾಕಿದ್ದಾರೆ. ಇವತ್ತು ೫೦ ಭಾವಿಗಳಲ್ಲಿ ಜನರು ನೀರು ತೆಗೆದುಕೊಳ್ಳುವುದಕ್ಕೆ ಆಗುತ್ತಾ ಇಲ್ಲ. ಅಂದರೆ ಪಂಪು ಕೆಟ್ಟುಹೋಗಿದೆ. ನೀವು ನಿಮ್ಮ ತೃಪ್ತಿಗೆ ಗೌರ್ನರ್ ಕೈಯಲ್ಲಿ ೧೧ಸಾವಿರ ಚಿಲ್ಲರೆ ಕೊಳವೆ ಭಾವಿಗಳನ್ನು ತೆಗೆಸಿದ್ದೇವೆಂದು ಹೇಳಿಸಿದ್ದೀರಿ. ಜನರಿಗೆ ನೀರುಕುಡಿಸುತ್ತೇವೆಂದು ಹೇಳುತ್ತೀರೇ ಹೊರತು ಕೊನೆಯಪಕ್ಷ ೧ಸಾವಿರ ಭಾವಿಗಳಲ್ಲಾದರೂ ನೀರುಕುಡಿಯುವವರೇ ಇಲ್ಲ ಈ ಸ್ಥಿತಿಗೆ ಹಳ್ಳಿಗಳನ್ನು ತಂದಂಥ ಜವಾಬ್ದಾರಿ ನಿಮಗೇ ಸೇರಿದ್ದು. ಅದನ್ನು ಸ್ವಲ್ಪ ವಿಚಾರ ಮಾಡಬೇಕು, ಭಾರತದ ಹಳ್ಳಿಗಳು ಉದ್ಧಾರವಾಗಬೇಕು, ರೈತರ ಉದ್ಧಾರವಾಗಬೇಕೆನ್ನುವುದು ಮಹತ್ವ ಅಂಶಗಳು. ಹಳ್ಳಿಗಳ ಮಟ್ಟದಲ್ಲಿ, ಹಳ್ಳಿಗಳ ಆಡಳಿತ ಸುಗಮವಾಗಿ ಮತ್ತು ಸುವ್ಯವಸ್ಥಿತವಾಗಿ ನಡೆಯಬೇಕಾದರೆ ಅಲ್ಲಿರುವ ಸ್ಥಳೀಯ ಸಂಸ್ಥೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡುವ ಹಾಗೆ ಮಾಡಬೇಕು. ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಹಣಕಾಸಿನ ಸವಲತ್ತುಗಳನ್ನು ಸರ್ಕಾರ ಕೊಡಬೇಕು. ೧೯೭೨ ರಿಂದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ಎರಡು-ಮೂರು ವರುಷಗಳಲ್ಲಿ ಮಾಡಿಬಿಡುತ್ತೇವೆ ಎಂದು ಹೇಳಿದ ಸರ್ಕಾರ ೧೯೭೪ಕ್ಕೆ, ಸ್ಥಳೀಯ ಸಂಸ್ಥೆಗಳಿಗೆ ಸದ್ಯಕ್ಕೆ ಚುನಾವಣೆಗಳನ್ನು ಮಾಡಲಾಗುವುದಿಲ್ಲ ಎಂದಿತು. ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಯೇ ಸರ್ಕಾರ. ಅವನು ಯಾವ ಊರಿನಲ್ಲಿ ಬಾವಿ ತೆಗೆಯಬೇಕನ್ನುತ್ತಾನೋ ಆ ಊರಿನಲ್ಲಿ ತೆಗೆಯಬೇಕು, ಯಾವ ಊರಿಗೆ ಬೇಡ ಎನ್ನುತ್ತಾನೆ ಆ ಊರಿಗೆ ಇಲ್ಲ. ಇಂಥಾ ಸ್ಥಿತಿಗಳನ್ನು ಹಳ್ಳಿಗಳು ಎದುರಿಸುವ

ದಾದರೆ, ಹಳ್ಳಿಗಳನ್ನೇ ಪ್ರಧಾನವಾಗುಳ್ಳ ಭಾರತ ದೇಶ ಯಾವಾಗ ಉದ್ಧಾರವಾಗುವುದು ? ಮೊನ್ನೆ ತಾನೆ ಪತ್ರಿಕೆಗಳಲ್ಲಿ ಓದಿದೆ, ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಚುನಾವಣೆ ಮಾಡಲಾಗುವುದು, ನಗರಸಭೆಗಳಿಗೆ ಇಲ್ಲ ಎಂದು ಹಳ್ಳಿಗಳಲ್ಲಿರುವ ಜನರಿಗೆ ಅವರ ಜವಾಬ್ದಾರಿಯನ್ನರಿತು ನಡೆಯುವ ಶಕ್ತಿ ಇದೆ. ಅದಿಲ್ಲದಿದ್ದರೆ, ಅವನ್ನು ತಿದ್ದುವ ಶಕ್ತಿ ಸರ್ಕಾರಕ್ಕಿದೆ. ಆದುದರಿಂದ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಸರ್ಕಾರ ಆದಷ್ಟು ಬೇಗ ಮಾಡಬೇಕು. ಸ್ಥಳೀಯ ಸಂಸ್ಥೆಗಳಿಗೆ ಮೇ ಇಪ್ಪತ್ತೆರಡು ಚುನಾವಣೆಗಳು ನಡೆಯುತ್ತವೆಂದು ಹೇಳಲಾಗಿದೆ. ಆದರೆ, ಆ ತಾರೀಖನ್ನೂ ಮುಂದೆ ಹಾಕಲಾಗುವುದೆಂಬ ಶಂಕೆ ನಮಗೆ ಬಂದಿದೆ. ಅವಕ್ಕೆ ದಯವಿಟ್ಟು ಅವಕಾಶ ಕೊಡಬಾರದು. ಈಗಿರುವ ಗಾಳಿಯಲ್ಲೇ ಸ್ಥಳೀಯ ಸಂಸ್ಥೆಗಳಲ್ಲೂ ನಾನೇ ಗೆದ್ದು ಬರುತ್ತೇವೆ ಎಂದು ಕಾಂಗ್ರೆಸ್ಸಿಗರು ತಿಳಿದುಕೊಂಡಿರಬಹುದು. ಗೆದ್ದು ಬನ್ನಿ, ಚಿಂತೆ ಇಲ್ಲ. ಏನೇ ಆಗಲಿ, ಚುನಾಯಿತ ಪ್ರತಿನಿಧಿಗಳನ್ನೊಳಗೊಂಡು ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತಿಗಳು ಕೆಲಸ ಮಾಡಬೇಕೆನ್ನುವುದು ನನ್ನ ಅಭಿಪ್ರಾಯ.

ಇನ್ನು ಭೂಸುಧಾರಣೆ ಬಗ್ಗೆ ಬಹಳವಾಗಿ ಹೇಳಲಾಗುತ್ತಿದೆ. ಇದು ಚುನಾವಣೆ ಮತ್ತು ಇತರ ಕಾಲದಲ್ಲೂ ಬಹಳ ಪ್ರಚಾರ ಪಡೆದಿದೆ. ಸರ್ಕಾರವೇ ಕೊಟ್ಟಿರುವ ಅಂಕಿ ಅಂಶಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಇಲ್ಲಿಯವರೆಗೂ ಗೇಣಿದಾರರಿಂದ ಅರ್ಜಿಗಳು ಬಂದಿರುವುದು ೭,೪೮,೪೫೪, ಇವುಗಳಲ್ಲಿ ೩,೬೫,೯೫೧ ಅರ್ಜಿಗಳು ಇತ್ಯರ್ಥವಾಗಿವೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಶ್ರೇಷ್ಠ ನ್ಯಾಯಾಲಯದಲ್ಲಿ ಸುಮಾರು ಒಂದು ಲಕ್ಷದಷ್ಟು ರಿಟ್ ಪಿಟಿಷನ್‌ಗಳಿವೆ. ಅಧಿಕಾರೇತರರನ್ನು ಭೂ ನ್ಯಾಯ ಮಂಡಲಿಗಳಲ್ಲಿ ನೇಮಿಸಿದ ಉದ್ದೇಶವಾದರೂ ಏನು ? ಅದಷ್ಟು ಜಾಗ್ರತೆ ಇವರು ಕುಳಿತು, ಕೆಲಸ ಮಾಡಿ ನಿಜವಾದ ಗೇಣಿದಾರನಿಗೆ ಜಮೀನು ಕೊಡಬೇಕೆನ್ನುವ ಉದ್ದೇಶದಿಂದಲ್ಲವೆ? ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಗೇಣಿದಾರ ಹಿಂದೆ ಭೂ ಒಡೆಯನಿಗೆ ಗೇಣಿದಾರನಾಗಿದ್ದ. ಈಗ ಆತ ಸರ್ಕಾರಕೆ ಗೇಣಿದಾರ. ಅಂತೂ ಗೇಣಿದಾರ ಎಂದಿಗೂ ಅವನು ಗೇಣಿದಾರನೇ. ಒಂದು ವರ್ಷದೊಳಗೆ ಭೂ ಸುಧಾರಣೆಯನ್ನು ಜಾರಿಗೆ ತರುತ್ತೇವೆ, ಗೇಣಿದಾರನಿಗೆ ಭೂಮಿಯ ಒಡೆತನ ಕೊಡುತ್ತೇವೆ ನಿಮ್ಮ ಅರ್ಥದಲ್ಲಿ ಸರ್ಕಾರದ ಗೇಣಿದಾರ ಎಂದು ಧೋರಣೆಯನ್ನು ತಾಳಿದ್ದರೂ ಕೂಡ, ಇಂದು ಜಾರಿಗೆ ತರಲು ಎಷ್ಟು ವರ್ಷಗಳಾಗಿವೆ ? ಭೂ ನ್ಯಾಯ ಮಂಡಲಿಗಳಲ್ಲಿ ಅನೇಕ ಜನ ಕರಪ್ಟ್ ಸದಸ್ಯರಿದ್ದಾರೆ, ಅದರ ಬಗ್ಗೆ ಪುರಾವೆ ಕೊಡಿ, ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂದು ಬಸವಲಿಂಗಪ್ಪನವರು ಕೊಟ್ಟಿರುವ ಹೇಳಿಕೆಯನ್ನು ನಾನು ಪತ್ರಿಕೆಯಲ್ಲಿ ಓದಿದೆ. ಭೂ ನ್ಯಾಯ ಮಂಡಲಿಗಳ ತೀರ್ಮಾನಗಳನ್ನು ಪ್ರಶ್ನಿಸಿ, ಶ್ರೇಷ್ಠ ನ್ಯಾಯಾಲಯಕ್ಕೆ ಕೆಲವರು ರಿಟ್ ಹೋಗಿದ್ದಾರೆ. ಕೆಲವು ರಿಟ್ ಪಿಟಿಷನ್‌ಗಳನ್ನು ಶ್ರೇಷ್ಠ ನ್ಯಾಯಾಲಯ ಎತ್ತಿ ಹಿಡಿದಿದೆ.

ಶ್ರೀ ಕೆ. ಎಚ್. ರಂಗನಾಥ್.—ಅಧಿಕಾರಿಗಳೇ ಇರುವ ಭೂ ನ್ಯಾಯ ಮಂಡಲಿಗಳು ಇರಬೇಕೇ ಅಥವಾ ಅಧಿಕಾರೇತರರೂ ಇರುವ ಭೂ ನ್ಯಾಯ ಮಂಡಲಿಗಳಿರಬೇಕೆ ಎನ್ನುವುದು ತತ್ವದ ವಿಚಾರ. ಆದರೆ, ನಾವೂ ನೀವೂ ಎಲ್ಲರೂ ಒಪ್ಪಿಕೊಂಡು, ಅಧಿಕಾರೇತರರನ್ನು ಭೂ ನ್ಯಾಯ ಮಂಡಲಿಗಳಲ್ಲಿ ಹಾಕಲಾಗಿದೆ. ಆದರೆ, ಅಧಿಕಾರೇತರರಲ್ಲಿ ಕೆಲವರು ಕರಪ್ಟ್ ಇದ್ದರೆ ಅವರನ್ನು ತೆಗೆದು ಹಾಕುವುದಕ್ಕೆ ಭೂ ಸುಧಾರಣೆ ಕಾಯಿದೆಯಲ್ಲಿ ಅಧಿಕಾರವಿದೆ. ಈ ಸೇಫ್ಟಿ ಕ್ಲಾಜ್ ಇರುವುದರಿಂದ ತೊಂದರೆ ಏನೂ ಇಲ್ಲ. ಈಗ ಭಾರತೀಯ ದಂಡನಾ ಸಂಹಿತೆಯಲ್ಲಿ ಖೂನಿ ಮಾಡಬಾರದು ಎಂದು ಹೇಳಲಾಗಿದೆ. ಅಂದಮಾತ್ರಕ್ಕೇ ಖೂನಿ ಮಾಡುತ್ತಿರುವುದು ನಿಂತಿದೆಯೇ ? ಹೀಗೇ ನಡೆಯುತ್ತಾ ಹೋಗುತ್ತಿರುತ್ತದೆ. ಕರಪ್ಟ್ ಅಧಿಕಾರೇತರರನ್ನು ಮಂಡಲಿಯಿಂದ ತೆಗೆದುಹಾಕುವುದಕ್ಕೆ ಅವಕಾಶವಿರುವುದರಿಂದ, ಅಂತಹ ಪ್ರಕರಣಗಳನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದರೆ, ಸರ್ಕಾರ ಅಂತಹವರನ್ನು ತೆಗೆದುಹಾಕುತ್ತದೆ. ಆದರೆ, ಸರ್ಕಾರಕ್ಕೆ ಈ ಪಕ್ಷದವರು ಒಳ್ಳೆಯವರು ಆ ಪಕ್ಷದವರು ಕೆಟ್ಟವರು ಎನ್ನುವ ಭಾವನೆ ಇಲ್ಲ. ಸರ್ಕಾರದ ಅಭಿಪ್ರಾಯವನ್ನು ನಾನು ಮತ್ತೆ ಮತ್ತೆ ಇಲ್ಲಿ ಹೇಳಬೇಕಾಗಿದೆ. ಅದೇನೆಂದರೆ, ಭೂ ನ್ಯಾಯ ಮಂಡಲಿಗಳಲ್ಲಿ ಸದಸ್ಯರಾಗಿದ್ದು, ಅಧಿಕಾರ ದುರುಪಯೋಗ ಮಾಡಿಕೊಳ್ಳುವುದು, ಲಂಚರುಷುವತ್ತನ್ನು ಸ್ವೀಕರಿಸಿದ್ದೇ ಆದರೆ, ಅಂತಹವರನ್ನು ಯಾವುದೇ ಕಾರಣದಿಂದಲೂ ಆ ಸ್ಥಾನದಲ್ಲಿ ಮುಂದುವರಿಯುವುದಕ್ಕೆ ಬಿಡುವುದಿಲ್ಲ. ಅಧಿಕಾರ ದುರುಪಯೋಗ ಪ್ರಕರಣಗಳನ್ನು ಸರ್ಕಾರ ತನ್ನ ಆಡಳಿತಯಂತ್ರದ ಸಹಾಯದಿಂದ ತಿಳಿದುಕೊಳ್ಳುತ್ತದೆ ಅಥವಾ ಮಾನ್ಯ ಸದಸ್ಯರುಗಳು ಸರ್ಕಾರದ ಗಮನಕ್ಕೆ ತರಬಹುದಾಗಿದೆ. ಆಗ ಮಾತ್ರ ಅಂತಹವರನ್ನು ಮಂಡಲಿಯಿಂದ ತೆಗೆದು ಹಾಕುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಭೀಮಣ್ಣ ಖಂಡ್ರೆ.—ದುರುಪಯೋಗದ ಪ್ರಕರಣಗಳು ಹೆಚ್ಚು ಹೆಚ್ಚು ಬರುತ್ತಿರುವುದರಿಂದಲಾದರೂ ಅಪೀಲಿಂಗ್ ಅಥಾರಿಟಿಯನ್ನು ಏತಕ್ಕೆ ಇಟ್ಟುಕೊಳ್ಳಬಾರದು ?

ಶ್ರೀ ಎಂ. ಸಿ. ಬಸಪ್ಪ.—ಅಧಿಕಾರೇತರರು ಭೂ ನ್ಯಾಯ ಮಂಡಲಿಗಳಲ್ಲಿರುವುದು ತೊಂದರೆಯೇನಲ್ಲ. ಆದರೆ, ಸದಸ್ಯರನ್ನು ನೇಮಕ ಮಾಡುವ ಸಂದರ್ಭದಲ್ಲಿ ಗುಣಕ್ಕೆ ಹೆಚ್ಚು ಬೆಲೆ ಕೊಟ್ಟು ನೇಮಕ ಮಾಡಿದರೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ, ಹಾಗೆ ಮಾಡದೆ, ಪಕ್ಷಕ್ಕೇ ಹೆಚ್ಚು ಬೆಲೆ ಕೊಟ್ಟು ಸದಸ್ಯರನ್ನು ನೇಮಕ ಮಾಡಿದ್ದರಿಂದ, ಇಷ್ಟೊಂದು ಹೊಡೆತ ಬಿದ್ದಿರುವುದು ಮತ್ತು ಇಷ್ಟೊಂದು ದೂರುಗಳು ಬರುತ್ತಿರುವುದಕ್ಕೆ ಕಾರಣವಾಗಿದೆ. ಇದನ್ನೆಲ್ಲ ಸರಿಪಡಿಸುವ ಜವಾಬ್ದಾರಿ ಸರ್ಕಾರದ ಮೇಲಿದೆ. ಆದುದರಿಂದ, ಭೂಸುಧಾರಣಾ ಕಾನೂನಿನಲ್ಲಿ ಹೊಸ ಕಾಲಂನ್ನು ಹಾಕಿ ಅಪೀಲು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದಲ್ಲದೇ ಹೋದರೆ, ಭೂ ನ್ಯಾಯ ಮಂಡಲಿಯ ಸದಸ್ಯರು ತಾವು ಕೊಡುವ ತೀರ್ಪನ್ನು ಯಾರೂ ಕೇಳುವವರಿಲ್ಲವೆಂದು ತಿಳಿದು ಕಣ್ಣುಮುಚ್ಚಿಕೊಂಡು ಉದ್ದೇಶಪೂರ್ವಕವಾಗಿ ತಪ್ಪು ಮಾಡುತ್ತಾರೆ. ನಾವೇ ಫೈನಲ್ ಅಥಾರಿಟಿ, ನಮ್ಮ ತೀರ್ಪನ್ನು ಯಾರೂ ಪ್ರಶ್ನಿಸುವಂತಿಲ್ಲ, ನಾವು ನೀಡುವ ತೀರ್ಮಾನವೇ ತೀರ್ಪು ಎಂದು ಅವರು ಭಾವಿಸಿರುವುದರಿಂದಲೇ ಇಷ್ಟೆಲ್ಲಾ ತೊಂದರೆಗೆ ಅವಕಾಶವಾಗಿದೆ.

ಶ್ರೀ ಕೆ. ಎಚ್. ರಂಗನಾಥ್.—ಭೂಸುಧಾರಣೆ ಕಾನೂನನ್ನು ಈ ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕಾರ ಮಾಡಲಾಗಿದೆ. ೧೯೫೫ರಲ್ಲಿ ಇನಾಂ ಅಬಾಲಿಷನ್ ಆ್ಯಕ್ಟ್ ಜಾರಿಗೆ ಬಂದರೂ ಇನ್ನೂ ತೀರ್ಮಾನವಾಗದೇ ಉಳಿದಿರುವ ಪ್ರಕರಣಗಳು ಸಾವಿರಾರು ಇವೆ. ಹಾಗಿರುವಾಗ, ಭೂಸುಧಾರಣೆ ಕಾನೂನಿನಡಿ ಏಳು ಲಕ್ಷ ಅರ್ಜಿಗಳು ಬಂದಿರುವಾಗ, ಅಪೀಲ್‌ಗೆ ಅವಕಾಶ ಕೊಟ್ಟರೆ, ಕಾನೂನನ್ನು ಜಾರಿಗೆ ತರುವುದಕ್ಕೆ ವಿಳಂಬವಾಗುವುದಿಲ್ಲವೆ ? ಈಗ ಕೆಲವು ಕಡೆಗಳಲ್ಲಿ ಏನಾಗುತ್ತಿದೆ ಎನ್ನುವುದನ್ನು ನೋಡೋಣ. ಕೆಲವು ಕಡೆ ಗೇಣಿದಾರ ಗದ್ದೆ ಮಾಡಿರುತ್ತಾನೆ, ಆ ಗದ್ದೆ ಕೊಯ್ಲಿಗೆ ಬಂದಿರುತ್ತದೆ. ಭೂ ಒಡೆಯ ಕೋರ್ಟಿಗೆ ಹೋಗಿ ಟೆಂಪೊರರಿ ಇಂಜಂಕ್ಷನ್ ತೆಗೆದುಕೊಂಡು ಬಂದು ಬೆಳೆ ಕಟಾವು ಮಾಡಿದ ಸಾವಿರಾರು ಪ್ರಸಂಗಗಳಿವೆ. ಅಪೀಲಿಗೆ ಅವಕಾಶ ಕೊಡದೆ ಇರುವುದು ಗೇಣಿದಾರನ ಹಿತದೃಷ್ಟಿಯಿಂದಲೇ ಹೊರತು ಭೂ ಒಡೆಯನ ಹಿತದೃಷ್ಟಿಯಿಂದಲ್ಲ. ಆದುದರಿಂದ, ಅಪೀಲ್‌ಗೆ ಅವಕಾಶ ಮಾಡಿಕೊಟ್ಟರೆ ಹೆಚ್ಚು ಕಾಲ ವಿಳಂಬವಾಗುವುದಿಲ್ಲವೆ ? ಅಲ್ಲದೆ, ಭೂಸುಧಾರಣೆಯ ಸದುದ್ದೇಶ ಯಾವಾಗ ಈಡೇರುವುದು ?

ಶ್ರೀ ಎಂ. ಸಿ. ಬಸಪ್ಪ.—ಇತ್ಯರ್ಥವಾಗಿರುವ ೩,೬೫,೯೫೧ ಪ್ರಕರಣಗಳಲ್ಲಿ ಎಲ್ಲದರಲ್ಲೂ ಅನ್ಯಾಯಗಳಾಗಿಲ್ಲ ಮತ್ತು ಎಲ್ಲರೂ ಅಪೀಲ್‌ಗೆ ಹೋಗಿಲ್ಲ. ಅಪೀಲ್‌ಗೆ ಅವಕಾಶ ಮಾಡಿಕೊಡುವುದರ ಉದ್ದೇಶವೇನೆಂದರೆ, ಭೂ ಮಂಡಲಿ ಸದಸ್ಯರಿಗೆ ತಾವು ನೀಡುವ ತೀರ್ಪನ್ನು ಪ್ರಶ್ನೆ ಮಾಡುವ ಜಾಗ ಇನ್ನೊಂದಿದೆ, ನಾವೇ ಫೈನಲ್ ಅಲ್ಲ ಎನ್ನುವುದು ಗೊತ್ತಾಗಬೇಕು ಎನ್ನುವುದು. ಹೀಗೆ ಇನ್ನೊಂದು ಕಡೆ ಅವರ ತೀರ್ಪನ್ನು ಪ್ರಶ್ನೆ ಮಾಡಲು ಅವಕಾಶ ಕೊಟ್ಟರೆ, ಸದಸ್ಯರುಗಳು ತಮ್ಮ ಸ್ಥಾನಮಾನಗಳು ಮತ್ತು ಮರ್ಯಾದೆಯ ದೃಷ್ಟಿಯಿಂದ ತಪ್ಪನ್ನು ಮಾಡುವುದಕ್ಕಾಗುವುದಿಲ್ಲ ಎನ್ನುವುದು. ನನ್ನ ಅಭಿಪ್ರಾಯ.

ಶ್ರೀ ಎಸ್. ಬಂಗಾರಪ್ಪ.—ಈಗಾಗಲೇ ಶ್ರೇಷ್ಠ ನ್ಯಾಯಾಲಯದಲ್ಲಿ ಒಂದು ಲಕ್ಷ ರಿಟ್ ಪಿಟಿಷನ್‌ಗಳು ದಾಖಲಾಗಿವೆ. ಇನ್ನು ಅಪೀಲ್‌ಗೆ ಅವಕಾಶ ಮಾಡಿಕೊಟ್ಟರೆ ಇನ್ನೂ ಹೆಚ್ಚು ಸಂಖ್ಯೆ ಆಗುವುದಿಲ್ಲವೆ ?

ಶ್ರೀ ಎಂ. ಸಿ. ಬಸಪ್ಪ.—ಅದರಿಂದೇನೂ ಭಯವಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ದಾಖಲಾಗಿರುವ ಒಂದು ಲಕ್ಷ ರಿಟ್ ಪಿಟಿಷನ್‌ಗಳಲ್ಲಿ ಭೂಮಾಲೀಕರಿಂದ ಬಂದಿರುವ ರಿಟ್ ಪಿಟಿಷನ್‌ಗಳು ಎಷ್ಟು ಮತ್ತು ಗೇಣಿದಾರರಿಂದ ಬಂದಿರುವ ರಿಟ್ ಪಿಟಿಷನ್‌ಗಳೆಷ್ಟು ಎಂಬುದನ್ನು ಶ್ರೇಷ್ಠ ನ್ಯಾಯಾಲಯದಿಂದ ತರಿಸಿ, ಅದನ್ನು ಸಭೆಯ ಮುಂದಿಟ್ಟು, ಮುಂದೆ ವಿಚಾರ ಮಾಡೋಣ.

ಈಗಿನ ಲಾ ಸಿಸ್ಟಂನಲ್ಲಿ, ರೈತ ನಮ್ಮ ಕೈಗೆ ಸಿಕ್ಕರೆ ಅವನ ಚರ್ಮ ಸುಲಿದುಹೋಗುತ್ತದೆ. ನಮ್ಮಲ್ಲಿ ಒಂದು ಗಾದೆ ಮಾತು ಹೇಳುತ್ತಾರೆ. ಸಾಲಗಾರನ ಮನೆಯ ಮುಂದೆ ಹಿಡ್ಯಾಡು, ಕೋರ್ಟಿನ ಹಿಂದೆ ಹಿಡ್ಯಾಡು ಎಂದು.

ಶ್ರೀ ಎಂ. ಸಿ. ಬಸಪ್ಪ.—ಇಷ್ಟು ವಿಚಾರಗಳನ್ನು ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ಕಳೆದ ವರ್ಷ ಏನು ರಾಜ್ಯದ ಪ್ರಗತಿಯಾಗಿದೆ, ಮುಂದಿನ ವರ್ಷಗಳಲ್ಲಿ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಎನ್ನುವ ಬಗ್ಗೆ ಹೆಚ್ಚಿನ ವಿವರ ಇಲ್ಲ. ಅದರ ಬಗ್ಗೆ ಒಂದು ರೀತಿಯ ಕೆಟಲಾಗ್ ಕೊಟ್ಟಿರುವಹಾಗೆ ಕೊಟ್ಟಿದ್ದಾರೆ. ಇದು ತೃಪ್ತಿಕರವಾಗಿಲ್ಲ. ರಾಜ್ಯದ ಪ್ರಗತಿ ಕುಂಠಿತವಾಗಿದೆ, ಇದಕ್ಕೆ ತಕ್ಕ ಪ್ರಯತ್ನ ಮಾಡಬೇಕು ಎಂದು ಹೇಳಿ, ಅಧ್ಯಕ್ಷರು ನನಗೆ ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಜನಾಲಿ (ಗುಳೇದ ಗುಡ್).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಾನು ಭಾಷಣ ಮಾಡುವುದಕ್ಕೆ ಮೊದಲು ನಮ್ಮ ಕಾಂಗ್ರೆಸ್ ಪಕ್ಷ ಹೇಗೆ ಚುನಾವಣೆಯಲ್ಲಿ ಜಯಗಳಿಸಿತು ಎನ್ನುವ ಬಗ್ಗೆ ಎರಡು ಮಾತುಗಳನ್ನು ಹೇಳಿ ನಂತರ ನನ್ನ ಮಾತನ್ನು ಮುಂದುವರಿಸುತ್ತೇನೆ, ನಿನ್ನೆಯ ದಿವಸ ನಮ್ಮ ವಿರೋಧ ಪಕ್ಷದ ಬಂಧುಗಳು ಹಾಗೂ ಸದಸ್ಯರುಗಳು ಕೇವಲ ಒಂದು ಪ್ರಣಾಳಿಕೆಯಲ್ಲಿ ಹುಟ್ಟಿದಂಥ 'ಗರೀಬಿ ಹಟಾವ್' ಬಗ್ಗೆ ವ್ಯಾಖ್ಯಾನ ಮಾಡಿ ಪ್ರಣಾಳಿಕೆಯಂತೆ ನಾವು ನಡೆದುಕೊಳ್ಳಲಿಲ್ಲ ಜನತೆಗೆ ಮೋಸ ಮಾಡಿದ್ದಾರೆ ಜನತೆಯ ಬಾಯಿಗೆ ತುಪ್ಪ ಸವರುವ ಮಾತುಗಳನ್ನು ಹೇಳಿದ್ದಾರೆ ಎಂದು ಹೇಳಿದರು. ಆದರೆ ನಾನು ಹೇಳಬೇಕಾಗಿದೆ, ಕಾಂಗ್ರೆಸ್ ಸರ್ಕಾರ ಜನತೆಗೆ, ಅವರ ಬಾಯಿಗೆ ತುಪ್ಪ ಹಾಕುವಂತ ಕೆಲಸಗಳನ್ನು ಮಾಡಿದೆ, ಬಡವರಿಗೆ ಊಟ, ಮನೆಮಾರುಗಳನ್ನು ಕೊಟ್ಟಿದೆ, ಅವರಿಗೆ ಜೀವನಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದೆ ಎಂದು. ಈ ರೀತಿಯಾದ ಒಳ್ಳೆಯ ಕೆಲಸಗಳಿಂದಲೇ ನಮ್ಮ ಕಾಂಗ್ರೆಸ್ ಪಕ್ಷ ಜಯ ಗಳಿಸಿ ಮತ್ತೆ ಅಧಿಕಾರಕ್ಕೆ ಬಂದಿದೆ ಎಂದು ಮಾನ್ಯ ಅಧ್ಯಕ್ಷರ ಮುಂದೆ ನಾನು ಹೇಳುತ್ತೇನೆ. ಜನತಾ ಪಕ್ಷದ ಬಂಧುಗಳು, ನಾವು ಅನ್ಯಾಯ ಮಾಡಿದ್ದೇವೆ, ಅದನ್ನು ಸಹಿಸಲಿಕ್ಕೆಸಾಧ್ಯವಿಲ್ಲ ಎನ್ನುವ ಮಾತುಗಳನ್ನು ಹೇಳಿದ್ದಾರೆ. ಇದಕ್ಕ ಒಂದು ಉದಾಹರಣೆಯನ್ನು ಹೇಳುವುದಾದರೆ, ನಮ್ಮ ಬಾದಾಮಿಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಬಂದಾಗ, ಜನತಾ ಪಕ್ಷದವರು ಕುಡಿಯುವನೀರಿನ ಕೊರತೆಯನ್ನು ಮಾಡಿದರು ಯಾವ ಪಕ್ಷದ ನಾಯಕರೇ ಬರಲಿ, ಇಂಥ ತೊಂದರೆಯನ್ನು ಮಾಡಬಾರದು, ಇದು ಮಾನವೀಯ ಧರ್ಮ. ನಮ್ಮ ನಾಯಕರು ಬಂದಾಗ ಇಳಿದುಕೊಳ್ಳಲಿಕ್ಕೆ ವಸತಿ ಸಿಕ್ಕಲಿಲ್ಲ, ಅವರು ಅಂದು ಕಣ್ಣೀರು ಸುರಿಸುವಂಥ ಪ್ರಸಂಗ ಬಂತು. ಆದರೆ ಭಗವಂತನ ಒಂದು ಕೃಪೆಯಿಂದ ಇವತ್ತು ಇವರಿಗೇ ಕಣ್ಣೀರು ಸುರಿಸುವಂಥ ಸ್ಥಿತಿ ಬಂದಿದೆ ಎಂದು ನಾನು ಹೇಳುತ್ತೇನೆ. ಈ ರೀತಿಯಾಗಿ ಜನತೆ ನಮ್ಮ ಪಕ್ಷಕ್ಕೆ ಬಲ ಕೊಟ್ಟಿದಕ್ಕಾಗಿ ನಾವು ಅವರಿಗೆ ನಮ್ಮ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಇಂಥ ಪ್ರಸಂಗದಲ್ಲಿಯೂ ನಾವು ಸುಮಾರು ೮ ಸಾವಿರ ಅಧಿಕ ಮತಗಳನ್ನು ಗಳಿಸಿ ಚುನಾವಣೆಯಲ್ಲಿ ಆರಿಸಿ ಬಂದಿದ್ದೇವೆ. ಯಾವುದು ಅನ್ಯಾಯ, ಯಾವುದು ನ್ಯಾಯ, ಸತ್ಯಮೇವ ಜಯತೆ ಎನ್ನುವಂತೆ, ನಮ್ಮ ಜನ ತಿಳಿದುಕೊಂಡು ನಮ್ಮನ್ನು ಆರಿಸಿದ್ದಾರೆ. ಇಂಥ ತತ್ವವನ್ನು ಇಟ್ಟುಕೊಂಡು ಪಕ್ಷ ಬೆಳೆದರೆ ಜಗತ್ತಿನ ಕಲ್ಯಾಣವಾಗುತ್ತದೆ. ಕಾಂಗ್ರೆಸ್ ಸರ್ಕಾರ ಕಳೆದ ಮೂವತ್ತು ವರ್ಷಗಳಿಂದಲೂ ಜನ ಹಿತ ಕಾರ್ಯಗಳನ್ನು ಸಾಧಿಸುತ್ತಾ ಬಂದಿದೆ. ಹರಿಜನ ಗಿರಿಜನರ, ಬಡವರ ಉದ್ಧಾರ ಮಾಡಿದೆ ಎನ್ನುವುದನ್ನು ನಾವೆಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು. ಇವರು ಒಂದು ಕೀಳು ಪರಿಸ್ಥಿತಿಯಲ್ಲಿದ್ದಾಗ ನಮ್ಮ ಮಹಾತ್ಮಗಾಂಧೀಜಿಯವರು ಇವರಿಗೆ ಒಂದು ಸ್ಥಾನಮಾನ ಕೊಟ್ಟು, ಇವರನ್ನು ಉದ್ಧಾರ ಮಾಡಬೇಕು ಎಂದು ಹೇಳಿದ ಮಾತಿಗೆ ಮನ್ನಣೆ ಕೊಟ್ಟು ನಮ್ಮ ಪಕ್ಷ ಇವತ್ತು ಆ ಒಂದು ಸಮಾಜದವರನ್ನು ಈ ಸಭೆಯ ಸಭಾಧ್ಯಕ್ಷರನ್ನಾಗಿ ಆರಿಸಿರುವುದು ಇದಕ್ಕೆ ಸಾಕ್ಷಿಯಾಗಿದೆ ಎಂದು ನಾನು ಹೇಳಬಲ್ಲೆ. ಒಂದು ರೀತಿಯಿಂದಲ್ಲ, ಅನೇಕ ರೀತಿಯಿಂದಲೂ ನಮ್ಮ ಸರ್ಕಾರ ಬಡವರ ಉದ್ಧಾರದ ಕಾರ್ಯಗಳನ್ನು ಮಾಡಿದೆ ಇನ್ನು ಮುಂದೆ ಇಂಥ ಕಾರ್ಯಕ್ರಮಗಳನ್ನು ಅನುಸರಿಸುತ್ತ ಬರುತ್ತದೆ. ನಮ್ಮ ಸರ್ಕಾರ, ಜನತೆಯ ಬಲದಿಂದ, ತನ್ನ ನೈತಿಕ ಬಲದಿಂದ ಎಲ್ಲಾ ಸಮಸ್ಯೆಗಳನ್ನು ಎದುರಿಸುತ್ತಿದೆಯೇ ಹೊರತು ಯಾವುದೇ ಶಕ್ತಿಯಿಂದಲ್ಲ—ಮತ್ತು ಅನ್ಯಾಯದಿಂದಲ್ಲ. ನಮ್ಮ ಸರ್ಕಾರ ಬರಗಾಲ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಿದೆ. ಕಷ್ಟ ಪರಿಸ್ಥಿತಿಯಲ್ಲಿ ಸುಮಾರು ೧೯ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಎಲ್ಲಾ ಕಡೆಗಳಲ್ಲಿ ನೀರಾವರಿ ಯೋಜನೆಗಳನ್ನು ಮಾಡಿ, ಅನೇಕ ಕಾಮಗಾರಿಗಳನ್ನು ಕೈಗೊಂಡಿದೆ. ತುರ್ತು ಪರಿಸ್ಥಿತಿಯ ಸಮಯದಲ್ಲಿ ಹಾಗೂ ಚಂಡಮಾರುತಕ್ಕೆ ಒಳಗಾದ ರಾಜ್ಯಗಳಿಗೂ ನಮ್ಮ ರಾಜ್ಯದವರು ೩ ಲಕ್ಷ ರೂಪಾಯಿಗಳನ್ನು ಕೊಟ್ಟು ಅವರೂ ಸಹ ಸುಖದಿಂದ ಬಾಳುವೆ ನಡೆಸಬೇಕು ಎಂದು ಮಾಡಿದ್ದಾರೆ. ಈ ರೀತಿಯಾಗಿ ನಮ್ಮ ಸರ್ಕಾರದವರು ಮಾಡಿರುವ ಕೆಲಸಗಳು ಒಂದಲ್ಲ, ಎರಡಲ್ಲ, ಅನೇಕ ರಂಗಗಳಲ್ಲಿ ಜನರ ಸಂಪತ್ತನ್ನು ಹೆಚ್ಚಿಸಿದೆ ಎನ್ನುವ ಮಾತನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ಆಹಾರ ಪರಿಸ್ಥಿತಿಯನ್ನು ಸುವ್ಯವಸ್ಥಿತವಾಗಿಟ್ಟುಕೊಂಡು, ಹೆಚ್ಚು ಧೈರ್ಯದಿಂದ ಸಮಸ್ಯೆಯನ್ನು ಎದುರಿಸುತ್ತಾ ಬಂದಿದೆ. ಪಟ್ಟಣಗಳಲ್ಲಿ ಆಹಾರಧಾನ್ಯದ ಕೊರತೆಯಾಗದಂತೆ ಪಡಿತರ ಪದ್ಧತಿಯನ್ನು ಜಾರಿಗೆ ತಂದು, ಎಲ್ಲಾ ಕಡೆಗಳಲ್ಲಿಯೂ ಪಡಿತರ ಅಂಗಡಿಗಳನ್ನು ತೆರೆದು ಕಾರ್ಡುಗಳ ಮೂಲಕ ಧಾನ್ಯವನ್ನು ಹಂಚತಕ್ಕ ವ್ಯವಸ್ಥೆಯನ್ನು ನಮ್ಮ ಸರ್ಕಾರ ಮಾಡಿದೆ ಎಂದು ನಾನು ಹೇಳುತ್ತೇನೆ.

ಇನ್ನು ವೈದ್ಯಕೀಯ ದೃಷ್ಟಿಯಿಂದ ಹೇಳಬೇಕಾದರೆ, ೧೯೭೭ನೇ ಇಸವಿಯಲ್ಲಿ ಒಟ್ಟು ೪೯೭ ವೈದ್ಯಕೀಯ ಸಂಸ್ಥೆಗಳು ಇದ್ದು ಎಲ್ಲಾ ಜನಸಾಮಾನ್ಯರಿಗೂ ಒಳ್ಳೆಯ ಟ್ರೀಟ್‌ಮೆಂಟ್ ಒಳ್ಳೆಯ ಔಷಧಿ ಸಿಕ್ಕಲಿ ಎನ್ನುವ ಸದುದ್ದೇಶವನ್ನು ನಮ್ಮ ಸರ್ಕಾರ ಇಟ್ಟುಕೊಂಡಿದೆ. ನಮ್ಮ ವಿರೋಧಪಕ್ಷದ ಬಂಧುಗಳು ಹೇಳಿದರು, ಸರ್ಕಾರದವರು ಆಸ್ಪತ್ರೆಗಳನ್ನೇನೋ ಸ್ಥಾಪನೆ ಮಾಡಿದ್ದಾರೆ, ಆದರೆ ಔಷಧಿಗಳೇ ಇಲ್ಲ ಎಂದು. ಮನೆಗಳನ್ನು ಕಟ್ಟಿದ್ದಾರೆ, ಅದರಲ್ಲಿ ಕಂದ ಇರಬೇಕಾಗಿದೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ನೆನಪು ಮಾಡಿಕೊಡುತ್ತೇನೆ. ಕಾರಣಾಂತರದಿಂದ ಯಾವುದೋ ಒಂದು ಫ್ಯಾಕ್ಟರಿಯಲ್ಲಿ ಔಷಧಿ ಸ್ಟಾಕ್ ಇಲ್ಲದೆ ಇರಬಹುದು, ಅಥವಾ ಅನೇಕ ಕಡೆಗಳಲ್ಲಿ ಇನ್ನಾವುದೋ ತೊಂದರೆ ಇರಬಹುದು. ಆದರೆ ಇದನ್ನೆಲ್ಲಾ ನಮ್ಮ ಸರ್ಕಾರದವರು ಸರಿಯಾದ ರೀತಿಯಲ್ಲಿ ನೋಡುತ್ತಾರೆ. ಅನೇಕ ಕಡೆಗಳಲ್ಲಿ ಡಾಕ್ಟರುಗಳು ಇಲ್ಲ ಎಂದು ಹೇಳುತ್ತಿದ್ದಾರು ಈಗ ಡಾಕ್ಟರುಗಳನ್ನು ಕೊಟ್ಟಿದಾರೆ. ಆದರೆ ವಿರೋಧ ಪಕ್ಷದ ನಾಯಕರು, ಲೇಡಿ ಮೆಡಿಕಲ್ ಆಫೀಸರ್ಸ್‌ನ್ನು ಕೊಟ್ಟಿಲ್ಲ ಎನ್ನುವ ಮಾತನ್ನು ಹೇಳಿದರು. ಇದನ್ನು ನಾನು ಒಪ್ಪುತ್ತೇನೆ ಸರ್ಕಾರದಲ್ಲಿ ಮಾಡತಕ್ಕ ಕೆಲಸವಲ್ಲ ಇದು ವೈದ್ಯಕೀಯ ಪರೀಕ್ಷೆಯಲ್ಲಿ ಪಾಸಾದ ಹೆಣ್ಣು ಮಕ್ಕಳುಗಳು ಸಿಕ್ಕರೆ, ಎಲ್ಲಾ ಕಡೆಗಳಿಗೂ ಅವರನ್ನು ಪೋಸ್ಟ್ ಮಾಡುತ್ತಾರೆ. ಅವರ ಸಂಖ್ಯೆ ಈಗ ಬಹಳಷ್ಟು ಕಡಿಮೆ ಇದೆ. ಆದ್ದರಿಂದಲೇ ಅವರನ್ನು ಅನೇಕ ಕಡೆಗಳಿಗೆ ಪೋಸ್ಟ್ ಮಾಡಲಿಕ್ಕೆ ಆಗಿಲ್ಲ, ಆದರೂ ಸಹ ನಮ್ಮ ಸರ್ಕಾರ ಇದರ ಬಗ್ಗೆ ಪ್ರಯತ್ನ ಮಾಡುತ್ತಿದೆ ಇನ್ನು ಅನೇಕ ಎಲ್ ಎಂ ಪಿ. ಡಾಕ್ಟರುಗಳನ್ನು ನಮ್ಮ ಸರ್ಕಾರದವರು ನೇಮಕ ಮಾಡಿದ್ದಾರೆ. ಇವರುಗಳ ಸೇವೆಯನ್ನು ರೆಗ್ಯುಲರೈಸ್ ಮಾಡಿ ಇವರೂ ನೆಮ್ಮದಿಯಿಂದ ಬಾಳುವಂತೆ ಅವಕಾಶ ಕಲ್ಪಿಸಿಕೊಡಬೇಕು. ಇವರೂ ಸಹ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಎನ್ನುವ ಮಾತನ್ನು ನಾನು ಇಲ್ಲಿ ಹೇಳುತ್ತಿದ್ದೇನೆ.

ಇನ್ನು ಕುಟುಂಬ ಕಲ್ಯಾಣ ಯೋಜನೆ, ಮಿತ ಸಂತಾನ, ಇದರ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ಭಾಷಣವನ್ನು ಬಿಗಿದದ್ದೇ, ಬಿಗಿದದ್ದು. ನಮ್ಮ ಇಂದಿರಾಜಿಯವರು ಈ ಒಂದು ಮಿತ ಸಂತಾನ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಅವರು ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆಯೋ ಎನ್ನುವ ಭಾವನೆಯಿಂದ ಈ ಒಂದು ಸಂತಾನ ಯೋಜನೆಯನ್ನು ತಂದಿದ್ದಾರೆ. ಇದನು ಯಾವುದೇ ಪಕ್ಷವಾಗಲೀ ಒಪ್ಪಿಕೊಳ್ಳಬೇಕು. ಯಾವ ಸರ್ಕಾರ ಬಂದರೂ ಕೂಡ, ಮಿತಸಂತಾನ ಯೋಜನೆಯನ್ನು ಜಾರಿಗೆ ತರದಿದ್ದರೆ ಜನಸಂಖ್ಯೆಯನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇದರ ಬಗ್ಗೆ ಅವರ ಸಹಕಾರ ಭಾವನೆಯಿಂದ ನಡೆದುಕೊಂಡರೆ ನಮ್ಮ ರಾಷ್ಟ್ರಕ್ಕೆ ಉಜ್ವಲ ಭವಿಷ್ಯ ಇರುತ್ತದೆ. ಏಕೆಂದರೆ, ಜನಸಂಖ್ಯೆ ಬೆಳೆಯುತ್ತದೆಯೇ ಹೊರತು, ನೀರು ಭೂಮಿ ಇದ್ದಷ್ಟೇ ಇರುತ್ತದೆ ಜನಸಂಖ್ಯೆ ಬೆಳೆಯುತ್ತಾ ಹೋದರೆ ಕೊನೆಗೆ ಕುಡಿಯುವುದಕ್ಕೆ ನೀರು ಸಿಕ್ಕಲಿಲ್ಲದ ಪರಿಸ್ಥಿತಿ ಬರಬಹುದು. ಯಾರೇ ಆಗಲೀ, ಯಾವ ಪಕ್ಷದವರೇ ಆಗಲೀ ಇದರ ಬಗ್ಗೆ ಗಮನ ಕೊಟ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡು ಹೋದರೆ ನಮ್ಮ ದೇಶಕ್ಕೆ ಉಜ್ವಲ ಭವಿಷ್ಯ ಇರುತ್ತದೆ ಎನ್ನುವ ಮಾತನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಪೌಷ್ಟಿಕ ಆಹಾರವನ್ನು ಒದಗಿಸುವ ಸಲುವಾಗಿ ಹೆಣ್ಣು ಮಕ್ಕಳ ಹಾಗೂ ಮಕ್ಕಳ ಸಲುವಾಗಿ ಅನೇಕ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಾಕಿಕೊಂಡಿರುವುದು ಹೆಮ್ಮೆಯ ವಿಷಯವಾಗಿದೆ. ಅದರಲ್ಲಿಯೂ ಬಡ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸುತ್ತಿರುವುದು ಬಹಳ ಶ್ಲಾಘನೀಯವಾದ ವಿಚಾರವೆಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ವಿದ್ಯಾಖಾತೆಯಲ್ಲಿ ಅನೇಕ ಕಡೆ ಸುಧಾರಣೆಗಳು ಆಗಿವೆ. ಕಟ್ಟಡಗಳ ಬಗ್ಗೆ ಹೇಳುವುದಾದರೆ, ಹಿಂದೆ ೨,೫೦೦ ರೂಪಾಯಿಗಳನ್ನು ಸಹಾಯಧನವಾಗಿ ಕೊಡುತ್ತಿದ್ದರು, ಇದರಲ್ಲಿ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಆಗುತ್ತಾ ಇರಲಿಲ್ಲ, ಇವತ್ತು ನಮ್ಮ ಸರ್ಕಾರ ೪,೫೦೦ ರೂಪಾಯಿಗಳನ್ನು ಕಟ್ಟಡಕ್ಕಾಗಿ ಕೊಡುತ್ತಿದೆ. ಇವತ್ತು ಕಟ್ಟಡಗಳು ಒಳ್ಳೆಯ ರೀತಿಯಲ್ಲಿ ಬರುತ್ತಿವೆ. ಬಡ ಮಕ್ಕಳಿಗೆ ಆಶ್ರಮ ಶಾಲೆಗಳನ್ನು ಸ್ಥಾಪನೆ ಮಾಡಿ ಉಚಿತ ಊಟ ವಸತಿ ಸೌಕರ್ಯವನ್ನು ಏರ್ಪಾಡು ಮಾಡಿರುವುದು ನಮ್ಮ ಸರ್ಕಾರದ ಒಂದು ಉನ್ನತಿ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

೩-೩೦ ಪಿ. ಎಂ.

ನಿರುದ್ಯೋಗ ಸಮಸ್ಯೆ ಬಗ್ಗೆ ಹೇಳಬೇಕಾದರೆ ಈ ಸಮಸ್ಯೆಯನ್ನು ದೇವರೇ ಬಿಡಿಸಬೇಕು, ಇನ್ನು ಯಾರು ಬಿಡಿಸುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತೇನೆ, ಆದರೂ ನಮ್ಮ ಸರ್ಕಾರಕ್ಕೆ ಎಷ್ಟರಮಟ್ಟಿಗೆ ಶಕ್ತಿಯಿದೆಯೋ ಅಷ್ಟನ್ನೂ ಮಾಡುತ್ತಿದೆ. ಗರೀಬಿ ಹಟಾವೋ ಅಂದರೆ ಬಡತನ ಹೋಗಲಾಡಿಸಲಿಕ್ಕೆ ಶಕ್ತಿಯಿಲ್ಲದಿದ್ದರೂ ಕೂಡ ಬಡವರಿಗೆ ಹರಿಜನ ಗಿರಿಜನರಿಗೆ. ಶೇಕಡ ೪ ರಷ್ಟು ಸ್ಥಾನಮಾನಗಳನ್ನು ಕೊಟ್ಟು ಅವರು ಮುಂದೆ ಬರುವಂತೆ ಮಾಡಬೇಕು ಮಹಾತ್ಮ ಗಾಂಧೀಜಿಯವರ ತತ್ವದಂತೆ ಹಳ್ಳಿಗಳ ಉದ್ಧಾರ ಹರಿಜನರ ಉದ್ಧಾರ ಮಾಡುವ ದಿಸೆಯಲ್ಲಿ ನಮ್ಮ ಸರ್ಕಾರ ಮುಂದೆ ಸಾಗಿದೆ, ಇದು ಸಂತೋಷಕರವಾದ ಸಂಗತಿಯೆಂದು ಹೇಳುತ್ತೇನೆ. ಮತ್ತೆ ಕೂಲಿಕಾರರಿಗೆ ಮನೆಗಳು ಇರಲಿಲ್ಲ ಅವರಿಗೆ ಮನೆಗಳನ್ನು ಕೊಟ್ಟಿದೆ, ಜಾಗಗಳನ್ನು ಕೊಟ್ಟಿದೆ. ಅಲ್ಲದೆ ಅಂಗವಿಕಲರಿಗೆ ವಿದ್ಯಾರ್ಥಿಗಳಿಗೆ, ವೃದ್ಧಾಪ್ಯರಿಗೆ ವೃದ್ಧಾಪ್ಯವೇತನ ಕೊಟ್ಟಿದೆ.

ವಿಧವೆಯಾದವರಿಗೆ ಯಾರಿಗೆ ಹೊಲ ಇಲ್ಲ, ಮನೆಯಿಲ್ಲ ಅಂತಹವರಿಗೆ ಒಂದು ವೇತನ ಕೊಟ್ಟರೆ ಅವರು ಕೂಡ ನೆಮ್ಮದಿಯಾಗಿ ಜೀವನ ಮಾಡವುದಕ್ಕೆ ಅನುಕೂಲವಾಗುತ್ತಿತ್ತು ಎಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸೌಲಭ್ಯಗಳನ್ನು ನಮ್ಮ ಸರ್ಕಾರ ಒದಗಿಸಿದೆ. ವಿರೋಧಪಕ್ಷದ ನಾಯಕರು ಬೋರ್‌ವೆಲ್‌ಗಳ ಬಗ್ಗೆ ಪ್ರಸ್ತಾಪ ಮಾಡಿದರು ಅನೇಕ ಕಡೆ ಬೋರ್‌ವೆಲ್‌ಗಳು ಚನ್ನಾಗಿ ಕೆಲಸ ಮಾಡುತ್ತಿಲ್ಲ, ಮಿಷನ್‌ಗಳು ಯಾವಾಗ ಕೈ ಕೊಡುತ್ತವೆ ಎಂದು ಹೇಳುವುದಕ್ಕೆ ಆಗುವುದಿಲ್ಲ, ಪಂಪ್ ಒಡೆಯುವುದರಲ್ಲಿಯೇ ಕೆಡುತ್ತದೆ ಸರ್ಕಾರ ಈ ಕಡೆ ಗಮನ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ನಮ್ಮ ಸರ್ಕಾರ ರೈತರ ಪರವಾಗಿ ಹೆಚ್ಚಿನ ಸಹಾನುಭೂತಿ ತೋರಿಸಿ ಉತ್ತಮ ತರಗತಿಯ ಬೀಜ ಗೊಬ್ಬರ ಹಾಗೂ ಔಷಧಿಗಳನ್ನು ಒದಗಿಸುತ್ತಿದೆ. ಸಿ. ಹೆಚ್. ೫ ಎನ್ನುವ ಹೊಸ ತಳಿಗಳನ್ನು ತಂದಿದೆ. ಸರ್ಕಾರವೇ ನಿರ್ವಹಣೆ ವಹಿಸಿಕೊಂಡು ಹೊಸ ಹೊಸ ತಳಿಗಳನ್ನು ರೈತರಿಗೆ ಒದಗಿಸಿಕೊಡುವುದರಿಂದ ರೈತ ಮುಂದೆ ಬರುತ್ತಾನೆಂದು ಸರ್ಕಾರ ಗಮನದಲ್ಲಿಟ್ಟಿದೆ, ಇನ್ನೊಂದು ವಿಷಯ ಅಂದರೆ ಅಗ್ರಿಕಲ್ಚರ್‌ಟ್ಯಾಕ್ಸ್ ಎಂದು ಹಾಕಿದ್ದಾರೆ, ಹುಟ್ಟುವಳಿ ಟ್ಯಾಕ್ಸ್ ಎಂದು ಹಾಕಿದ್ದಾರೆ ದಯವಿಟ್ಟು ಅದನ್ನು ಕಡಿಮೆ ಮಾಡಬೇಕೆಂದು ಸಭೆಯ ಮುಂದೆ ಸರ್ಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ, ರೈತ ದೇಶದ ಬೆನ್ನೆಲುಬು ಇಂತ ಟ್ಯಾಕ್ಸ್‌ಗಳನ್ನು ತೆಗೆದುಹಾಕಿದರೆ ಅವನು ಹೆಚ್ಚು ಬೆಳೆಯುವುದಕ್ಕೆ ಅನುಕೂಲವಾಗುತ್ತದೆಂದು ಈ ವಿಷಯಗಳನ್ನು ಸಭೆಯ ಮುಂದೆ ಸಾದರಪಡಿಸುತ್ತೇನೆ. ಇನ್ನು ಅನೇಕತರ ಕೈಗಾರಿಕಾಮಂದಿಗೆ ಬ್ಯಾಂಕುಗಳ ಮೂಲಕ ಸಾಲದ ಸಹಕಾರ ಕೊಟ್ಟು ಧನಸಹಾಯ ಮಾಡಿ ಅವರು ಮುಂದೆ ಬರುವಂತೆ ಮಾಡಿದೆ. ಕೋಳಿ ಸಾಗಾಣಿಕೆ, ಕುರಿ ಸಾಕಾಣಿಕೆ ಅಭಿವೃದ್ಧಿ ಮಾಡಿರುವುದಲ್ಲದೆ, ನಮ್ಮ ಸರ್ಕಾರ ಪ್ರತಿಯೊಬ್ಬ ಕೂಲಿಕಾರ ೮ ತಾಸು ಕೆಲಸ ಮಾಡಿದರೆ ೫ ರೂಪಾಯಿ ಸಂಬಳ ಕೊಡುವಂತೆ ನಿಗಧಿಪಡಿಸಿದೆ. ಅನೇಕ ಊರುಗಳಿಗೆ ಲೈಟಿನ ಸೌಕರ್ಯ ಹಾಗೂ ರೋಡಿನ ಸೌಕರ್ಯವನ್ನು ನಮ್ಮ ಸರ್ಕಾರ ಏರ್ಪಡಿಸಿದೆ ಎಂದು ಹೇಳಬಯಸುತ್ತೇನೆ.

ಇನ್ನು ಕರಕುಶಲಗಾರರಿಗೆ ಅನೇಕ ಸಂಘಸಂಸ್ಥೆಗಳನ್ನು ಸ್ಥಾಪಿಸಿದೆ. ನನ್ನ ಒಂದು ಮನವಿ ಏನು ಎಂದರೆ ನೇಕಾರ ಬಂದುಗಳಿಗೆ ನಮ್ಮ ಕಡೆ ಇಳಕಲ್ ಬನಹಟ್ಟಿ, ರಬಕಲ್ ಜಾಡಿ ಎಂದು ಪ್ರಸಿದ್ಧವಾಗಿವೆ. ಇಂಥ ನೇಕಾರ ಬಂಧುಗಳಿಗೆ ೧೦೦-೨೦೦ ಹೆಚ್ಚಿನ ಮಗ್ಗಗಳನ್ನು ಒದಗಿಸಿದರೆ ಆ ಮೂಲಕ ರಾಷ್ಟ್ರದ ಅಭಿವೃದ್ಧಿ ಆಗುವುದಲ್ಲದೆ. ನೇಕಾರರ ಒಂದು ಶಕ್ತಿಯನ್ನು ಹೆಚ್ಚಿಸಿದಂತಾಗುತ್ತದೆ. ಇತ್ತ ಕಡೆ ಸರ್ಕಾರ ನಿಗಾಕೊಡಬೇಕೆಂದು ಸಾದರ ಪಡಿಸುತ್ತೇನೆ. ಇನ್ನು ರೈತರ ಮೇಲೆ ಹಾಕುವ ಬೆಟರ್‌ಮೆಂಟ್ ಲೆವಿ ಬಗ್ಗೆ ಒಂದು ಮಾತು ಹೇಳುತ್ತೇನೆ. ರೈತ ತನ್ನ ಜಮೀನಿನಲ್ಲಿ ನೀರು ಉಪಯೋಗಿಸಿ ಅದರಿಂದ ಪ್ರತಿಫಲ ಹೊಂದಿದ ಮೇಲೆ ಬೆಟರಮೆಂಟ್ ಲೆವಿ ಹಾಕಲಿ ಅದಕ್ಕಿಂತ ಮುಂಚಿತವಾಗಿಯೇ ಹಾಕುವುದು ಬೇಡ ಎಂದು ಹೇಳುತ್ತೇನೆ. ಇನ್ನು ನಮ್ಮ ಸರ್ಕಾರ ಭೂ ಹೀನ ಕುಟುಂಬಸ್ತರಿಗೆ ಭೂಮಿ ನೀಡುವಂತೆ ಯೋಜನೆಯನ್ನು ಕೈಗೊಂಡಿದೆ. ಎಷ್ಟೋ ಜನ ಬಡವರು ಅನೇಕ ವರ್ಷಗಳಿಂದ ಸರ್ಕಾರದಿಂದ ಮಂಜೂರು ಆಗದೇ ಇದ್ದಂಥ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದಾರೆ. ಅಂತಹವರಿಗೆ ಆ ಜಮೀನುಗಳನ್ನು ಬಿಟ್ಟುಕೊಟ್ಟರೆ ತಮ್ಮ ಬಡತನವನ್ನು ನೀಗಿಕೊಳ್ಳಲು ಅನುಕೂಲವಾಗುತ್ತದೆ. ಮಾತು ಕಡಿಮೆ ಮಾಡಿ ದುಡಿಮೆ ಜಾಸ್ತಿ ಮಾಡಿ ಎಂದು ಹೇಳುತ್ತಿದ್ದಾರೆ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜೆ. ಹೆಚ್. ಪಟೇಲ್ (ಚನ್ನಗಿರಿ).—ಸನ್ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ವಂದನೆಯನ್ನು ಪ್ರಸ್ತಾಪಿಸುತ್ತಾ ರಾಜ್ಯಪಾಲರ ಭಾಷಣ ಸರ್ವೆಸಾಮಾನ್ಯವಾಗಿ ಸಾಂಪ್ರದಾಯಿಕ ವಾಗಿ ಒಂದು ಸರ್ಕಾರ ಒಂದು ವರ್ಷದಲ್ಲಿ ಏನೇನು ಕನಸುಗಳನ್ನು ಕಂಡಿತ್ತು ಅದರಲ್ಲಿ ಎಷ್ಟು ನೆನಸಾ ಯಿತು ಇವುಗಳ ಒಂದು ಸಂಕ್ಷಿಪ್ತ ವರದಿಯನ್ನು ಸಾಂಪ್ರದಾಯಿಕವಾಗಿ ಕೊಟ್ಟಿದ್ದಾರೆ. ಅದರ ಪ್ರಕಾರ ರಾಜ್ಯಸರ್ಕಾರ ನಡೆಸತಕ್ಕ ಜನರ ಪರವಾಗಿ ಅವರ ಮೆಚ್ಚಿಗೆ ವ್ಯಕ್ತಪಡಿಸುತ್ತಾ ರಾಜ್ಯಪಾಲರು ನಮಗೆ ಒಂದು ಭಾಷಣವನ್ನು ಮಾಡಿದ್ದಾರೆ. ಈ ವರ್ಷದ ರಾಜ್ಯಪಾಲರ ಭಾಷಣವನ್ನು ಕಳೆದ ವರ್ಷದ ರಾಜ್ಯ ಪಾಲರ ಬಾಷಣಕ್ಕೆ ಸ್ವಲ್ಪ ನಾವು ಹೋಲಿಸಿ ನೋಡಿದರೆ ಏನಾಗಿದೆ ಅಥವಾ ಏನು ಇಲ್ಲ ಎನ್ನುವುದು ಅವರ ವರದಿಯಲ್ಲಿ ಅವರ ಭಾಷಣದಲ್ಲಿ ಬರೆದಿದೆ. ಕಳೆದ ವರ್ಷ ರಾಜ್ಯಪಾಲರ ಭಾಷಣದಲ್ಲಿ ಬಹುಶಃ ಇದ್ದು ದಕ್ಕಿಂತ ಕೆಲವು ಹೆಚ್ಚಿನ ಅಂಶಗಳು ಇರಬಹುದು. ನಾನು ಒಂದೆರಡು ವಿವರಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ಬೇರೆ ವಿಚಾರಗಳಿಗೆ ಹೋಗುವ ವಿಚಾರ ನನಗೆ ಇಲ್ಲ, ನಾನು ಸಾರ್ವತ್ರಿಕವಾದ ವಿಚಾರ ಮಾತ್ರ ಪ್ರಸ್ತಾಪ ಮಾಡುತ್ತೇನೆ. ಹೋದ ವರ್ಷ ರಾಜ್ಯಪಾಲರ ಭಾಷಣದಲ್ಲಿರುವ ಎರಡು ಅಂಶಗಳನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ಯಥಾಪ್ರಕಾರ ಚುನಾವಣೆಗಳು ಮುಗಿದು, ನಾವು ಗೆದ್ದು ಬಂದಿದ್ದೇವೆ. ನಮ್ಮ ಆಹಾರ ಸ್ಟಾಕ್ ಇದೆ. ಇಷ್ಟು ಔಷಧಿ ಕೊಟ್ಟಿದ್ದೇವೆ. ಹೀಗೆ ಒಂದೇ ನಮೂನೆಯ ಸಂಪ್ರದಾಯ ಇದೆ. ಅದರ ಪ್ರಕಾರ ಹೋದ ವರ್ಷ ೧೫,೬೫೨ ಕಡಿಮೆ ಬೆಲೆಗೆ ಮಾರಾಟ ಮಾಡತಕ್ಕ ಅಂಗಡಿಗಳು ಇದ್ದವು. ಈ ವರ್ಷ ೧೫ ಸಾವಿರಕ್ಕೆ ಇಳಿದಿವೆ, ಅವರ ವರದಿ ಪ್ರಕಾರ. ನನಗನ್ನಿಸುತ್ತದೆ ಏತಕ್ಕೆ ಈ ಅಂಗಡಿಗಳು ಬೆಳೆಯಲಿಲ್ಲ, ಏನೋ ಧಾರಣೆವಾಸಿಗಳು ಏರು ತ್ತಿವೆ. ಈ ಕೇಂದ್ರದಲ್ಲಿ ಜನತಾಪಕ್ಷ ಅಧಿಕಾರಕ್ಕೆ ಬಂದಮೇಲೆ ಏನೆಲ್ಲ ಅನಾಹುತವಾಗುತ್ತಿದೆ, ತುರ್ತುಪರಿ ಸ್ಥಿತಿ ಕಾಲದಲ್ಲಿ ಸ್ವರ್ಗಲೋಕದಲ್ಲಿದ್ದೆವು ಎಂದು ಮಾನ್ಯ ಸದಸ್ಯರು ಭಾಷಣ ಮಾಡುತ್ತಿದ್ದರು.

ಹಾಗಿದ್ದರೆ ಈ ವರ್ಷ ಅಂಗಡಿಗಳ ಅವಶ್ಯಕತೆ ಕಡಿಮೆ ಇರಬೇಕಾದರೆ, ಕೇಂದ್ರದಲ್ಲಿ ಜನತಾಪಕ್ಷದ ಸರ್ಕಾರ ಏನಿದೆ, ಅದರ ಒಂದು ಆರ್ಥಿಕ ಮತ್ತು ಸಾಮಾಜಿಕ ನೀತಿ ಏನಿದೆ, ಅದರ ಒಂದು ಕಾರಣದಿಂದ ಬೆಲೆಗಳು ಇಳಿದು, ಇಡೀ ರಾಷ್ಟ್ರದಲ್ಲಿ ಬೆಲೆಗಳು ಇಳಿದಿರುವುದರಿಂದ ಈ ನ್ಯಾಯಬೆಲೆ ಅಂಗಡಿಗಳ ಅವಶ್ಯ ಕತೆ ಇಲ್ಲವೆಂದು ಕಾಣುತ್ತಿದೆ. ಒಂದು ವೇಳೆ ಬೆಲೆಗಳು ಜಾಸ್ತಿಯಾದರೆ ನ್ಯಾಯಬೆಲೆ ಅಂಗಡಿಗಳು ಜಾಸ್ತಿ ಬೇಕಾಗುತ್ತದೆ.

ಶ್ರೀ ಜಿ. ರಾಮೇಗೌಡ.– ಕೆಲವು ಅಂಗಡಿಗಳವರು ನಮ್ಮಿಂದ ಒಳ್ಳೆಯ ಗೋಧಿಯನ್ನು ಪಡೆದು ಕೊಂಡು ಜನರಿಗೆ ಕೆಟ್ಟ ಗೋಧಿ ಮಾರಾಟ ಮಾಡಿದ್ದು ಕಂಡುಬಂದಿದ್ದರಿಂದ, ಮತ್ತೆ ಕೆಲವು ಅಂಗಡಿಗಳ ವರು ೨ ಮೂಟೆ ಸಕ್ಕರೆಯನ್ನು ತೆಗೆದುಕೊಂಡು ಒಂದು ಮೂಟೆಯನ್ನು ಹೋಟೆಲಿಗೆ ಸಾಗಿಸಿ ಇನ್ನೊಂದು ಮೂಟೆಯನ್ನು ಜನರಿಗೆ ಹಂಚಿದ್ದು ಕಂಡುಬಂದಿದ್ದರಿಂದ ಕೆಲವರು ತಪ್ಪು ಲೆಕ್ಕ ಇಟ್ಟಿದ್ದ ರಿಂದ ಮತ್ತೆ ಕೆಲವರು ಕಾಲಕ್ಕೆ ಸರಿಯಾಗಿ ತಮ್ಮ ಅಂಗಡಿ ಬಾಗಿಲುಗಳನ್ನು ತೆರೆಯದ ಕಾರಣ, ಮತ್ತೆ ಕೆಲವರು ಸ್ಯಾಂಪಲನ್ನು ಅಂಗಡಿ ಮುಂದೆ ಇಟ್ಟಿರದ ಕಾರಣದಿಂದ ಅವರ ಲೈಸೆನ್ಸನ್ನು ರದ್ದು ಮಾಡಿ ದ್ದೇವೆ. ಈ ಕಾರಣಗಳಿಂದ ಅಂಗಡಿಗಳ ಸಂಖ್ಯೆ ಕಡಿಮೆಯಾಗಿದೆ, ಒಳ್ಳೆಯ ಜನರು ಮುಂದೆ ಬಂದರೆ ಈ ಅಂಗಡಿಗಳ ಸಂಖ್ಯೆ ಜಾಸ್ತಿ ಮಾಡಲು ನಾವು ಸರ್ವಪ್ರಯತ್ನ ಮಾಡುತ್ತೇವೆ.

ಶ್ರೀ ಜೆ. ಎಚ್. ಪಟೇಲ್.– ನೀತಿವಂತರನ್ನೇ ತಾವು ಇಟ್ಟುಕೊಳ್ಳುತ್ತೇವೆಂದರೆ, ೧೫ ಸಾವಿರದಲ್ಲಿ ೫ ಸಾವಿರ ಜನರನ್ನೂ ಸಹ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಯಾರು ತಮಗೆ ಬೇಡವೋ ಅಂತಹವ ರನ್ನು ಮಾತ್ರ ತೆಗೆಯುತ್ತೀರಿ. ಒಳ್ಳೆಯವರನ್ನು ತೆಗೆಯಲು ನಿಮಗೆ ಶಕ್ತಿ ಎಲ್ಲಿದೆ ?

ಇನ್ನು ರಾಜ್ಯಪಾಲರ ಭಾಷಣದಲ್ಲಿ ಇನ್ನೊಂದು ಆಶ್ಚರ್ಯಕರವಾದಂಥ ಸಂಗತಿಯನ್ನು ನೋಡಿದೆ. ಇಲ್ಲಿ ಜನರಿಗೆ ಆರೋಗ್ಯ ಸೇವೆಯನ್ನು ಚೆನ್ನಾಗಿ ನೀಡಿದ್ದೇವೆಂದು ಹೇಳಿದ್ದಾರೆ. ೯೦೦ ಜನಕ್ಕೆ ಒಂದರಂತೆ ಹಾಸಿಗೆ ಸೌಲಭ್ಯವಿದೆ ಎಂದು ಹೇಳಿದ್ದಾರೆ. ಪ್ರತಿ ೭೫೦೦ ಜನಕ್ಕೆ ಒಬ್ಬರಂತೆ ವೈದ್ಯರ ಸೇವೆಯು ಸೌಲಭ್ಯ ವಿದೆ ಎಂದು ಹೇಳಿದ್ದಾರೆ. ಅದೇ ಹೋದವರ್ಷದ ಭಾಷಣದಲ್ಲಿ ವೈದ್ಯರ ಸಂಖ್ಯೆ ೩೮೮೩ ಇದ್ದರೆ, ೭೫೦೦ ವ್ಯಕ್ತಿಗಳಿಗೆ ಒಬ್ಬ ವೈದ್ಯನ ಸೇವೆ ದೊರೆಯುತ್ತಿದೆ ಎಂದು ಹೇಳಿದ್ದಾರೆ. ಈ ಸಲ ಬಹಳ ಸುಧಾ ರಣೆಯಾಗಿರಬೇಕೆಂದು ನಾನು ತಿಳಿದುಕೊಂಡಿದ್ದೆ. ಆದರೆ ೩೮೮೩ ಜನ ಡಾಕ್ಟರುಗಳಿದ್ದವರು ೪ ಸಾವಿರ ಜನರಿದ್ದಾರೆ. ಅಂದರೆ ೧೧೭ ಜನ ಡಾಕ್ಟರ್‌ಗಳು ಜಾಸ್ತಿಯಾದಂತೆ ಆಯಿತು. ಈ ವಲಯದಲ್ಲಿ ಎಷ್ಟೊಂದು ಸುಧಾರಣೆಯಾಗಿದೆ ಎಂಬುದಾಗಿ ನನಗೆ ಆಶ್ಚರ್ಯವಾಯಿತು. ಹೋದಸಲ ೭೫೦೦ ಜನ

ವ್ಯಕ್ತಿಗಳಿಗೆ ಒಬ್ಬ ವೈದ್ಯರ ಸೇವೆ ಇದ್ದರೆ ಈ ಸಲವೂ ಅಷ್ಟೇ ಇದೆ. ಇದನ್ನು ನಾವು ಬೇರೆ ದೇಶಗಳಲ್ಲಿ ಹೋಲಿಸಿ ನೋಡಿದ್ದೇ ಆದರೆ, ಬ್ರಿಟನ್‌ನಲ್ಲಿ ಪ್ರತಿ ೧೩೦೦ ಜನರಿಗೆ ಒಬ್ಬ ಡಾಕ್ಟರ್ ಇದ್ದಾರೆ. ಸ್ವೀಡನ್‌ನಲ್ಲಿ ೮೯೦ ಜನರಿಗೆ ಒಬ್ಬ ಡಾಕ್ಟರ್ ಇದ್ದಾರೆ. ಭಾರತದಲ್ಲಿ ೫೨೦೦ ಜನರಿಗೆ ಒಬ್ಬ ಡಾಕ್ಟರ್ ಇದ್ದರೆ, ನಮ್ಮ ರಾಜ್ಯದಲ್ಲಿ ೭೫೦೦ ಜನರಿಗೆ ಒಬ್ಬ ಡಾಕ್ಟರ್ ಇದ್ದಾರೆಂದು ಅರ್ಥವಾಯಿತು. ಕಳೆದ ೩೦ ವರ್ಷಗಳ ಇವರ ಯಜಮಾನಿಕೆಯಲ್ಲಿ ಈ ರಾಷ್ಟ್ರ ಯಾವ ಮಟ್ಟದಲ್ಲಿ ಬಂದು ನಿಂತಿದೆ ಎಂಬುದು ಇದರಿಂದಲೇ ತಿಳಿಯುತ್ತದೆ. ನಮ್ಮಲ್ಲಿ ಕಾಲೇಜಿನಿಂದ ಹೊರಗೆ ಬಂದಂಥ ಡಾಕ್ಟರ್ಸ್ ಇದ್ದಾರೆ, ಆದರೆ ನಮ್ಮ ಒಂದು ಆರ್ಥಿಕ ಪರಿಸ್ಥಿತಿಯ ಕಾರಣದಿಂದ ಅವರಿಗೆ ಕೆಲಸ ಕೊಡಲು ಸಾಧ್ಯವಾಗಿಲ್ಲ. ಇದರಿಂದ ಈ ಡಾಕ್ಟರುಗಳು ಬೇರೆ ದೇಶಗಳಿಗೆ ಹೋಗಿ ಕೆಲಸ ಪಡೆಯುತ್ತಾರೆ. ನಮ್ಮಲ್ಲಿರತಕ್ಕಂಥ ಇಂಜಿನಿಯರುಗಳಿಗೂ ಸಹ ಕೆಲಸವಿಲ್ಲದೆ, ಕೆಲವರು ಸೈಕಲ್ ಷಾಪ್‌ಗಳನ್ನು ಇಟ್ಟಿದ್ದಾರೆ. ಮತ್ತೆ ಕೆಲವರು ಪೆಟ್ರೋಲ ಬಂಕ್‌ಗಳನ್ನು ಇಟ್ಟುಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಅನೇಕ ರಸ್ತೆ ಕೆಲಸ ಸೇತುವೆಗಳ ಕೆಲಸ ಗೃಹನಿರ್ಮಾಣಗಳ ಕೆಲಸ ಆಗಬೇಕಾಗಿದ್ದರೂ ಸಹ ಈ ಇಂಜಿನಿಯರುಗಳಿಗೆ ನಾವು ಕೆಲಸ ಕೊಡುವ ಸ್ಥಿತಿಯಲ್ಲಿ ಇಲ್ಲ. ಆದ ಕಾರಣ ಇವರುಗಳು ಸಹ ಬೇರೆ ದೇಶಗಳಿಗೆ ಕೆಲಸ ಹುಡುಕಿಕೊಂಡ ಹೋಗುತ್ತಿದ್ದಾರೆ. ನಮ್ಮಲ್ಲಿ ೧.೧೩ ಕೋಟಿ ವಿದ್ಯಾವಂತ ನಿರುದ್ಯೋಗಿಗಳಿದ್ದಾರೆಂದು ಹೇಳುತ್ತೀರಿ. ಆದರೆ ಹಳ್ಳಿಗಳಲ್ಲಿ ೫ ಕೋಟಿಯಷ್ಟು ಅವಿದ್ಯಾವಂತ ನಿರುದ್ಯೋಗಿಗಳಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ನಮ್ಮ ರಾಜ್ಯದಲ್ಲಿ ಇದ್ದಾರೆಯೇ ?

ಶ್ರೀ ಜೆ. ಎಚ್. ಪಟೇಲ್.—ನಾನು ಹೇಳಿದ್ದು ಭಾರತದಲ್ಲಿ. ಇವರಿಂದ ಯಾವ ರೀತಿ ದುಡಿಸಿಕೊಳ್ಳಬೇಕೆಂಬ ಬಗ್ಗೆ ತಾವು ಯೋಚನೆ ಮಾಡಿಲ್ಲ. ಕಳೆದ ೩೦ ವರ್ಷಗಳ ತಮ್ಮ ಆಡಳಿತದಲ್ಲಿ ಈ ಒಂದು ರಾಜಕೀಯ ಗರ್ಭದೊಳಗೆ ಭ್ರೂಣದ ರೋಗವನ್ನು ಏನು ಬೆಳೆಸಿದ್ದೀರಿ, ಅದನ್ನು ೧೦-೧೧ ತಿಂಗಳುಗಳಲ್ಲಿ ಬೇರೆ ಸರ್ಕಾರ ಆಡಳಿತಕ್ಕೆ ಬಂದರೆ ಹೋಗಲಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಬಹಳ ಮಾಡಿದ್ದೇವೆ, ಬಡವರನ್ನು ಉದ್ಧಾರ ಮಾಡಿದ್ದೇವೆ. ಅದಕ್ಕೆ ಹರಿಜನರು ನಮಗೆ ಮತ ಕೊಟ್ಟಿದ್ದಾರೆಂದು ತಾವು ಹೇಳುವುದಾದರೆ.........

ಶ್ರೀ ಕೆ. ಎಚ್. ರಂಗನಾಥ್.—ತಾವು ೩೦ ವರ್ಷ, ಮತ್ತು ೧೧ ತಿಂಗಳು ಇದರ ಲೆಕ್ಕವನ್ನೇ ಹಾಕುತ್ತಾ ಹೋದರೆ ನಾವು ಮತ್ತು ನೀವು ತೊಂದರೆಗೆ ಈಡಾಗುತ್ತೇವೆ. ಏಕೆಂದರೆ ಈಗಿನ ಪ್ರಧಾನಿಯವರು ೧೯೩೭ ರಿಂದಲೂ ಕಾಂಗ್ರೆಸ್‌ನಲ್ಲಿದ್ದವರು ಮತ್ತು ಈಗ ಕೇಂದ್ರದಲ್ಲಿ ಮಂತ್ರಿಗಳಾಗಿರುವವ ಪೈಕಿ ಅನೇಕರು ಕಾಂಗ್ರೆಸ್ ಪಕ್ಷದಲ್ಲಿದ್ದವರೇ ಆಗಿದ್ದಾರೆ. ಕಳೆದ ೧೧ ತಿಂಗಳುಗಳಿಂದ ಹೊಸದಾಗಿ ಮಂತ್ರಿಗಳಾಗಿರುವವರೆಂದರೆ, ಮಧುದಂಡವತೆ, ಫರ್ನಾಂಡಿಸ್, ಕೌಸಿಕ್ ಮುಂತಾದವರು ಮಾತ್ರ. ಕಳೆದ ೩೦ ವರ್ಷಗಳ ಆಡಳಿತದಲ್ಲಿ ಒಂದೊಂದು ಇಟ್ಟಿಗೆ ಅಥವಾ ಒಂದೊಂದು ಕಲ್ಲನ್ನು ಇಟ್ಟಂತಹವರ ಪೈಕಿ ಬಹಳ ಜನರು ನಿಮ್ಮ ಕಡೆಯೇ ಇದ್ದಾರೆ. ಅದಕಾರಣ ತಾವು ೩೦ ವರ್ಷಗಳ ಚರಿತ್ರೆ, ೧೧ ತಿಂಗಳ ಚರಿತ್ರೆಯನ್ನು ಈಗ ಹೇಳುವುದು ಬೇಡ. ಇರತಕ್ಕಂಥ ವಾಸ್ತವಾಂಶವನ್ನು ತೆಗೆದುಕೊಂಡು ತಾವು ಸಲಹೆ ಕೊಡಿ.

ಶ್ರೀ ಜೆ. ಎಚ್. ಪಟೇಲ್.—ಕಳೆದ ೩೦ ವರ್ಷಗಳ ಆಡಳಿತದ ಕಾಲದಲ್ಲಿ ೧೮ ವರ್ಷಗಳ ಕಾಲ ತಂದೆ, ೧೧ ವರ್ಷಗಳ ಕಾಲ ಮಗಳು ರಾಜ್ಯಭಾರ ಮಾಡಿದರು. ಇನ್ನು......

ಶ್ರೀ ಕೆ. ಎಚ್. ರಂಗನಾಥ್.—ತಾವು ಲೋಕಸಭಾ ಸದಸ್ಯರಾಗಿದ್ದವರು. ಈ ಮೊದಲು ಮಾನ್ಯ ಮುರಾರ್ಜಿ ದೇಸಾಯಿ ಅವರು ಅರ್ಥ ಮಂತ್ರಿಗಳಾಗಿದ್ದಾಗ ದಿವಂಗತ ಲೋಹಿಯಾ ಅವರು ಎಕ್ಸ್‌ಪೆಂಡಿಚರ್ ಟ್ಯಾಕ್ಸ್ ಹಾಕಬೇಕೆಂದು ಹೇಳಿದ್ದರು. ಆದರೆ ಅವರು ಅದನ್ನು ಹಾಕಿದರೋ ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಅಂದು ಅವರು ಇದನ್ನು ಕಾರ್ಯಗತ ಮಾಡಿದ್ದರೆ ಈಗಿನ ಸಮಸ್ಯೆಗಳನ್ನು ಎಂದೋ ಬಗೆಹರಿಸಬಹುದಾಗಿತ್ತು.

ಶ್ರೀ ಜೆ. ಎಚ್. ಪಟೇಲ್.—ನಾನು ೩೦ ವರ್ಷದ ವಿಚಾರ ಏಕೆ ಹೇಳಿದೆನೆಂದರೆ, ತಾವು ಹಾಕಿಕೊಂಡು ಬಂದಿರತಕ್ಕಂಥ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಮಾರ್ಗಗಳೇನಿದೆ, ಅದರ ಒಂದು ಪ್ರತಿಫಲವಾಗಿ ಅನಿವಾರ್ಯವಾಗಿ ಕೆಲವು ತಪ್ಪುಗಳಾಗುತ್ತವೆ. ಕೆಲವು ಒಳ್ಳೆಯದೂ ಆಗುತ್ತವೆ. ಈ ಮಾತನ್ನು ಹೇಳುವುದಕ್ಕೆ ಹೇಳಿದೇನೇ ಹೊರತು ಬೇರೆ ಕಾರಣದಿಂದ ಅಲ್ಲ ಕಳೆದ ವರ್ಷದ ರಾಜ್ಯಪಾಲರ ಭಾಷಣ ಮತ್ತು ಈ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಈ ರೀತಿ ಹುಡುಕುತ್ತಾ ಹೋದರೆ ಅಥವಾ ಕಳೆದ ೨೦

ವರ್ಷಗಳ ರಾಜ್ಯಪಾಲರ ಭಾಷಣಗಳನ್ನು ಹುಡುಕುತ್ತಾ ಹೋದರೆ ಅಲ್ಲಿ ಇಲ್ಲಿ ಅಂಕಿಗಳು ವ್ಯತ್ಯಾಸವಾಗಬಹುದೇ ಹೊರತು, ರಾಜ್ಯಪಾಲರುಗಳು ಬದಲಾವಣೆಯಾಗಬಹುದೇ ಹೊರತು, ಆಡಳಿತ ನಡೆಸಿಕೊಂಡು ಬಂದಿರುವ ರೀತಿ ಮಾತ್ರ ಒಂದೇ ರೀತಿಯಾಗಿದೆ ಎಂದು ಹೇಳುವುದಕ್ಕಾಗಿ ಇದನ್ನು ಹೇಳಿದೆ. ಇವರು ಮಾಡಿರುವ ಸಾಧನೆಗಳ ಬಗ್ಗೆ ಇಲ್ಲಿ ಹೇಳಿದ್ದಾರೆ. ಮನೆಗಳನ್ನು ಕಟ್ಟಿಸಿದ್ದೇವೆಂದು ಹೇಳಿದ್ದಾರೆ. ೮೬ ಸಾವಿರ ಮನೆಗಳನ್ನು ಮತ್ತು ೨೫ ಸಾವಿರ ಗುಡಿಸಲುಗಳನ್ನು ಕಟ್ಟಿಸಿದ್ದೇವೆಂದು ಹೇಳಿದ್ದಾರೆ. ಕೇಂದ್ರದಿಂದ ಬರುವ ಹಣವನ್ನು ಇದಕ್ಕಾಗಿ ಉಪಯೋಗಿಸಿಕೊಂಡಿದ್ದಾರೆ. ಅದು ಏನೇ ಇರಲಿ ಇವುಗಳ ಪೈಕಿ ಎಷ್ಟು ವಾಸಕ್ಕೆ ಯೋಗ್ಯವಾಗಿವೆ, ಎಷ್ಟು ಮನೆಗಳಲ್ಲಿ ಜನರು ವಾಸವಾಗಿದ್ದಾರೆಂಬುದನ್ನು ತಾವು ತಿಳಿಸಬೇಕು. ನಾನು ನೋಡಿರುವ ಕಡೆ, ೨೫ ಮನೆಗಳನ್ನು ಒಂದು ಕಡೆ ಕಟ್ಟಿಸಿದರೆ ಅದರಲ್ಲಿ ಕನಿಷ್ಟಪಕ್ಷ ೧೦ ಮನೆಗಳು ವಾಸಕ್ಕೆ ಜನರು ಬರುವುದಕ್ಕೆ ಮುಂಚೆಯೇ ಬಿದ್ದುಹೋಗಿವೆ. ಇದಕ್ಕೆ ಕಾರಣ ತಾವು ಒಂದು ಮನೆಗೆ ಕೇವಲ ಎರಡೂವರೆ ಸಾವಿರ ರೂ.ಗಳನ್ನು ಖರ್ಚು ಮಾಡುವುದು. ಇಷ್ಟು ಅಲ್ಪ ಹಣದಲ್ಲಿ ಯೋಗ್ಯ ಮನೆಗಳನ್ನು ಕಟ್ಟಲು ಎಲ್ಲಿ ಸಾಧ್ಯ ? ಅದೂ ಸಹ ಈ ಮನೆಗಳನ್ನು ಊರ ಹೊರಗೆ ಕಟ್ಟುತ್ತಾರೆ. ಅಂದರೆ ಹರಿಜನರು ಊರ ಹೊರಗಡೆಯೇ ಇರಬೇಕೆಂದುಕೊಂಡು ಆ ರೀತಿ ಕಟ್ಟಿಸುತ್ತೀರಾ ಹೇಗೆ ?

ಅವರ ಒಡೆದು ಆಳುವ ನೀತಿ ಏನಿದೆ ಎಂದರೆ ಮಹಾತ್ಮಾ ಗಾಂಧಿಯವರನ್ನು ಮಾರಿಸಿದರು. ಪಂಡಿತ್ ಜವಾಹರ ಲಾಲ್ ಅವರನ್ನು ಮಾರಿಸಿದರು, ಶ್ರೀಮತಿ ಇಂದಿರಾಗಾಂಧಿಯವರ ಕಾಲದಲ್ಲಿ ಹರಿಜನಗಿರಿಜನರ ಉದ್ಧಾರಕ್ಕಾಗಿ ೨೦ ಅಂಶಗಳ ಹಾಗೂ ೫ ಅಂಶಗಳ ಕಾರ್ಯಕ್ರಮಗಳನ್ನು ಹಾಕಿಕೊಂಡರು. ಅವರಿಗೆ ಮನೆಗಳನ್ನು ಕಟ್ಟಿ ಕೊಟ್ಟರು ತುರ್ತು ಪರಿಸ್ಥಿತಿಯಲ್ಲಿ ಮಾಡಿದ ಶಾಸನ ನಡೆದಂತಹ ವಿಧಾನ ದೇಶದ ಮೇಲೆ ನಡೆದಂತಹ ಬಲಾತ್ಕಾರ ಇವುಗಳನ್ನು ಇವರು ಮರೆಯುತ್ತಿದ್ದಾರೆ. ಅವರು ನಿಜವಾಗಿ ಜನರ ಉದ್ಧಾರಕ್ಕೋಸ್ಕರವಾಗಿ ಅವುಗಳನ್ನು ಮಾಡಿದರೆ ಹೇಗೆ ಎಂಬುದನ್ನು ಮರೆಯಬಾರದು. ತುರ್ತು ಪರಿಸ್ಥಿತಿಯಲ್ಲಿ ನಾವೇನೋ ಜೈಲಿನಲ್ಲಿದ್ದೆವು ಪರವಾಯಿಲ್ಲ. ಆದರೆ ಶ್ರೀಮಾನ್ ಕೆ. ಎಚ್. ರಂಗನಾಥ್ ಅವರ ಮತ್ತು ಶ್ರೀಮಾನ್ ಬಸವಲಿಂಗಪ್ಪನವರ ಹಾಗೂ ಶ್ರೀಮಾನ್ ಪ್ರಭಾಕರ ಅವರ ಹಿಂದೆ ಇರತಕ್ಕ ಜನಗಳಿಗೆ ಅನೇಕ ಹಿಂಸೆಗಳಾಗಿವೆ. ಜೊತೆಗೆ ಅನೂಚಾನವಾಗಿ ಬಂದಿರತಕ್ಕ ಶೋಷಣೆ ಮತ್ತು ದಬ್ಬಾಳಿಕೆಯನ್ನು ಇವರು ಮರೆತಿದ್ದಾರೆಂದು ಕಾಣುತ್ತದೆ. ಈ ಸಂದರ್ಭದಲ್ಲಿ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಕೆಲವರು ಪಕ್ಷಿ ಶಿಕಾರಿ ಮಾಡುತ್ತಾರೆ ಅವರು ಗೌಜಿಗನ ಹಕ್ಕಿಯನ್ನು ಇಟ್ಟುಕೊಂಡು ಅದಕೆ ಪಾಠವನ್ನು ಕಲಿಸುತ್ತಾರೆ. ಈ ಹಕ್ಕಿ ಶಿಕಾರಿ ಮಾಡುವವರ ಮಾತನ್ನು ಕೇಳುತ್ತದೆ. ಈ ಹಕ್ಕಿಗೆ ಸೀಟಿ ಹಾಕಿ ತನ್ನ ಬಳಗವನ್ನೆಲ್ಲಾ ಕರೆಸುವ ತಂತ್ರ ಹೇಳಿಕೊಟ್ಟಿರಲಾಗುತ್ತೆ ಬೇಟೆಗಾರ ಕಾಡಿಗೆ ಶಿಕಾರಿಗಾಗಿ ಈ ಹಕ್ಕಿಯನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾನೆ. ಈ ಹಕ್ಕಿ ಸೀಟಿ ಊದಿದೊಡನೆಯೇ ಅದರ ಬಳಗದ ಹಕ್ಕಿಗಳೆಲ್ಲವೂ ಬರುತ್ತವೆ ಬೇಟೆಗಾರ ಬಲೆ ಬೀಸಿ ಹಿಡಿದು ಈ ಹಕ್ಕಿಗಳನ್ನೆಲ್ಲಾ ಮನೆಗೆ ತೆಗೆದುಕೊಂಡು ಬರುತ್ತಾನೆ ಕೊನೆಗೆ ತಾನು ಸಾಕಿಕೊಂಡಿರತಕ್ಕ ಗೌಜಿಗನ ಒಂದು ಹಕ್ಕಿಯನ್ನು ಬಿಟ್ಟು ಉಳಿದ ಹಕ್ಕಿಗಳೆಲ್ಲವನ್ನೂ ಈ ಬೇಟೆಗಾರ ತಿನ್ನುತ್ತಾನೆ, ಹಾಗೆ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ದೇವರಾಜ್ ಅರಸ್ ಅವರು ಈ ಹರಿಜನ ಮಂತ್ರಿಗಳನ್ನು ಸಾಕಿಕೊಂಡಿದ್ದಾರೆ ಹಾಗೆಯೇ ಶ್ರೀಮಾನ್ ಅಜೀಜ್ ಸೇಟ್ ಅವರನು ಗೌಜಿಗನ ಹಕ್ಕಿಯ ಹಾಗೆ ಸಾಕಿಕೊಂಡು ಮುಸ್ಲಿಮ್ ಜನಾಂಗದವರನ್ನೆಲ್ಲಾ ಹಿಡಿದುಕೊಂಡು ಬಂದಿದ್ದಾರೆ ಈ ರೀತಿ ಆಳಿದ ಅರಸರ ~~ಆಳುವ~~ ಅರಸರು ಈಗ ಈ ರೀತಿ ಬೇಟೆಯಾಡುತ್ತಿದ್ದಾರೆ. ಈ ರೀತಿ ಅವರು ಹರಿಜನರನ್ನು ಉದ್ಧಾರ ಮಾಡುತ್ತಾರೆ ಅದಕ್ಕೋಸ್ಕರ ಹರಿಜನರುಗಳಲ್ಲಿ ಕಾಂಗ್ರೆಸ್ಸಿಗೆ ವೋಟು ಕೊಟ್ಟಿದಾರೆ ಉತ್ತರ ಭಾರತದಲ್ಲಿ ಬಿಹಾರದಲ್ಲಿ, ರಾಜಾಸ್ಥಾನದಲ್ಲಿ, ಹರಿಜನರು ಹಿಂದುಳಿದವರು ಅಲ್ಪಸಂಖ್ಯಾತರು ಏತಕ್ಕೆ ವೋಟು ಕೊಟ್ಟಿದ್ದಾರೆ ಎಂಬುದನ್ನು ನಾನು ಆ ಮೇಲೆ ಹೇಳುತ್ತೇನೆ. ಇಲ್ಲಿ ಭೂಸುಧಾರಣೆಯನ್ನು ಮಾಡಿದ್ದೇವೆ ಎಂದು ಸರ್ಕಾರದವರು ಹೇಳುತ್ತಾರೆ. ಇದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ, ಮತ್ತು ಸಮರ್ಥಿಸುತ್ತೇನೆ. ಆದರೆ ಭೂಸುಧಾರಣೆಯನ್ನು ಜಾರಿಗೆ ತರುವುದರಲ್ಲಿ ಕೆಲವು ಲೋಪದೋಷಗಳು ಇವೆ. ಈ ಭೂಸುಧಾರಣೆಯನ್ನು ಕಾರ್ಯಗತ ಮಾಡುವ ಬಗ್ಗೆ ಭೂ ನ್ಯಾಯ ಮಂಡಲಿಗಳು ಏನಿವೆ ಇವು ಅನ್ಯಾಯ ಮಂಡಲಿಗಳಾಗಿವೆ. ಭೂ ನ್ಯಾಯಮಂಡಲಿಯಲ್ಲಿರತಕ್ಕ ಖಾಸಗೀ ಸದಸ್ಯರ ಪೈಕಿ ಆಳುವ ಪಕ್ಷಕ್ಕೆ ಸೇರಿದವರು ಕೆಲವರು ಇರಬಹುದು ನಮ್ಮ ಪಕ್ಷಕ್ಕೆ ಸೇರಿದವರು ಕೆಲವರು ಇರಬಹುದು. ಆದರೆ ಇದರಲ್ಲಿ ನಡೆಯುತಕ್ಕಂಥಾ ಕಾರ್ಯಕ್ರಮ ಹೇಗೆ ಎಂದರೆ ಒಂದು ಕಡೆ ಗೇಣಿದಾರನ ಕುತ್ತಿಗೆಗೆ ಹಗ್ಗ ಹಾಕಿದ್ದಾರೆ. ಮತ್ತೊಂದು ಕಡೆ ಭೂಮಾಲೀಕನ ಕಾಲಿಗೆ ಹಗ್ಗ ಕಟ್ಟಿದ್ದಾರೆ. ಈ ಎರಡು ಹಗ್ಗಗಳನ್ನೂ ಭೂನ್ಯಾಯ ಮಂಡಲಿಯವರು ಜಗ್ಗುತ್ತಿದ್ದಾರೆ ಭೂನ್ಯಾಯ ಮಂಡಲಿಯಲ್ಲಿ

ರುವ ಕೇಸುಗಳು ತೀರ್ಮಾನವಾದರೆ ಭೂನ್ಯಾಯ ಮಂಡಲಿಯಲ್ಲಿತಕ್ಕ ಸದಸ್ಯರಿಗೆ ಬರತಕ್ಕ ವರಮಾನ ಕಡಿಮೆಯಾಗುತ್ತದೆ ಎನ್ನುವ ಕಾರಣದಿಂದ ವಿನಾ ಕಾರಣ ೭ಲಕ್ಷ ಅರ್ಜಿಗಳ ಪೈಕಿ ೩ ಲಕ್ಷ ಅರ್ಜಿಗಳನ್ನು ಮಾತ್ರ ವಿಲೇ ಮಾಡಿದ್ದಾರೆ ಅವರು ಪ್ರಾಮಾಣಿಕತೆಯಿಂದಕೆಲಸ ಮಾಡಬೇಕು . ಭೂನ್ಯಾಯ ಮಂಡಲಿಯಲ್ಲಿರುವವರು ಪ್ರಾಮಾಣಿಕವಾಗಿ ಕೆಲಸ ಮಾಡದೆ ಇರುವುದರಿಂದ ಯಾರು ಅಧಿಕಾರಿದಲ್ಲಿರುತ್ತಾರೆಯೋ ಅವರು ಯಜ್ಞಪಶುಗಳಾಗುತ್ತಾರೆ,

ಇದರಲ್ಲಿ ಒಂದು ವಿಷಯ ಇದೆ. ವರ್ಗ ಮತ್ತು ವರ್ಗ ಸಂಘರ್ಷ ಎಂದು ಇದೆ. ವರ್ಗ ಸಂಘರ್ಷ ಎನ್ನುವುದು ಬಹಳ ಜನಗಳಿಗೆ ಗೊತ್ತಿಲ್ಲ, ವರ್ಗ ಮತ್ತು ಜಾತಿಯ ಬಗ್ಗೆ ನಮ್ಮನಾಯಕರಾದ ಶ್ರೀ ರಾಮ ಮನೋಹರ ಲೋಹಿಯಾ ಅವರು ಕಾರ್ಲ್ ಮಾರ್ಕ್ಸ್ ಅವರು ಮತ್ತು ಮಹಾತ್ಮ ಗಾಂಧಿಯವರು ವರ್ಗ ಮತ್ತು ಜಾತಿಯನ್ನು ವಿಶ್ಲೇಷಣೆ ಮಾಡಿ ಹೇಳಿದ್ದಾರೆ. ವರ್ಗವಾದಿಗಳೂ ಕೆಲವು ತಪ್ಪು ಮಾಡಿದ್ದಾರೆ ವರ್ಗದಲ್ಲಿ ಕೆಲವರು ಜಾತಿವಾದವನ್ನು ಇಟ್ಟುಕೊಂಡು ಆಧಾರದ ಮೇಲೆ ದೇಶದಲ್ಲಿ ಕ್ರಾಂತಿಯನ್ನು ತರುತ್ತೇವೆ ಎಂದು ಹೋರಾಡಿ ತಪ್ಪು ಮಾಡಿದ್ದಾರೆ. ಜಾತಿ ಮತ್ತು ವರ್ಗ ಇವೆರಡೂ ಒಂದೇ ನಾಣ್ಯದ ಎರಡು ಮುಖಗಳು ಇದ್ದ ಹಾಗೆ ಯಾವಾಗ ಒಂದು ವರ್ಗವಾಗುತ್ತದೆ ಎಂದರೆ ಕೆಳಗಿನವರು ಮೇಲಕ್ಕೂ ಮೇಲಿನವರು ಕೆಳಕ್ಕೂ ಹೋಗತಕ್ಕಂಥಾ ಅವಕಾಶ ಇರುವಾಗ, ಮೊಬಲಿಟಿ ಇದ್ದಾಗ ಅದು ವರ್ಗ ಆಗುತ್ತದೆ ಮೊಬಲಿಟೀಇಲ್ಲದೇ ಇದ್ದಾಗ ಅದು ಜಾತಿ ಆಗುತ್ತದೆ. ಯಾವಾಗ ಮೊಬಲಿಟಿ ಇರುವುದಿಲ್ಲ ಮತ್ತು ಚಾಲನೆ ತಪ್ಪಿ ಹೋಗುತ್ತದೆ ಆಗ ಜಾತಿ ಆಗುತ್ತದೆ ಒಬ್ಬ ಬ್ರಾಹ್ಮಣ ಹರಿಜನವಾಗುವುದಕ್ಕೆ ಸಾಧ್ಯವಿಲ್ಲ ಈ ದೃಷ್ಟಿಯಿಂದಹೇಳುವುದಾದರೆ ನಮ್ಮದೇಶದಲ್ಲಿ ವರ್ಗ ಸಂಘರ್ಷ ಮಾಡತಕ್ಕ ಜನ ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ರಾಜಾಸ್ಥಾನದಲ್ಲಿ ಉತ್ತರಪ್ರದೇಶದಲ್ಲಿ ಬಿಹಾರದಲ್ಲಿ ಒರಿಸಾದಲ್ಲಿ ಮಧ್ಯೆ ಪ್ರದೇಶದಲ್ಲಿ ಒಟ್ಟು ೮ ರಾಜ್ಯಗಳಲ್ಲಿ ಮೇಲಿನ ಜಾತಿಯವರೇ ಮುಖಮಂತ್ರಿಗಳಾಗಿದ್ದರು. ಜನತಾ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ೫ ರಾಜ್ಯಗಳಲ್ಲಿ ಹಿಂದುಳಿದ ಬೇರೆ ಬೇರೆ ಜಾತಿಗೆ ಸೇರಿದವರನ್ನು ಮುಖ ಮಂತ್ರಿಗಳಾಗಿ ಮಾಡಿದ್ದಾರೆ ಒಂದು ರಾಜ್ಯದಲ್ಲಿ ಗೊಲ್ಲರ ಜಾತಿಗೆ ಸೇರಿದವರನ್ನು ಮುಖ್ಯಮಂತ್ರಿಗಳಾಗಿ ಮಾಡಿದ್ದಾರೆ. ಬಿಹಾರದಲ್ಲಿ ಕ್ಷೌರಿಕರನ್ನು ಮುಖ್ಯಮಂತ್ರಿಗಳಾಗಿ ಮಾಡಿದ್ದಾರೆ ಒರಿಸ್ಸಾದಲ್ಲಿ ಹಿಂದುಳಿದ ಜಾತಿಗೆ ಸೇರಿದವರನ್ನು ಮುಖ್ಯಮಂತ್ರಿಗಳಾಗಿ ಮಾಡಿದ್ದಾರೆ. ರಾಜಾಸ್ಥಾನದಲ್ಲಿ ಜೈನರನ್ನು ಮುಖ್ಯ ಮಂತ್ರಿಗಳಾಗಿ ಮಾಡಿದ್ದೇವೆ.

ಶ್ರೀಎಸ್.ಎಂ. ಶಿರ್ನಾಳಿ ಚಂದ್ರಶೇಖರ್. —ಸ್ವಾಮಿ ಲೋಕಸಭೆ ಚುನಾವಣೆ ಆದಮೇಲೆ ಕೇಂದ್ರದಲ್ಲಿ ಹಳೆಯ ಕಂದಾಚಾರ ಪದ್ಧತಿಯನ್ನು ಇಟ್ಟುಕೊಂಡಿರತಕ್ಕ ಬ್ರಾಹ್ಮಣರೊಬ್ಬರನ್ನು ಪ್ರಧಾನ ಮಂತ್ರಿಗಳಾಗಿ ಜನತಾ ಪಕ್ಷದವರು ಮಾಡಿದ್ದಾರೆ. ಜೊತೆಗೆ ಸೆಂಟ್ರಲ್ ಕ್ಯಾಬಿನೆಟ್‌ನಲ್ಲಿ ಶೇಕಡಾ ೭೫ ಕ್ಕೆ ಮೇಲ್ಪಟ್ಟು ಬ್ರಾಹ್ಮಣರೇ ಮಂತ್ರಿಗಳಾಗಿದ್ದಾರೆ ಇದು ಸಮಾಜವಾದವೇ ?

ಶ್ರೀ ಜೆ. ಎಚ್. ಪಟೇಲ್. —ಮಾನ್ಯ ಸದಸ್ಯರಿಗೆ ಸರಿಯಾಗಿ ವಿಷಯ ಗೊತ್ತಿಲ್ಲ. ಆದ್ದರಿಂದ ಅವರು ಈ ರೀತಿ ಹೇಳುತ್ತಿದ್ದಾರೆ. ನಾನು ಜಾತಿ ಮತ್ತು ವರ್ಗದ ವಿಷಯವನ್ನು ಏತಕ್ಕೆ ಪ್ರಸ್ತಾಪ ಮಾಡಿದೆ ಎಂದರೆ ಅವುಗಳ ಕಲ್ಪನೆ ಸರಿಯಾಗಿ ಇಲ್ಲದೇ ಹೋದರೆ ಅವುಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೇ ಹೋದರೆ ಕೆಲವರಿಗೆ ಮನೆಗಳನ್ನು ಕೊಟ್ಟರೆ ಹರಿಜನರ ಉದ್ಧಾರವಾಯಿತು ಎಂದೂ ಕೆಲವರಿಗೆ ಕೆಲವು ಬೋರ್ಡಿನ ಅಧ್ಯಕ್ಷರನ್ನಾಗಿ ಮಾಡಿದರೆ ಹರಿಜನಗಿರಿಜನರ ಉದ್ಧಾರವಾಯಿತೆಂದೂ ಅಥವ ಕೆಲವರನ್ನು ಮಂತ್ರಿಗಳನ್ನಾಗಿ ಮಾಡಿದರೆ ಆ ಜಾತಿಯ ಉದ್ಧಾರವಾಯಿತು ಎಂದು ಹೇಳುವುದಾದರು ಹೇಗೆ , ಒಬ್ಬ ಬ್ರಿಟಿಷ್ ಅರ್ಥ ಶಾಸ್ತ್ರಜ್ಞರು ಹೇಳುತ್ತಾರೆ ಒಂದು ಜನಾಂಗವನ್ನು ಇನ್ನೊಂದು ಜನಾಂಗವನ್ನು ನಿರಂತವಾಗಿ ಶೋಷಣೆ ಮಾಡಬೇಕು ಎಂದರೆ ಈ ತಂತ್ರವನ್ನು ಮಾಡುತ್ತಾರಂತೆ ಜನರನ್ನು ಕರೆದುಕೊಂಡು ಹೋಗಿ ಮೀನು ಹಿಡಿಯುವುದನ್ನು ಕಲಿಸಿ ಕೊಡುವುದಿಲ್ಲ. ಅದಕ್ಕೆ ಬದಲು ಅಪರ ಥಿಯರಿ ಪ್ರಕಾರ ಮೀನುಗಳನ್ನು ಹಿಡಿದುಇಟ್ಟುಕೊಂಡಿರುತ್ತಾರೆ ಮೀನುಗಾರರು ಒಂದು ಒಂದೊಂದು ಮೀನು ತಗೆದುಕೊಂಡುಹೋಗುವಹಾಗೆ ಮಾಡುತ್ತಾರೆ ಇದು ಮೇಲುಜಾತಿಯವರು ಅನುಸರಿಸುವ ನಿಯಮ ವರ್ಗ ಸಂಘರ್ಷದ ಬಗ್ಗೆ ಕಾಂಗ್ರೆಸ್ಸಿನವರಿಗೆ ತಪ್ಪುಕಲ್ಪನೆ ಉಂಟಾಗಿದೆ ಎಂದು ಹೇಳಬೇಕಾಗಿದೆ. ನಾವು ಪ್ರಜಾತಂತ್ರವಾದಿಗಳು. ಜನ ಏನು ಹೇಳುತ್ತಾರೆ ಅದಕ್ಕೆ ನಾವು ಬಾಗುತ್ತೇವೆ ಯಾರದೋ ವ್ಯಕ್ತಿಯ ಹೆಸರಿನಲ್ಲಿ ವೈಯುಕ್ತಿಕ ಗಳಿಕೆ ಆಧಾರದ ಮೇಲೆ ಪಕ್ಷವನ್ನು ಕಟ್ಟತಕ್ಕ ಜನ ನಾವಲ್ಲ. ನಮ್ಮ ರಾಜ್ಯದಲ್ಲಿ ಜನ ನಮ್ಮ ಪಕ್ಷಕ್ಕೆ ಮತ ಕೊಟ್ಟಿದ್ದಾರೆ ಎಂದು ಅವರು ಹೇಳಬಹುದು. ನೀವು ಹೇಳಿದ್ದನ್ನೇ ನಾವು ಮಾಡಿದ್ದೇವೆ ತುರ್ತು ಪರಿ

ಸ್ಥಿತಿಯಲ್ಲಿ ಇದೆಲ್ಲಾ ಮಾಡಿದ್ದೇವೆ ಎಂದು ಹೇಳಬಹುದು, ಕರ್ನಾಟಕದಲ್ಲಿ ಜನತೆ ನಮ್ಮ ಪಕ್ಷಕ್ಕೆ ಬಹುಮತ ಕೊಟ್ಟಿದ್ದಾರೆ ಇದಕ್ಕೆ ಏನು ಹೇಳುತ್ತೀರಿ ಎಂದು ನೀವು ಕೇಳಬಹುದು, ಕೆಲವು ಸಾರಿ ಎಡವುತ್ತಾರೆ. ಇದಕ್ಕೆ ಬೈಬಲ್‌ನಲ್ಲಿ ಒಂದು ಸ್ವಾರಸ್ಯಕರವಾದ ಘಟನೆ ಬರುತ್ತದೆ ಯೇಸುಕ್ರಿಸ್ತನು ಶಿಕ್ಷೆಗೆ ಗುರಿಯಾಗುತ್ತಾನೆ ಅವನನ್ನು ಗಲ್ಲಿಗೆ ಹಾಕಬೇಕು ಎಂದು ಹೇಳುತ್ತಾರೆ. ಇವರ ಜೊತೆಗೆ ಆ ಪ್ರದೇಶದಲ್ಲಿ ಹೆಸರುವಾಸಿಯಾದಂಥ ಕಳ್ಳ ದರೋಡೆಕೋರ ಬರಪ್ಪ ಮತ್ತು ಅವನ ಶಿಷ್ಯ ಸಹ ಶಿಕ್ಷೆಗೆ ಗುರಿಯಾಗುತ್ತಾರೆ. ಈ ೩ ಜನರೂ ಗಲ್ಲಿನ ಶಿಕ್ಷೆಗೆ ಗುರಿಯಾಗುತ್ತಾರೆ ಆಗಿನ ನ್ಯಾಯಾಧೀಶರಿಗೆ ಒಂದು ಅಧಿಕಾರ ಇರುತ್ತದೆ. ಜನರನ್ನು ಕೇಳಿಬಿಟ್ಟು ಈ ೩ ಜನರಲ್ಲಿ ಯಾರಾದರೊಬ್ಬರ ಪ್ರಾಣವನ್ನು ಉಳಿಸಬಹುದು, ಆಗ ನ್ಯಾಯಾಧೀಶರಾದ ಪೈಲೆಟ್ ಕೇಳುತ್ತಾರೆ, ಈ ೩ ಜನರ ಪೈಕಿ ಯಾರನ್ನು ಉಳಿಸಬೇಕು ಎಂದು ಜೀಸಸ್‌ನನ್ನು ಉಳಿಸುತ್ತಾರೆ ಎಂದು ಎಲ್ಲರ ಮನಸ್ಸಿನಲ್ಲೂ ಇರುತ್ತದೆ. ಆದರೆ ಜನ ಬರಪ್ಪ ಬೇಕು ಎಂದು ಹೇಳುತ್ತಾರೆ. ಇವನ್ನು ದರೋಡೆ ಕೋರ ಇವನು ಮಾಡಿರತಕ್ಕ ಕೊಲೆಗಳನ್ನು ದರೋಡೆಗಳನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ ಇವನು ಸಂಪಾದನೆ ಮಾಡಿರತಕ್ಕಂಥಾದ್ದರಲ್ಲಿ ಸ್ವಲ್ಪಭಾಗವನ್ನು ಕೆಲವರಿಗೆ ಹಂಚಿರುತ್ತಾನೆ, ಆದುದ್ದರಿಂದ ಬರಪ್ಪ ಬೇಕು ಎಂದು ಜನ ಹೇಳುತ್ತಾರೆ. ಉತ್ತರಪ್ರದೇಶದಲ್ಲಿ ಮನಸಿಂಗ್ ಇವನೂ ಕೂಡ ದರೋಡೆಕೋರ ಇವನೂ ಕೂಡ ಅಲ್ಲಿ ಇಲ್ಲಿ ಬಡವರಿಗೆಸಹಾಯ ಮಾಡುತ್ತಿದ್ದ ಹಾಗೆ ಕರ್ನಾಟಕ ರಾಜ್ಯದಲ್ಲಿ ಹಿಂದೆ ಮಾಡಿದಂಥ ಎಲ್ಲಾ ದರೋಡೆಗಳನ್ನು ಮುಚ್ಚುವುದಕ್ಕೋಸ್ಕರ ಕೆಲವರಿಗೆ ಅಲ್ಪಸ್ವಲ್ಪ ಕೊಟ್ಟು ಬಿಟ್ಟಿದ್ದರಿಂದ ಬರಪ್ಪ ಸರ್ಕಾರ ಉಳಿಯಿತು, ಬರಪ್ಪಗಳನ್ನು ನಾವು ಉಳಿಸಿಬಿಟ್ಟಿದ್ದೇವೆ.

4-00 P. M.

ಶ್ರೀ ಕೆ. ಬಿ. ಶಿವಯ್ಯ.—ಕೇಂದ್ರದಲ್ಲಿ ಜನತಾ ಸರ್ಕಾರ ಅಧಿಕಾರಕೆ ಬಂತಲ್ಲ. ಅದನ್ನು ಬರಪ್ಪ ಮಾಡಿದರೆ ತಮ್ಮ ಸರ್ಕಾರಕ್ಕೆ ಅನ್ವಯಿಸುವುದಿಲ್ಲವೇ.

ಶ್ರೀ ಜೆ. ಹೆಚ್. ಪಟೇಲ್.—ಪ್ರದೇಶ ಸಣ್ಣದಾದರೆ ಬರಪ್ಪ ಉಳಿಯುತ್ತಾನೆ ದೊಡ್ಡದಾದರೆ ಉಳಿಯುವುದಿಲ್ಲ. ನಾವು ವಿವರಗಳಿಗೆ ಹೋಗುವುದಿಲ್ಲ. ಕಳೆದ ೬ ವರ್ಷಗಳಲ್ಲಿ ನೀವು ಒಂದು ಕಡೆ ಸೈದಾಂತಿಕವಾಗಿ ಕೇಂದ್ರೀಕರಣದಲ್ಲಿ ನಂಬಿಕೆ ಇರತಕ್ಕಂಥ ಜನ. ನಾವು ವಿಕೇಂದ್ರೀಕರಣದಲ್ಲಿ..........

ಶ್ರೀ ಕೆ. ಎಚ್. ರಂಗನಾಥ.—ಎರಡು ದಿವಸಗಳ ಹಿಂದೆ.........

SRI J. H. PATEL.—You belive in centralisation.

SRI K. H. RANGANATH.—Two days back the Prime Minister has not agreed for it. ವಿಕೇಂದ್ರೀಕರಣದ ಬಗ್ಗೆ ಎಲ್ಲಾ ಮುಖ್ಯ ಮಂತ್ರಿಗಳು ಪ್ರಧಾನ ಮಂತ್ರಿಗಳನ್ನು ಕೇಳಿದಾಗ ಅವರು ಒಪ್ಪಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಈಗಿನದನ್ನು ನೀವು ಹೇಳುತ್ತಿದ್ದೀರಿ ಕಳೆದ ೬ ವರ್ಷಗಳಲ್ಲಿ ೨೭೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ನಾನು ಅಂಕಿ ಅಂಶ ಕೊಡುತ್ತೇನೆ.

ಶ್ರೀ ಕೆ. ಎಚ್ ರಂಗನಾಥ್.—ನೀವು ಪಟೇಲರು ಅಂದರೆ ಜನತಾ ಪಕ್ಷ ಜನತಾ ಪಕ್ಷ ಅಂದರೆ ಲೋಕಸಭಾ ಸದಸ್ಯರು..........

ಶ್ರೀ ಜೆ. ಎಚ್ ಪಟೇಲ್.—ನೀವು ರಂಗನಾಥ್. ರಂಗನಾಥ್ ಅಂದರೆ ಕಾಂಗ್ರೆಸ್ ಪಕ್ಷ. ಕಾಂಗ್ರೆಸ್ ಪಕ್ಷ ಅಂದರೆ.........

SRI K. H. RANGANATH. —I dont disown are you prepared to own the attitude of the Prime Minister.

ಶ್ರೀ ಎಸ್. ಆರ್. ಬೊಮ್ಮಾಯಿ—. ಪ್ರಧಾನ ಮಂತ್ರಿಗಳು ಇವತ್ತು ಏನು ಹೇಳಿದ್ದಾರೆ ಅದನ್ನು ಅಪಾರ್ಥ ಮಾಡಬೇಕಾಗಿಲ್ಲ. ವಿಕೇಂದ್ರೀಕರಣವನ್ನು ನಾವು ಒಪ್ಪಿದ್ದೇವೆ. ವಿಕೇಂದ್ರೀಕರಣ ಎಂದರೆ ಕೇಂದ್ರದಿಂದ ರಾಜ್ಯಸರ್ಕಾರಕ್ಕೆ ಬರಬೇಕಾದುದಲ್ಲ. ಜಿಲ್ಲೆಯಿಂದ ಹಳ್ಳಿಗೆ ಹೋಗಬೇಕು ಎಂದು ಅರ್ಥ. ಜಿಲ್ಲಾ ಪರಿಷತ್ತುಗಳನ್ನು ೧೦ ವರ್ಷಗಳಿಂದ ಮಾಡುತ್ತಾ ಇಲ್ಲ. ವಿಕೇಂದ್ರೀಕರಣ ಎಂದರೆ ಜಿಲ್ಲೆಯಿಂದ ಹಳ್ಳಿಗೆ ಹೋಗಬೇಕು ಎಂದು ಜಿಲ್ಲೆಯಿಂದ ಹಳ್ಳಿಗಳಿಗೆ ಹೋಗಬೇಕು ಎನ್ನುವುದರ ಬಗ್ಗೆ ಚರ್ಚೆಯಾಗುತ್ತಾ ಇದೆ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ರಂಗನಾಥ್ ಅವರಿಗೆ ಪ್ರತಿಯೊಂದು ಘಳಿಗೆಯೂ ತಳಮಳ ಗಾಗುತ್ತಾ ಇದೆ, ಅವರು ಸ್ವಲ್ಪ ನೀರನ್ನು ಕುಡಿದರ ಒಳ್ಳೆಯದು.

ಶ್ರೀ ಕೆ. ಎಚ್. ರಂಗನಾಥ್.—ನನಗೆ ನೀರು ಕುಡಿದು ಅಭ್ಯಾಸವಿಲ್ಲ. ವಿಕೇಂದ್ರೀಕರಣದ ಸಟ್ಲ್ಟಿ ಮಾನ್ಯ ಪಟೇಲರಿಗೆ ಗೊತ್ತಿದೆ. ಮಾನ್ಯ ಬೊಮ್ಮಾಯಿಯವರಿಗೆ ಅದರ ಸಟ್ಲ್ಟಿ ಗೊತ್ತಿಲ್ಲ ಅವರು ಕನ್‌ಫ್ಯೂಸ್ ಮಾಡಿಕೊಂಡಿದ್ದಾರೆ, ವಿಕೇಂದ್ರೀಕರಣ ಎಂದರೆ ತಾಲ್ಲೂಕ್‌ಬೋರ್ಡಿಗೆ ಬಂದುಬಿಟ್ಟಿದ್ದಾರೆ.

ಶ್ರೀ ಎಸ್ ಆರ್. ಬೊಮ್ಮಾಯಿ.—ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಮೊನ್ನೆ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿ ಹೇಳುತ್ತಿದ್ದಾರೆ. ಜನತಾ ಪಕ್ಷದ ಪ್ರಣಾಳಿಕೆಯಲ್ಲಿ ಎಕನಾಮಿಕ್ ಪಾಲಿಸಿ ಬಗ್ಗೆ ಹೇಳಿದೆ. You study that it is not only distribution of powers between the State and the Centre. We have made it abundantly clear in our economic policy. ಇದನ್ನು ಪ್ರಧಾನ ಮಂತ್ರಿಗಳು ಹೇಳಬೇಕಾಗಿಲ್ಲ. ಜನತಾ ಪಕ್ಷದ ಪ್ರಣಾಳಿಕೆಯಲ್ಲಿ ಆರ್ಥಿಕ ಕಾರ್ಯದ ಬಗ್ಗೆ ಇದೆ. ಪ್ರಧಾನಮಂತ್ರಿಗಳು with in the constitutional limits ಎಂದು ಹೇಳಿದ್ದಾರೆ.

ಶ್ರೀ ಜೆ. ಹೆಚ್ ಪಟೇಲ್.—ವಿಕೇಂದ್ರೀಕರಣ ಎಂದರೆ ನಿಮ್ಮ ದೃಷ್ಟಿಯಲ್ಲಿ ಡೆಲ್ಲಿಯಿಂದ ಬೆಂಗಳೂರಿಗೆ ತೆಗೆದುಕೊಂಡು ಬರುವುದು ಎಂದು ಅರ್ಥವೇ , ನಾವು ಚತುಸ್ತಂಭ ರಾಷ್ಟ್ರದಲ್ಲಿ ವಿಶ್ವಾಸವಿರತಕ್ಕಂಥಾವರು. ಈ ನಾಲ್ಕು ಘಟಕಗಳಿಗೆ ಬರೀ ಕಾಗದದ ಮೂಲಕ ಅಧಿಕಾರ ಕೊಟ್ಟರೆ ಏನೂಪ್ರಯೋಜನವಾಗುವುದಿಲ್ಲ. ತಾಲ್ಲೂಕುಬೋರ್ಡ್‌ಗಳಿಗೆ ಪಂಚಾಯಿತಿಗಳಿಗೆ ಕಾಗದಗಳಲ್ಲಿ ಅಧಿಕಾರ ಕೊಟಿದ್ದೀರೇ ಹೊರತು ದುಡ್ಡು ಕೊಡದೇ ಬಹಳ ಕಡೆ ಎಲೆಕ್ಟ್ರಿಸಿಟಿ ಚಾರ್ಜಕಟ್ಟುವುದಕ್ಕಾಗದೆ ಪಂಚಾಯಿತಿಗಳು ಬಂದ್‌ಆಗಿವೆ

ಶ್ರಿ ಕೆ. ಎಚ್ ರಂಗನಾಥ್.—ಎಲೆಕ್ಟ್ರಿಸಿಟಿ ಚಾರ್ಜಿನಲ್ಲಿ ರಾಜ್ಯಸರ್ಕಾರಕ್ಕೂ ಎಷ್ಟು ಹೋಗುತ್ತದೆ ಎನ್ನುವುದು ತಮಗೆ ಗೊತ್ತಿದೆ.

ಶ್ರೀ ಜೆ. ಎಚ್. ಪಟೇಲ್.—ತಾಲ್ಲೂಕ್ ಬೋರ್ಡ್‌ಗಳಿಗೆ, ಮುನಿಸಿಪಾಲಿಟಿಗಳಿಗೆ ಎಷ್ಟು ಹೋಗಬೇಕು ಎಂದು ಹೇಳುತ್ತೀರೋ ಆದೇರೀತಿ ಹೋಗಬೇಕು ಎಂದು ನಾನು ಹೇಳುತ್ತೇನೆ. ಮೂಲಭೂತವಾಗಿ ಅವರಿಗೂ ನಮಗೂ ವ್ಯತ್ಯಾಸ ಇಷ್ಟೆ. ಒಂದು ವಿಷಯ ಏನೆಂದರೆ. ೧೯೭೫ನೇ ಇಸವಿ ಜೂನ್ ೨೬ನೇ ತಾರೀಖು ಯಾವ ಮಟ್ಟಕ್ಕೆ ದೇಶವನ್ನು ತೆಗೆದುಕೊಂಡು ಹೋಗಬೇಕೋ ಆ ಮಟ್ಟಕೆ ದೇಶವನ್ನು ತೆಗೆದುಕೊಂಡು ಹೋದಿರಿ. ಕೇಂದ್ರೀಕರಣವನ್ನು ಒಪ್ಪುವುದಿಲ್ಲ, ನಿಜ. ತಮಿಳು ನಾಡಿನಲ್ಲಿ ಮಾಡಿದರೆ ಮದ್ರಾಸಿನಲ್ಲಿ ಒಪ್ಪುವುದಿಲ್ಲ, ಮದ್ರಾಸಿನಲ್ಲಿ ಮಾಡಿದರೆ ಕೊಯಂಬತ್ತೂರಿನಲ್ಲಿ ಒಪ್ಪದೇ ಇರಬಹುದು. ಅದಕ್ಕೋಸ್ಕರ ಎಲ್ಲ ಜನರ ಅಭಿಪ್ರಾಯವನ್ನು ಒಟ್ಟಿಗೆ ತೆಗೆದುಕೊಂಡು ಹೋಗುವುದಾದರೆ, ಕೆಲಸವಾಗಬೇಕಾದರೆ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಬದಲಾವಣೆಯಾಗಬೇಕು. ಸಾಮಾಜಿಕವಾಗಿ ಬದಲಾವಣೆಯಾಗಬೇಕಾದರೆ ಸ್ವಲ್ಪ ಕಾಲ ಹಿಡಿಯುತ್ತದೆ. ಇಷ್ಟು ಬೇಗ ಸಾಮಾಜಿಕ ಬದಲಾವಣೆಯಾಗುತ್ತದೆ ಎಂದು ನಾವು ನಂಬಿಲ್ಲ. ಅದು ಬಹಳ ಕಷ್ಟಕರವಾದ ಕೆಲಸ. ಸುಮ್ಮನೆ ಜನರ ಕಣ್ಣಿಗೆ ಮಣ್ಣು ಎರಚುವುದಕ್ಕೋಸ್ಕರ ಮಾಡಬಹುದೇ ಹೊರತು ನಿಜವಾದ ಸಾಮಾಜಿಕ ಸುಧಾರಣೆ ಆಗಬೇಕಾದರೆ ಬಹುಶಃ ಅದು ಕಷ್ಟಕರವಾದ ಕಲಸ. ಆದರೆ ರಾಜಕೀಯ ಮತ್ತು ಆರ್ಥಿಕ ವಿಕೇಂದ್ರೀಕರಣ ಮಾಡಿದರೆ ಕನಿಷ್ಟಪಕ್ಷ ಬರತಕ್ಕಂಥ ದಶಕದಲ್ಲಾದರೂ ನಾವು ಪರಿಸ್ಥಿತಿಯನ್ನು ಸುಧಾರಣೆ ಮಾಡಬಹುದು. ೩೦ ವರ್ಷಗಳಿಂದ ಕೂಡಿ ಹಾಕಿರತಕ್ಕಂಥ ಒಂದು ದೊಡ್ಡ ಕೊಳೆಯನ್ನು ತೊಳೆಸಬೇಕಾದರೆ ನಮ್ಮ ಕೇಂದ್ರ ಸರ್ಕಾರ ಜನರ ಆರ್ಥಿಕ ಧೊರಣೇಗಳು ಏನಿದೆ ಅದಕ್ಕೆ ತಕ್ಕಹಾಗೆ ಕೆಲಸಮಾಡಬೇಕು. ಯಾರಾದರೂ ತಪ್ಪು ಮಾಡಿದರೆ ಅದನ್ನು ವಿರೋಧ ಮಾಡುವುದಕ್ಕೆ ಯಾವ ಭಿನ್ನಾಭಿಪ್ರಾಯವೂ ಇಲ್ಲ.

ಆದರೆ ಪ್ರಜಾತಂತ್ರದಲ್ಲಿ ವಿಶ್ವಾಸ ತೋರಿಸತಕ್ಕಂಥ, ವಿಕೇಂದ್ರೀಕರಣದಲ್ಲಿ ವಿಶ್ವಾಸ ತೋರಿಸತಕ್ಕಂಥ ನೀತಿಯನ್ನು ರಾಜ್ಯ ಸರ್ಕಾರದವರು ತಾಳಬೇಕು. ವಿನಾಕಾರಣ ರಾಜ್ಯ ಸರ್ಕಾರದವರು ದೆಹಲಿಯವರಿಗೆ ಎದುರಾಗಿ ಹೋಗಬಾರದೆಂದು ಹೇಳುತ್ತಾ ತಮಗೊಂದು ಕಿವಿ ಮಾತು ಹೇಳುವುದೇನೆಂದರೆ ಕರ್ನಾಟಕ ರಾಜ್ಯದ ಜವಾಬ್ದಾರಿ ನಮ್ಮ ಮೇಲೂ ಇದೆ, ನಿಮ್ಮ ಮೇಲೂ ಇದೆ.

ಶ್ರೀ ಕೆ. ಎಚ್. ರಂಗನಾಥ್.—ಅವರಿಗೂ ಈ ಬುದ್ಧಿವಾದ ಹೇಳುವುದಿಲ್ಲವೇ ?

ಶ್ರೀ ಜೆ. ಎಚ್. ಪಟೇಲ್.—ನಮ್ಮ ಮೇಲೂ ಇದೆ, ಇಡೀ ರಾಜ್ಯದ ಹಿತ ರಕ್ಷಣೆಯ ಬಗ್ಗೆ ನಮ್ಮ ಕೇಂದ್ರದ ನಾಯಕರಿಗೂ ತಿಳಿಸಿದ್ದೇವೆ. ಆದುದರಿಂದ ಇದು ಒಂದು ರಥ ಇದ್ದ ಹಾಗೆ. ಅದು ಏನೋ ಕಾರಣಾಂತರಗಳಿಂದ ಜರಗುತ್ತಾ ಬಂದಿದೆ. ನೀವು ಒಂದು ಗಾಲಿ, ನಾವೊಂದು ಗಾಲಿ. ಮೊನ್ನೆ ಇದರ ಬಗ್ಗೆ ನಮ್ಮ ಪಕ್ಷದ ಮುಖಂಡರಾದ ಶ್ರೀ ದೇವೇಗೌಡರವರು ಒಂದು ಮಾತನ್ನು ಹೇಳಿದರು, ಇವತ್ತು ತಾವು ಜವಾಬ್ದಾರಿಯಿಂದ ವರ್ತಿಸಬೇಕಾಗಿದೆ. ಬೇಜವಾಬ್ದಾರಿಯಿಂದ ವರ್ತಿಸುವುದಾದರೆ ರಥಕ್ಕೆ ಇರತಕ್ಕಂಥ ಎರಡು ಗಾಲಿಗಳಲ್ಲಿ ಒಂದು ಬಿಟ್ಟುಕೊಂಡು ಹೋಗುತ್ತದೆ ಆದುದರಿಂದ ಸ್ವಲ್ಪ ಜವಾಬ್ದಾರಿಯಿಂದ ಹೋಗಿ, ಎಂದು ಹೇಳಿದ್ದಾರೆ. ಆದುದರಿಂದ ತಾವು ಇನ್ನು ಮುಂದೆ ಮಾತನಾಡುವಾಗ ಸ್ವಲ್ಪ ವಿನಯವಾಗಿ, ಒಂದು ಸೌಜನ್ಯದಿಂದ ಮಾತನಾಡಿ ಎಂದು ಸನ್ಮಾನ್ಯ ಅಧ್ಯಕ್ಷರ ಮುಖಾಂತರ ಸೂಚನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಮತ್ತಿ ಕಟ್ಟಿ (ರೋನ್).—ಸನ್ಮಾನ್ಯ ಸಭಾಪತಿಗಳೇ, ಮೊಟ್ಟ ಮೊದಲನೆಯದಾಗಿ ಈ ಸಲದ ಚುನಾವಣೆಯಲ್ಲಿ ಕರ್ನಾಟಕದ ಜನತೆ, ಶ್ರೀ ಸಾಮಾನ್ಯ, ಬಡವರ, ದಲಿತರ ಹಾಗೂ ಹಳ್ಳಿಗಾಡಿನ ಉದ್ಧಾರದಲ್ಲಿ ವಿಶ್ವಾಸವಿಟ್ಟಂಥ ಪಕ್ಷವನ್ನೇ ಅಧಿಕಾರದಲ್ಲಿ ತಂದುದಕ್ಕಾಗಿ ತಮ್ಮ ಮೂಲಕ ಕರ್ನಾಟಕದ ಜನತೆಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇಂದಿನ ಸರ್ಕಾರ ಒಂದು ಆರ್ಥಿಕ ಧೋರಣೆಯನ್ನು, ಸಾಮಾಜಿಕ ರಕ್ಷಣೆಯನ್ನು ಯಾವ ರೀತಿಯಲ್ಲಿ ಕೊಡಬೇಕು ಎಂದು ನಿರ್ಧಾರ ಮಾಡಿದೆ. ಇವತ್ತು ಪ್ರತಿಯೊಬ್ಬ ಕಟ್ಟ ಕಡೆಯ ಮನುಷ್ಯನವರೆಗೂ ಸರ್ಕಾರದ ಸಹಾಯ ಸಹಕಾರ, ರಕ್ಷಣೆ ಕೊಡಬೇಕು ಎನ್ನುವ ಉದ್ದೇಶದಿಂದ ನಡೆದುಕೊಂಡು ಬಂದಿದುದರಿಂದ ಅಧಿಕಾರದಲ್ಲಿ ಬಂದಿದ್ದಾರೆ. ನಮ್ಮ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಈಗಿರತಕ್ಕ ಸರ್ಕಾರದಿಂದ ಸಾಮಾನ್ಯ ಜನತೆಗೆ ಹಾಗೂ ರಾಜ್ಯದ ಬಡಜನತೆಯ ಕಲ್ಯಾಣಕ್ಕಾಗಿ ಹಾಗೂ ಹಳ್ಳಿಗಾಡಿನ ಅಭಿವೃದ್ಧಿಗಾಗಿ ಯಾವ ರೀತಿಯಲ್ಲಿ ನಡೆದುಕೊಂಡು ಬಂದಿದೆ ಎಂಬುದನ್ನು ಕೂಲಂಕಷವಾಗಿ ತಿಳಿಸಿದ್ದಾರೆ. ಯಾರು ವೃದ್ಧರಿದ್ದರು ಯಾರಿಗೆ ರಕ್ಷಣೆ ಇರಲಿಲ್ಲ, ಸಮಾಜದಲ್ಲಿ ಯಾರು ದಿಕ್ಕಿಲ್ಲದೆ ಇದ್ದಾರೋ, ಯಾರು ಅಂಗವಿಕರು ಇದ್ದಾರೋ ಅಂಥವರಿಗೆ ರಕ್ಷಣೆ ಕೊಡಬೇಕು ಎನ್ನುವ ಒಂದು ಮಹತ್ಕಾರ್ಯವನು ಹಾಕಿಕೊಂಡು ನಮ್ಮ ಸರ್ಕಾರ ಮಾಡಿದೆ ಇದನ್ನು ಪ್ರತಿಯೊಬ್ಬರೂ ಶ್ಲಾಘಿಸಬೇಕಾದ್ದು ನ್ಯಾಯ.

ಇನ್ನು ಹಲವಾರು ಹಿರಿಯ ಸದಸ್ಯರುಗಳು ಪ್ರಜಾಪ್ರಭುತ್ವದ ಬಗ್ಗೆ ಹಾಗೂ ಲೋಕಸಭೆಯ ಚುನಾವಣೆಯ ನಂತರ ಈ ದೇಶದಲ್ಲಿ ಪ್ರಜಾಪ್ರಭುತ್ವ ಬಂತು ಎಂದು ಹೇಳಿದರು. ಹಾಗೂ ವಿರೋಧ ಪಕ್ಷದ ನಾಯಕರು ೩೦ ವರ್ಷಗಳವರೆಗೆ ಈ ದೇಶದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ್ಯೂ ಕೂಡ ಬಡತನವನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗಲಿಲ್ಲ, ಭೂಸುಧಾರಣೆಯ ಕಾಯಿದೆಯನ್ನು ಜಾರಿಗೆ ತರುವುದಕ್ಕೆ ಆಗಲಿಲ್ಲವೆಂದು ತಿಳಿಸಿದರು ಅದಕ್ಕೆ ಹಲವಾರು ಕಾರಣಗಳಿವೆ, ಹಿಂದೆ ಕಾಂಗ್ರೆಸ್ ಪಕ್ಷ ಈ ದೇಶಕ್ಕೆ ಸ್ವಾತಂತ್ರ್ಯ ತಂದಾಗ ಕೇವಲ ಪರದೇಶದವರಿಂದ ಅಧಿಕಾರವನ್ನು ಭಾರತೀಯರಿಗೆ ಹಸ್ತಾಂತರಿಸುವ ಉದ್ದೇಶವಾಗಿತ್ತು, ತದನಂತರ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಂದಿನಿಂದ ಇಲ್ಲಿಯವರೆಗೆ ಎಲ್ಲಾ ಜ್ಯಾತೀಯತೆ ಅದರಲ್ಲೂ ಮೇಲ್ವರ್ಗದವರು ಕಾಂಗ್ರೆಸ್ ಗದ್ದುಗೆಯನ್ನು ಹಿಡಿದುಕೊಂಡಿದ್ದರೆಂಬುದು ಎಲ್ಲ ಹಿರಿಯ ಸದಸ್ಯರಿಗೂ ಗೊತ್ತಿರುವ ವಿಷಯ. ತದ ನಂತರ ೧೯೬೯ ರವರೆಗೆ ಕಾಂಗ್ರೆಸ್ ಪಕ್ಷದಲ್ಲಿ ಕೆಲವರು, ಪ್ರಧಾನ ಮಂತ್ರಿಗಳವರು ಸಾಮಾನ್ಯ ಜನತೆಯ ಕಲ್ಯಾಣದ ಅಭಿವೃದ್ಧಿಗಾಗಿ ಪ್ರಯತ್ನಪಟ್ಟಾಗ, ಅದರಲ್ಲಿ ಇದ್ದಂಥ ಕೆಲವೊಂದು ಪಟ್ಟ ಭದ್ರ ಹಿತಾಶಕ್ತಿಗಳು, ಪ್ರಗತಿಗೆ ಅಡ್ಡಿಯನ್ನು ಒಡ್ಡುತ್ತಾ ಬಂದವು, ಆಗ ಕಾಂಗ್ರೆಸ್ ವಿಭಜನೆಯಾಯಿತು. ವಿಭಜನೆಯಾದಾಗ ಸಮಾಜವಾದದ ತತ್ವಗಳಲ್ಲಿ ವಿಶ್ವಾಸ ಇಟ್ಟಂಥ ಜನ ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದಲ್ಲಿ ಉಳಿದುಕೊಂಡರು. ಸಮಾಜವಾದದ ತತ್ವದ ತಳಹದಿಯ ಮೇಲೆ ಜಾತ್ಯಾತೀತ ಸಮಾಜದ ರಚನೆಯ ಉದ್ದೇಶವನ್ನಿಟ್ಟುಕೊಂಡು ಹೊರಟಿದ್ದನ್ನು ತಾವು ಎಲ್ಲರೂ ತಿಳಿದುಕೊಂಡಿರಬಹುದು. ಆದಾದನಂತರ ಗುತ್ತೇದಾರಿ ಬಂಡವಾಳಶಾಹಿಗಳು ಕೆಲವರಿದ್ದರು, ಅದಾದನಂತರ ಈಗ ಸಮಾಜವಾದದಲ್ಲಿ ನಿಜವಾಗಿಯೂ ವಿಶ್ವಾಸವನ್ನಿಟ್ಟುಕೊಂಡಿರತಕ್ಕಂಥವರು ಕಾಂಗ್ರೆಸ್ ಪಕ್ಷದಲ್ಲಿ ಉಳಿದುಕೊಂಡಿದ್ದೇವೆ. ನಾವು ಇವತ್ತು ಏನು ಸಾಮಾನ್ಯ ಜನತೆಗೆ ವಾಗ್ದಾನವನ್ನು ಕೊಟ್ಟಿದ್ದೇವೆ ಅವುಗಳನ್ನು ಈಡೇರಿಸುವುದರಲ್ಲಿ ನಾವು ಸಿದ್ಧರಾಗಿದ್ದೇವೆಂದು ತಮ್ಮ ಮೂಲಕ ಕರ್ನಾಟಕ ಜನಕ್ಕೆ ತಿಳಿಯಪಡಿಸಲಿಕ್ಕೆ ಇಚ್ಛೆಪಡುತ್ತೇನೆ.

ಈ ಸಭೆಯು ವಿರೋಧ ಪಕ್ಷದ ನಾಯಕರು ೧೯೫೭ ರಲ್ಲಿಯೇ ನಾವು ಈ ಗೇಣಿದಾರನೇ ಭೂಮಿಯ ಒಡೆಯನಾಗಬೇಕು ಎಂಬ ಕಾಯಿದೆಯನ್ನು, ಬೊಂಬಾಯ್ ಸರ್ಕಾರದಲ್ಲಿ ಹಿಂದೆ ಶ್ರೀ ಮೊರಾರ್ಜಿ ದೇಸಾಯ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗಲೇ ಈ ಕಾಯಿದೆಯನ್ನು ತಂದಿದ್ದೆವು ಎನ್ನುವ ವಿಚಾರ ವನ್ನು ವ್ಯಕ್ತ ಪಡಿಸಿದರು. ಮೈಸೂರು ಪ್ರಾಂತ್ಯ ವಿಂಗಡಣೆಯಾದ ನಂತರ ಅಧಿಕಾರಕ್ಕೆ ಬಂದಂಥ ಜನ ಗುತ್ತೇದಾರಿ ಬಗ್ಗೆ ವ್ಯವಸ್ಥೆ ಬಗ್ಗೆ, ಜಮೀನ್ದಾರಿ ಪದ್ಧತಿಯಲ್ಲಿ ವಿಶ್ವಾಸವಿದ್ದಂಥ ಜನರಿದ್ದುದರಿಂದ ಅದು ಜಾರಿಗೆ ಬರಲಿಲ್ಲ. ಆದರೆ ಈಗ ಪರಿಸ್ಥಿತಿಯೇ ಬೇರೆ ಆಗಿದೆ, ಉಳುವವನೇ ಭೂ ಮಾಲೀಕ ನಾಗುವ ಪರಿಸ್ಥಿತಿನಮ್ಮ ಕರ್ನಾಟಕದಲ್ಲಿ ಜಾರಿಗೆ ಬಂದಿದೆಯೆಂದು ನಾನು ಈ ಸಭೆಯ ಮೂಲಕ ವಿರೋಧ ಪಕ್ಷದ ನಾಯಕರಿಗೆ ಹಾಗೂ ಇತರ ಸದಸ್ಯರುಗಳಿಗೆ ತಿಳಿಯಪಡಿಸುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಸಮಾಜವಾದದಲ್ಲಿ ಕಟ್ಟಾ ವಿಶ್ವಾಸವನ್ನಿಟ್ಟುಕೊಂಡಿರತಕ್ಕಂಥ ಜನ, ಜನತೆಯ ಕಲ್ಯಾಣದಲ್ಲೇ ವಿಶ್ವಾಸ ವನ್ನಿಟ್ಟುಕೊಂಡಿರತಕ್ಕಂಥ ಜನ, ನಾವು ಬಹಳಷ್ಟು ಮಂದಿಯುವಕರು ೧೦೦ಕ್ಕೆ ೬೦ರಷ್ಟು ಮಂದಿ ಇಲ್ಲಿಗೆ ಆರಿಸಿ ಬಂದಿದ್ದೇವೆ ಎಂಬುದನ್ನು ನಾನು ಬಹಳ ಹೆಮ್ಮೆಯಿಂದ ಹೇಳಬಯಸುತ್ತೇನೆ. ಇದಕ್ಕೆ ಕಾರಣವಿಷ್ಟೇ ರಾಜಕೀಯ ವ್ಯವಸ್ಥೆ ಬದಲಾಗಿದೆ, ಕೆಲವೇ ಕೆಲವು ಜನ ಜಾತಿ ಹೆಸರಿನ ಮೇಲೆ ಜಾತಿ ಎತ್ತಿ ಕಟ್ಟಿ ರಾಜಕೀಯ ನಡೆಸುತ್ತಾ ಬಂದಿದ್ದರು, ಆದರೆ ಅದು ಇವತ್ತು ಕೊನೆಯಾಗಿದೆ. ಇವತ್ತು ಉಳ್ಳವರು ಒಂದು ಕಡೆ, ಮತ್ತು ಯಾರು ಈ ದೇಶದ ಸಂಪತ್ತನ್ನು ಹೆಚ್ಚಿಸಲು ಹಗಲಿರಳು ಶ್ರಮ ಪಟ್ಟು ಒಂದು ಹೊತ್ತಿಗೂ ಅನ್ನವಿಲ್ಲದೇ ಇರತಕ್ಕಂಥ ದರಿದ್ರ ಪರಿಸ್ಥಿತಿಯಲ್ಲಿದ್ದರೋ ಅಂಥ ಜನಾಂಗ ಒಂದ ಕಡೆ ಆಗಿದ್ದಾರೆ. ಇವತ್ತು ದೇಶದಲ್ಲಿರತಕ್ಕಂಥ ಸಂಪತ್ತು ಪ್ರತಿಯೊಬ್ಬ ಮನುಷ್ಯನಿಗೂ ಹಂಚಬೇಕು ಎಂದು ಹೋರಾಡತಕ್ಕಂಥ ಜನಾಂಗ ಒಂದು ಕಡೆ ಆಗಿದ್ದಾರೆಂದು ನಾನು ಇಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಇನ್ನು ನಮ್ಮ ಸರ್ಕಾರದವರು ಹಲವಾರು ಕಾರ್ಯ ಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅದರಲ್ಲಿ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವುದರಲ್ಲಿ ಆಗಲೀ ಅಥವಾ ಬಡತನ ನಿರ್ಮೂಲನದ ಬಗ್ಗೆ ಇನ್ನು ಹೆಚ್ಚಿನ ಪ್ರಗತಿಯನ್ನು ಸಾಧಿಸಬೇಕಾಗಿದೆ. ಬಡತನ, ನಿರುದ್ಯೋಗ ಸಮಸ್ಯೆ ಇವೆಲ್ಲಾ ಸಮಾಜದ ವ್ಯವಸ್ಥೆ ಇವುಗಳೆಲ್ಲಾ ಸಿಂಪ್‌ಟಂಸ್ ಆಫ್ ದಿ ಸಿಸ್ಟಂ. ನಿರುದ್ಯೋಗವಾಗಲೀ, ಬಡತನವಾಗಲಿ, ಅಥವಾ ಭ್ರಷ್ಟಾಚಾರವಾಗಲೀ ಸಮಾಜವಾದ ಅರ್ಥ ವ್ಯವಸ್ಥೆಯಲ್ಲಿರತಕ್ಕಂಥ ಯಾವುದೇ ದೇಶದಲ್ಲಿ ಇವು ಕಂಡು ಬರುವುದಿಲ್ಲ. ಸಮಾಜವಾದದ ರಚನೆ ಆದಾಗ ಮಾತ್ರ ನಿರುದ್ಯೋಗ ಸಮಸ್ಯೆ ಭ್ರಷ್ಟಾಚಾರ ಮತ್ತು ಬಡತನ ಹೋಗುತ್ತದೆ ಎಂಬುದನ್ನು ನಾನು ಅತ್ಯಂತ ನಿಷ್ಠೆಯಿಂದ ಇವತ್ತು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

[The Chairman (Smt. Sumati B. Madiman) In the Chair]

ಮಾನ್ಯ ಅಧ್ಯಕ್ಷರೇ ನಾವು ಸಂವಿಧಾನದ ಹಾಗೂ ಪಾರ್ಲಿಮೆಂಟರಿ ವ್ಯವಸ್ಥೆಯನ್ನು ನಂಬಿದ್ದೇವೆ ಹಲವು ವಾದದಿಂದ ಶಕ್ಯವಾದಷ್ಟು ಜನರ ಮನಸ್ಸನ್ನು ಪರಿವರ್ತಿಸಿ ವಿಶ್ವಾಸ ಇಟ್ಟುಕೊಂಡು ಮುನ್ನಡ ದಿದ್ದೇವೆ. ನನ್ನ ಹಲವಾರು ಸ್ನೇಹಿತರು ಹೇಳಿದರು ತುರ್ತುಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವ ಅಡಗಿ ಹೋಗಿತ್ತು ಎಂದು. ತಲೆತಲಾಂತರದಿಂದ ನೂರಕ್ಕೆ ೬೦ರಷ್ಟು ಸಾಮಾನ್ಯ ಜನತೆ ಎರಡು ಹೊತ್ತಿಗೂ ಊಟವಿಲ್ಲದೆ ಅಲೆಯುತ್ತಾ ಇರುವುದನ್ನು ನೋಡಿ ಅವರು ಒಂದು ಹನಿ ಕಣ್ಣೀರನ್ನು ಸುರಿಸಿದ್ದರೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಭೂಮಾಲಿಕರು, ದೊಡ್ಡ ದೊಡ್ಡ ವ್ಯಾಪಾರಗಾರರು ಹಾಗೂ ಕಾಳ ಸಂತೆಕೋರರು ಏನು ಜನರನ್ನು ಸುಲಿಗೆ ಮಾಡುತ್ತಿದ್ದರೋ ಅವರುಗಳೆಲ್ಲಾ ಆ ಸಂದರ್ಭದಲ್ಲಿ ಅಡಗಿದ್ದರು ಅದನ್ನು ಮಾನ್ಯ ಸ್ನೇಹಿತರು ಹೊಗಳದೆ ತುರ್ತುಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವವಿರಲಿಲ್ಲವೆಂದು ಹೇಳು ವುದು ಸರಿಯೇ? ಯಾವ ಜನರು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವಾಗ ಸ್ವಲ್ಪ ಯೋಚಿಸಿ ಮಾತ ನಾಡಿದರೆ ಒಳ್ಳೆಯದಿತ್ತು. ಆದರೆ ಜಾತಿಯ ಗುತ್ತೇದಾರರು ಬಡಜನರ ರಕ್ತಶೋಷಣೆ ಮಾಡಿ ಜೀವನ ಮಾಡುವುದನ್ನು ಅವರ ಸ್ವಾತಂತ್ರ್ಯವನ್ನು ಸೂರೆ ಮಾಡುವುದನ್ನು ನೋಡಿದರೂ ಅವರಿಗೆ ಯಾರೂ ಸಹಾ ಮಾಡಲಿಕ್ಕೆ ಮುಂದೆ ಬರಲಿಲ್ಲ. ಅವರನ್ನು ಅತ್ಯಂತ ನಿರ್ದಯದಿಂದ ನೋಡಿದರೇ ಹೊರತು ಸಹಾಯ ಮಾಡಲಿಲ್ಲವೆಂದು ಕೇಳಲು ಇಚ್ಛೆಪಡುತ್ತೇನೆ. ಈಗ ಏನು ಶಾಸಕರು ಸಮಾಜದಲ್ಲಿ ಬಹಳಷ್ಟು ಹಾಗೂ ಬಹುಪಾಲು ಜನ ಏನು ಇದ್ದಾರೆ ಅವರು ಸುಖ ಜೀವನವನ್ನು ಮಾಡಲು ನಾವು ನೋಡಬೇಕಾದ್ದು ಶಾಸಕರಾದ ನಮ್ಮ ಕರ್ತವ್ಯ ಅದು ಯಾವ ಪಕ್ಷದವರೇ ಇರಲಿ ಅದು ಎಲ್ಲರ ಕರ್ತವ್ಯ. ಯೋಗ್ಯ ಅರ್ಥ ವ್ಯವಸ್ಥೆಯಲ್ಲಿ ಯೋಗ್ಯ ಕಾರ್ಯಕ್ರಮಗಳಿಂದ ಆದಕ್ಕಾಗಿ ಅಧಿಕಾರರೂಢ ಪಕ್ಷದವರೇ ಆಗಲಿ ವಿರೋಧ

ಪಕ್ಷದವರೇ ಆಗಲಿ ಇಬ್ಬರೂ ಕೂಡಿ ಕೆಲಸಮಾಡತಕ್ಕದ್ದು ನಮ್ಮ ಅವರ ಆದ್ಯಕರ್ತವ್ಯವೆಂದು ಹೇಳು ವುದಕ್ಕೆ ಇಷ್ಟಪಡುತ್ತೇನೆ. ಇನ್ನು ವಿರೋಧಪಕ್ಷದ ನಾಯಕರು ಮಾತನಾಡುವಾಗ ಭೂನ್ಯಾಯಮಂಡಲಿ ಗಳಲ್ಲಿ ವಿರೋಧಪಕ್ಷಕ್ಕೆ ಸಾಕಷ್ಟು ಪ್ರಾತಿನಿಧ್ಯಕೊಡಬೇಕು ಎಂದು ಹೇಳಿದ್ದಾರೆ ಅದನ್ನು ನಾನು ಒಪ್ಪು ತ್ತೇನೆ, ಆದರೆ ಭೂನ್ಯಾಯಮಂಡಲಿಗಳಲ್ಲಿ ಪಕ್ಷಬೇಧ ಇರುವುದೆಬೇಡ ಆದರೆ ಯೋಗ್ಯ ಜನರನ್ನು ಆದರಲ್ಲೂ ಭೂಲ್ಯಾಂಡ್ ಸೀಲಿಂಗ್ ಬಗ್ಗೆ ವಿಶ್ವಾಸ ಇಟ್ಟುಕೊಂಡಿರುವವರನ್ನು ನೋಡಿ ಅವರಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟರೆ ಯಾರಿಗೂ ಅನ್ಯಾಯವಾಗುವುದಿಲ್ಲ. ಆದ್ದರಿಂದ ನಮ್ಮ ಸರ್ಕಾರದ ವಿನಂತಿ ಮಾಡಿ ಕೊಳ್ಳುತ್ತೇನೆ ಲ್ಯಾಂಡ್ ಸೀಲಿಂಗ್ ಬಗ್ಗೆ ಯಾರಿಗೆ ವಿಶ್ವಾಸವಿದೆ ಅಂತಹವರನ್ನು ಭೂನ್ಯಾಯ ಮಂಡಲಿ ಗಳಲ್ಲಿಅವರಿಗೆ ಪ್ರಾತಿನಿಧ್ಯಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

ನಾನು ಇನ್ನು ಹೆಚ್ಚಿಗೆ ಹೇಳಲು ಇಷ್ಟಪಡುವುದಿಲ್ಲ. ಸಾಮಾನ್ಯ ಜನತೆಯ ಪ್ರತಿನಿಧಿಯಾಗಿ ತ್ಯಂತ ಸಾಮಾನ್ಯ ಕುಟುಂಬದಿಂದ ಬಂದವನಾಗಿ ಆರ್ಥಿಕ ಸಂಕಷ್ಟಗಳುನ್ನು ಅರಿತುಕೊಂಡು ಬಂದಿರು ವುದರಿಂದ ಪಟ್ಟಣಗಳಲ್ಲಿರುವವರಿಗೆ ಸಿಗುವಂತ ಸೌಲಭ್ಯ ಮತ್ತು ಸೌಕರ್ಯಗಳು ಹಳ್ಳಿಗಳಲ್ಲಿ ವಾಸಮಾಡ ತಕ್ಕಂಥ ಜನರಿಗೆ ಸಿಕ್ಕುತ್ತಿಲ್ಲವೆಂದು ಹೇಳಿ ಅವರಿಗೆ ಸರಿಯಾದ ಅನುಕೂಲ ಸಿಗುವಂತೆ ಮಾಡಿ ಅವರು ಸುಖವಾಗಿ ಇರುವುದಕ್ಕೆ ನಾವು ಪ್ರಯತ್ನ ಮಾಡಬೇಕೆಂದುಹೇಳುತ್ತೇನೆ. ಇವತ್ತು ಹಳ್ಳಿಗಳಲ್ಲಿ ಬಡತನ ಇದೆ. ಅದನ್ನು ಹೋಗಲಾಡಿಸುವುದಕ್ಕೆ ನಾವೆಲ್ಲರೂ ಪ್ರಯತ್ನಮಾಡಬೇಕು, ರಾಷ್ಟ್ರದಲ್ಲಿ ಸಮಾಜವಾದ ಬರಬೇಕಾದರೆ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಅದು ಹಳ್ಳಿ ತಾಲ್ಲೋಕುಮಟ್ಟದಲ್ಲಿಯೂ ಅಭಿವೃದ್ಧಿ ಹೊಂದಬೇಕು ಹೊರತು ಕೆವಲ ಪಟ್ಟಣಗಳಲ್ಲಿ ಆದರೆ ಸಾಲದು ಅದಕ್ಕಾಗಿ ಹಳ್ಳಿಗರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾ ಗುತ್ತದೆ. ಅಲ್ಲಿ ಸಣ್ಣ ಉದ್ಯಮಗಳನ್ನು ಪ್ರಾರಂಭಿಸ ಬೇಕಾಗಿದೆ. ವೈಜ್ಞಾನಿಕವಾದ ಶಿಕ್ಷಣದ ಬಗ್ಗೆ ಹೇಳಬೇಕೆಂದರೆ ಇವತ್ತಿಗೂ ಸಹಿತ ನಮ್ಮ ದೇಶದಲ್ಲಿ ಹಿಂದಿನಿಂದ ಬಂದ ಶಿಕ್ಷಣ ಪದ್ಧತಿಯನ್ನು ಬದಲಾವಣೆ ಮಾಡಬೇಕು ಕೇವಲ ಕಚೇರಿಗಳಲ್ಲಿ ಕೆಲಸಮಾಡುವ ಕಾರಕೂನರನ್ನು ಸೃಷ್ಟಿಸುವಂತಹ ಶಿಕ್ಷಣಪದ್ಧತಿ ಇದಯೇ ಹೊರತು ಸಾಮಾನ್ಯ ಜನರಿಗೆ ಅನುಕೂಲವಾಗುವಂತಹ ಶಿಕ್ಷಣ ಪದ್ಧತಿಯಿಲ್ಲವಾದ್ದರಿಂದ ಇದು ಹೋಗಬೇಕು. ಜಾಬ್ ಓರಿಯಂಟೆಡ್ ಆಗಿದೆ ಸಮಾಜವಾದ ಪ್ರಗತಿ ಬರಬೇಕಾದ ಶಿಕ್ಷಣದ ಪದ್ಧತಿಯನ್ನು ಬದಲಾವಣೆಮಾಡಿ ವೈಜ್ಞಾನಿಕವಾದ ಶಿಕ್ಷಣ ಪದ್ಧತಿ ಬರಬೇಕು. ಇದೇ ಕೇಂದ್ರಸರ್ಕಾರದವರು ಜನತಾಪಕ್ಷ ಆಡಳಿತ ವಹಿಸಿಕೊಂಡ ಪ್ರಥಮದಲ್ಲಿಯೇ ಮೂರು ವಾಗ್ದಾನ ಗಳನ್ನು ನಾವು ಪೂರೈಸುತ್ತೇವೆ ಎಂದು ಹೇಳಿದ್ದರು. ದೇಶದಲ್ಲಿ ಪ್ರಜಾಪಭ್ರುತ್ವ ನಾಶವಾಗಿದೆ ಆದನ್ನು ಪುನಃ ಪ್ರಜಾಪ್ರಭುತ್ವದ ಸ್ವಾತಂತ್ರ್ಯವನ್ನು ದೊರೆಕಿಸಿಕೊಡುತ್ತೆವೆ, ನಿರುದ್ಯೋಗಿಗಳಿಗೆಲ್ಲಾ ಉದ್ಯೋ ಗವನ್ನು ಕಲ್ಪಿಸುತ್ತೇವೆ ಹಾಗು ಪಕ್ಷಾಂತರವನ್ನು ನಿಲ್ಲಿಸುತ್ತೇವೆಂದು ಅದಕ್ಕೆ ಒಂದು ಮಸೂದೆಯನ್ನು ತಂದು ಆದನ್ನು ತಡೆಯುತ್ತೇವೆಂದು ಆದರೆ ಅದೇ ಜನರು ಪಕ್ಷಾಂತರವನ್ನು ಪ್ರಚೋದಿಸುತ್ತಿದ್ದಾರೆ ಜೊತೆಗೆವ್ಯಕ್ತಿ ಸ್ವಾತಂತ್ರವನ್ನು ಕೊಡುತ್ತೇವೆಂದು ಹೇಳಿದರೋ ಅವರೇ ಶಿಕ್ಷಕರು ಅವರಿಗೆ ಸಲ್ಲಬೇಕಾದ ನ್ಯಾಯವಾದ ಬೇಡಿಕೆಗಳನ್ನು ಕೇಳಿ ಶಾಂತಿಯುತವಾದ ಚಳುವಳಿ ಮಾಡಿದ್ದಕ್ಕೆ ಸುಮಾರು ೨೫ ಸಾವಿರ ಜನರನ್ನುಜೈಲಿಗೆ ಹಾಕಿದ್ದಾರೆ ಅದಕ್ಕಾಗಿ ನಮ್ಮ ನಮ್ಮ ತಪ್ಪುಗಳನ್ನು ಅರ್ಥಮಾಡಿಕೊಂಡು ಮೊಸವಾಗಿ ಇಲ್ಲಿಯವರೆಗೆ ಯಾವರೀತಿ ಮೋಸಮಾಡಿಕೊಂಡು ಬಂದಿರುತ್ತಾರೋ ಇನ್ನುಮುಂದೆ ಆ ರೀತಿ ಜನರನ್ನು ವಂಚಿಸಿಕೊಂಡು ಹೋಗಲ ಸಾಧ್ಯವಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಚುನಾವಣೆಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳಿಗೆ ದುಡ್ಡು ಇರಲಿಲ್ಲ ಇದನ್ನು ನಾನು ಇಲ್ಲಿ ಹೇಳಬಾರದಾಗಿತ್ತು, ಆದರೆ ಇದನ್ನು ಹೇಳಲು ಕಾರಣವಾದರೂ ಇಷ್ಟೆ. ನಮ್ಮ ವಿರೋದಪಕ್ಷದ ನಾಯಕರು ಹೇಳಿದ್ದಾರೆ ಕಾಂಗ್ರೆಸ್ ಐ ಪಕ್ಷದವರು ಚುನಾವಣೆಗಳಾದ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾರೆ ಹರಿಜನರ ಹಾಗೂ ಮುಸ್ಲಿಮ್ ಬಾಂದವರ ಮೇಲೆ ಅತ್ಯಾಚಾರ ನಡೆದಿದೆಯೆಂದು ಈ ಸಭೆಯಲ್ಲಿ ಕಣ್ಣೀರು ಸುರಿಸಿದರು. ಇದನ್ನು ಕೇಳಿದಮೇಲೆ ನಿಜವಾಗಿ ನಿಜವಾದ ಪರಿಸಿ ತಿಯನ್ನು ಕರ್ನಾಟಕದ ಜನತೆಯ ಎದುರಿಗೆ ಇಡಬಯಸುತ್ತೇನೆ. ಕಾಂಗ್ರೆಸ್ ಐ ಪಕ್ಷದಿಂದ ಚುನಾವಣೆಗೆ ನಿಂತವರು ಸಾಮಾನ್ಯ ಮನೆತನದಿಂದ ಬಂದವರು ಹಾಗೂ ಹಿಂದುಳಿದ ಜನಾಂಗ ದಿಂದ ಬಂದವರು ಇರುವುದರಿಂದ ಈ ಏನು ದಬ್ಬಾಳಿಕೆ ನಡೆದಿದೆಯೆಂದು ಹೇಳಿದ್ದಾರೆ ಅದು ಕೇವಲ ಜನ ತಾಪಕ್ಷ ಹಾಗೂ ರೆಡ್ಡಿ ಕಾಂಗ್ರೆಸ್‌ನಿಂದ ನಡೆದಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ನಮ್ಮ ಕಾರ್ಯ ಕರ್ತರನೇಕರಿಗೆ ಸಾಕಷ್ಟು ದಬ್ಬಾಳಿಕೆಗೆ ತುತ್ತಾಗಿದ್ದಾರೆ, ನಾವು ಹಳ್ಳಿಗಳಲ್ಲಿ ಚುನಾವಣೆ ಕಾಲಕ್ಕೆ ಆಫೀಸ್ ತೆಗೆಯುವುದಕೂ ಕೂಡ ಅವಕಾಶ ಕೊಡದೆ ನಮಗೆ ಅಲ್ಲಿಯ ಗುತ್ತೆದಾರರು ತೊಂದರೆ ಮಾಡಿದ್ದಾರೆ. ಮಾನ್ಯ ವಿರೋದ ಪಕ್ಷದ ನಾಯಕರು ಏನು ಹರಿಜನರ ಮತ್ತು ಹಿಂದುಳಿದವರ ಬಗ್ಗೆ ಏನು ಕನಿಕರ ತೋರಿಸುತ್ತಿದ್ದಾರೆ ಅದನ್ನು ನೋಡಿದರೆ ಹರಿಜನರನ್ನು ತೃಪ್ತಿಪಡಿಸುವುದಕ್ಕೆ ಈ ರೀತಿಯ ಅಪವಾದ

ಗಳನ್ನು ನಮ್ಮ ಪಕ್ಷದವರ ಮೇಲೆ ಹೇಳುತ್ತಿದ್ದಾರೆಂದರೆ ತಪ್ಪಾಗಲಾರದು. ಸಾಮಾನ್ಯವಾಗಿ ನಮಗೆ ಮತಕೊಟ್ಟವರಲ್ಲಿ ಹರಿಜನರು ಹಾಗೂ ಲಮಾಣಿಗಳು ಕಾಂಗ್ರೆಸ್‌ಗೆ ಮತ ಕೊಟ್ಟಿದ್ದಾರೆ. ಅವರು ಕೊಡುವ ಮತಗಳನ್ನು ತಪ್ಪಿಸಬೇಕೆಂದು ದೊಡ್ಡ ದೊಡ್ಡ ಜಮೀನ್ದಾರರು ಇವರನ್ನು ಮನೆಗಳಲ್ಲಿ ಕೂಡಿ ಹಾಕಿರುವುದು ನಮ್ಮಗಮನಕ್ಕೆ ಬಂದಿದೆ. ಆದರೆ ಅವರು ಎಲ್ಲರೂ ಒಂದು ದೃಢಮನಸ್ಸಿನಿಂದ ಮತ್ತು ನಿರ್ಧಾರದಿಂದ ಓಟು ಕೊಟ್ಟು ನಮ್ಮ ಪಕ್ಷವನ್ನು ಸರ್ಕಾರ ನಡೆಸಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ನಮಗೆ ಕೇವಲ ಅಲ್ಪ ಸಂಖ್ಯಾತರ ಮತ್ತು ಹಿಂದುಳಿದವರ ಬೆಂಬಲದಿಂದ ನಾವು ಆರಿಸಿಬಂದಿದ್ದೇವೆ. ನಮಗೆ ಯಾವುದೇ ಜಾತೀಯ ಬೆಂಬಲ ಅಥವಾ ಹಣದ ಬೆಂಬಲ ಹಾಗೂ ಜಮೀನ್ದಾರರ ಬೆಂಬಲ ಇಲ್ಲ ಸಾಮಾನ್ಯ ಜನತೆಯ ಹಿತದೃಷ್ಟಿಯಿಂದ ಸಾಮಾನ್ಯ ಜನತೆಯ ಕಲ್ಯಾಣಕ್ಕಾಗಿ ನಾವು ಪ್ರಯತ್ನ ಮಾಡೋಣ ವೆಂದು ಕರ್ನಾಟಕದ ಜನತೆಯು ಪ್ರಗತಿ ಪರವಾದ ಧೋರಣೆ ಇಟ್ಟುಕೊಂಡು ಸಮಾಜವಾದಿ ಸಮಾಜ ಹಾಗೂ ಜಾತ್ಯಾತೀತ ವ್ಯವಸ್ಥೆಯನ್ನು ನಿರೂಪಣೆಯನ್ನು ಮಾಡುವ ಒಂದು ವಿಶ್ವಾಸವನ್ನು ಇಟ್ಟು ಕೆಲಸ ಮಾಡಲಿಎಂದು ಜನರು ನಮ್ಮನ್ನು ಆರಿಸಿ ಕಳುಹಿಸಿಕೊಟ್ಟಿದ್ದಾರೆ ಅದಕ್ಕಾಗಿ ಕರ್ನಾಟಕದ ನಜತೆಗೆ ಕೃತಜ್ಞತಾ ಪೂರ್ವಕವಾಗಿ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನುಮುಗಿಸುತ್ತೇನೆ.

೪-೩೦ ಪಿ.ಎಂ.

† ಶ್ರೀ ಎಂ. ಚಂದ್ರಶೇಖರ್ (ಜಯನಗರ).—ಮಾನ್ಯ ಅಧ್ಯಕ್ಷರೆ ನಾವು ನಿನ್ನೆಯಿಂದ ಅನೇಕರ ಭಾಷಣಗಳನ್ನು ಕೇಳುತ್ತಿದ್ದೇವೆ. ಇದರಲ್ಲಿ ನಮ್ಮ ಸ್ನೇಹಿತರು ಹೇಳಿದಹಾಗೆ ಮೊದಲನೇಯದಾಗಿ ನಮ್ಮ ರಾಜ್ಯಪಾಲರು ಒಂದು ಮತವನ್ನು ಹೇಳಿದ್ದಾರೆ ಅಂದರೆ ರಾಜ್ಯಪಾಲರ ಕೈಯಲ್ಲಿ ಹೇಳಿಸಿದ್ದಾರೆ. ಈ ಸಲ ಚುನಾವಣೆಯಲ್ಲಿ ಜನರು ಹೆಚ್ಚಿನ ಉತ್ಸಾಹದಿಂದ ತಮ್ಮ ಬೆಂಬಲವನ್ನು ಸೂಚಿಸಿದ್ದಾರೆ ಎಂದು ಹೇಳಿಸಿದ್ದಾರೆ. ಈ ಸಲ ಎಂದರೆ ಇದೇ ಮೊದಲ ಸಲ ಅಲ್ಲವೆಂದು ಅರ್ಥಮಾಡಿಕೊಳ್ಳಬೇಕು. ಹೋದ ಲೋಕಸಭಾ ಚುನಾವಣೆಯಲ್ಲಿ..................

SRI C. M. ARUMUGHAM (K. G. F.).—Madam, Chairman, this is a general discussion on the Governor's Address. The discussion would generally be on policy matters and sometimes on the programmes of the Government also. So, it is necessary that during such general discursion the Ministers who are not engaged in the Upper House should be present here and note down the pointo.

I have been in the Assembly for quite some time. I was here from 1957 to 1962 and for some time in 1972 and have now come back again. Usually on the discussion on the Governor's Address and on the general discussion of the budget the senior officers will be present in the House. This is the fourth term of Sri Deve Gowda in this Assembly and he can vouchsafe for what I have said. I find that there is nobody in the Officers Gallery. Is it that they are neglecting the discussion on the Governor's Address or is it that they feel that this discussion is unimportant and so need not attend. We can certainly insist upon the senior officers including the Chief Secretary to be present here during this discussion. He need not be there throughout the day but sometimes he should sit here, note down the points made by members and supply to the Ministers concerned whatever information is necessary. They should not treat the House so lightly. I do not mean to say that all the senior officers should be present. There are so many officers and if you keep them one above the other they will reach the sky. They want

to become Secretaries, Commissioners and Chief Commissioners These are the designations given to the officers by the previous Government, I am not concerned with all that. You may call them by whatever designations you like. But what I wish to drive home is that during such discussions some of the senior officers should be present in the House so that they will be helpful to the Government. Otherwise, what are they meant for? Are we speaking here for the sake of speaking. If that is so, I can arrange for a public meeting at Shivajinagar and say whatever I want to say. The pint is that whetever I say here should be noted down and reply should be given to it and action should be taken on it. May be, some of the members are new but that does not mean that they should neglect the House. It amounts to neglecting the House. I think thereby they are not helping the Government to come to a decision or to take action. I therefore submit to the Government through you, Madam, that the Government should at least direct some of the senior officers to be present when we discuss the Governor's Address.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಆರ್ಮುಗಂರವರು ಏನು ಹೇಳಿದ್ದಾರೆ ಎಂದರೆ ಮಂತ್ರಿಗಳು ಸಭೆಯಲ್ಲಿ ಹಾಜರಿರಬೇಕು ಎಂದು. ಮಂತ್ರಿಗಳು ನಾವು ಹೇಳುವ ವಿಷಯಗಳನ್ನು ನೋಟ್‌ಡೌನ್ ಮಾಡಿಕೊಳ್ಳುತ್ತಾರೆ. ಅದೆಲ್ಲವನ್ನೂ ನೋಟ್‌ಡೌನ್ ಮಾಡಿಕೊಂಡು ಉತ್ತರ ಹೇಳುವಾಗ ಎಲ್ಲಕ್ಕೂ ಉತ್ತರ ಕೊಡುತ್ತೇವೆಂದು ಹೇಳುವುದು ಸ್ವಾಭಾವಿಕ. ಈಗ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಸಾಮಾನ್ಯ ಚರ್ಚೆ ನಡೆಯುತ್ತಿದೆ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಡುತ್ತಾರೆ. ಸಾಮಾನ್ಯವಾಗಿ ಈ ಚರ್ಚೆಗೆ ಉತ್ತರ ಕೊಡುವವರು ಸರ್ಕಾರದ ವತಿಯಿಂದ ಮಾನ್ಯ ಮುಖ್ಯ ಮಂತ್ರಿಯವರು. ಮಾನ್ಯ ಮುಖ್ಯ ಮಂತ್ರಿಯವರು ಈಗ ಈ ಸಭೆಯಲ್ಲಿ ಇಲ್ಲ. ಅವರೇ ಕೂತು ಎಲ್ಲಾ ವಿಷಯಗಳನ್ನು ಕೇಳಿದಾಗ ಆ ವಿಷಯ ಬೇರೆ. ಇಲ್ಲಿ ೫-೬ ದಿವಸದಿಂದ ಚರ್ಚೆ ನಡೆಯುತ್ತಿದೆ. ಒಬ್ಬೊಬ್ಬ ಮಾನ್ಯ ಸದಸ್ಯರೂ ಅವರವರ ವಿಷಯಗಳನ್ನು ಹೇಳುತ್ತಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಎಲ್ಲರ ಭಾಷಣವನ್ನು ತರಿಸಿ ಓದಿ ಆಮೇಲೆ ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ಯಾವ ಸದಸ್ಯರು ಇಂಪಾರ್ಟೆಂಟ್ ಪಾಯಿಂಟನ್ನು ರೈಸ್ ಮಾಡಿರುತ್ತಾರೋ ಅದಕ್ಕೆ ಮಾತ್ರ ಉತ್ತರ ಹೇಳುತ್ತಾರೆ. ಜನರಲ್ ಡಿಸ್ಕಷನ ಆಗುವ ಸಂದರ್ಭದಲ್ಲಿ ಚೀಫ್ ಸೆಕ್ರೆಟರಿಯವರು ಇಲ್ಲೇ ಇದ್ದು ನೋಟ್ ಮಾಡಿಕೊಳ್ಳಬೇಕಾಗುತ್ತದೆ. ವಿವಿಧ ಇಲಾಖೆಗಳ ಬಗ್ಗೆ ಚರ್ಚೆ ನಡೆಯುವಾಗ ಸಂಬಂಧಪಟ್ಟ ಅಧಿಕಾರಿಗಳು ಇರುತ್ತಾರೆ. ಜನರಲ್ ಡಿಸ್ಕಷನ್ ಆಗುವಾಗ ಮಂತ್ರಿಗಳೂ ಇರುತ್ತಾರೆ ಎಲ್ಲಾ ವಿಷಯಗಳನ್ನೂ ನೋಟ್‌ಡೌನ್ ಮಾಡಿಕೊಳ್ಳಬೇಕು. ಆಮೇಲೆ ಇದರಿಂದ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದಕ್ಕೆ ಸಹಕಾರಿಯಾಗುತ್ತದೆ. ಆದ್ದರಿಂದ ತಾವು ಅದಕ್ಕೆ ಬಹುಶಃ ಏನಾದರೂ ಸೂಚನೆ ಕೊಡುವುದು ಒಳ್ಳೆಯದು. ನಮ್ಮ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ನಮ್ಮ ಮುಂದೆ ಕುಳಿತುಕೊಂಡು ಪಾಯಿಂಟ್ ನೋಟ್ ಡೌನ್ ಮಾಡಿಕೊಳ್ಳುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಹಾಗೆಯೇ ಅಧಿಕಾರಿಗಳು ಇಲ್ಲದಿದ್ದರೆ ಒಳ್ಳೆಯದು. ಈ ಬಗ್ಗೆ ತಾವು ಏನು ನಿರ್ದೇಶನ ಕೊಡುತ್ತೀರಾ ಎಂಬುದು ತಮಗೆ ಬಿಟ್ಟದ್ದು. ಆದರೆ ಇದು ಸಲಹೆ ಮಾತ್ರ.

(Chairman).—I shall request the Hon'ble Minister to take necessary action.

SRI K. H. RANGANATH.—Madam, I very much appreciate the sentiments expressed by the hon'ble Members of this august House. Government would take necessary steps in this direction. We feel

they are right. We do not know on what subject each member would speak. It is but natural that they would expect that the points made by them should be noted down not only by the concerned Ministers but also by the Heads of Departments. I shall see that necessary arrangements are made.

ಶ್ರೀ ಎಂ. ಚಂದ್ರಶೇಖರ್.—ಇಲ್ಲಿ ಮಾನ್ಯ ರಾಜ್ಯಪಾಲರು ''ನಮ್ಮ ಜನತೆ ನಮ್ಮ ಸರ್ಕಾರಕ್ಕೆ ಹೆಚ್ಚಿನ ಹೊಣೆಯನ್ನು ವಹಿಸಿಕೊಟ್ಟು ಹೆಚ್ಚಿನ ಉತ್ಸಾಹದಿಂದ ತಮ್ಮ ಬೆಂಬಲವನ್ನು ಸೂಚಿಸಿದ್ದಾರೆ' ಎಂದು ಹೇಳಿದ್ದಾರೆ. ಹೀಗೆ ಹೇಳಿದಾಗ ಜನತೆ ಚುನಾವಣೆಗಳಲ್ಲಿ ಭಾಗವಹಿಸುವುದಕ್ಕೋಸ್ಕರ ಅವರಿಗೆ ಹೆಚ್ಚಿನ ಉತ್ಸಾಹ ಬರುವುದಕ್ಕೆ ಕಾರಣ ಏನುಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಕಳೆದ ೩೦ ವರ್ಷಗಳಿಂದ ನಾವು ಅನೇಕ ಚುನಾವಣೆಗಳನ್ನು ನೋಡಿದ್ದೇವೆ. ಆದರೆ ಹೋದ ಲೋಕಸಭೆಯ ಚುನಾವಣೆಯಲ್ಲೂ ಸಹ ಜನತೆ ಹೆಚ್ಚಿನ ಶ್ರದ್ಧೆ ಉತ್ಸಾಹಗಳನ್ನು ತೋರಿಸಿದ್ದಕ್ಕೆ ಕಾರಣ ಏನು? ಈ ಚುನಾವಣೆಯಲ್ಲೂ ಸಹ ಶ್ರದ್ಧೆ ಉತ್ಸಾಹಗಳನ್ನು ತೋರಿಸಿದ್ದಾರೆ. ಇದಕ್ಕೆ ಕಾರಣ ಇವೆ. ಕೇವಲ ಒಂದು ಪಕ್ಷದ ನೀತಿ, ಧೋರಣೆಗಳಿಗೋಸ್ಕರ ಅಥವಾ ಪಕ್ಷದ ಸರ್ಕಾರವನ್ನು ಆಡಳಿತಕ್ಕೆ ತರುವುದಕ್ಕೋಸ್ಕರ ಜನರು ಬೆಂಬಲ ಕೊಟ್ಟಿದ್ದಾರೆಂದು ಇವರು ಹೇಳುತ್ತಿದ್ದಾರೆ. ನಾನು ಹೇಳುತ್ತೇನೆ ಅವರ ಸರ್ಕಾರವನ್ನು ಆಡಳಿತಕ್ಕೆ ತರುವುದಕ್ಕೋಸ್ಕರ ಜನರು ಉತ್ಸಾಹ ತೋರಿಸಿದ್ದು ಅಲ್ಲ, ಈ ಪಕ್ಷಕ್ಕೆ ಬೆಂಬಲ ತೋರಿಸಿದ್ದು ಅಲ್ಲ, ಯಾವರೀತಿಯಿಂದಲೂ ಅಲ್ಲ. ಆ ಬಗ್ಗೆ ನಾನು ಹೇಳಬೇಕೆಂದರೆ ೧೯೭೧ರ ಚುನಾವಣೆಯಲ್ಲಿ ಇದ್ದಂಥ ೨೧೬ ಸ್ಥಾನಗಳಲ್ಲಿ ಆಗ ಬಂದಂತಹ ಸ್ಥಾನಗಳು ೧೬೫ ಮಾತ್ರ. ಈಗ ೧೯೭೮ರ ಚುನಾವಣೆಯಲ್ಲಿ ೨೨೪ ಸ್ಥಾನಗಳ ಪೈಕಿ ೧೫೧ ಸ್ಥಾನಗಳು ಬಂದಿದೆ. ಅಲ್ಲಿಗೆ ಜನತೆ ಅವರ ಬೆಂಬಲ, ಉತ್ಸಾಹಗಳನ್ನು ನಿಮಗೆ ಹೆಚ್ಚಾಗಿ ತೋರಿಸಿಲ್ಲ ಎಂದು ನನಗೆ ಅನ್ನಿಸುತ್ತದೆ. ಕಳೆದ ೧೯೭೭ರ ಲೋಕ ಸಭಾ ಚುನಾವಣೆಯಲ್ಲಿ ಆಳುವ ಪಕ್ಷಕ್ಕೆ ಬಂದಂತಹ ಮತಗಳು ಶೇಕಡ ೫೬ ಮತ್ತು ವಿರೋದಪಕ್ಷಕ್ಕೆ ಬಂದಂತಹ ಮತಗಳು ಶೇಕಡಾ ೪೪. ಇಲ್ಲಿ ಕೇವಲ ೧೧ ತಿಂಗಳಲ್ಲಿ ಇದು ತಿರುಗುಮುರುಗಾಗಿದೆ. ಜನತೆ ಇಲ್ಲಿ ತೋರಿಸಿರುವ ಬೆಂಬಲ ನಿಮಗಲ್ಲ, ಜನತೆ ತೋರಿಸುವ ಬೆಂಬಲ ಪ್ರಜಾಪ್ರಭುತ್ವಕ್ಕೆ. ದೇಶದಲ್ಲಿ ಪ್ರಜಾಪ್ರಭುತ್ವ ಹೋಗಿದ್ದು ನಾವು ಸುಮ್ಮನೆ ಕೂತರೆ ಆಗುವುದಿಲ್ಲ. ನಾವು ಉತ್ಸಾಹ ತೆಗೆದುಕೊಂಡು ಚುನಾವಣೆಯಲ್ಲಿ ಆಸಕ್ತಿ ತೋರಿಸಿದರೆ ಮುಂದೆ ಪ್ರಜಾಪ್ರಭುತ್ವ ಉಳಿಯುತ್ತದೆ ಎನ್ನುವುದನ್ನು ತಿಳಿದು ಕೊಂಡು ಜನತೆ ಚುನಾವಣೆಯಲ್ಲಿ ಚುನಾವಣಾ ಪದ್ಧತಿಗೆ ಮತ್ತು ಪ್ರಜಾಪ್ರಭುತ್ವಕ್ಕೆ ಉತ್ಸಾಹವನ್ನು ತೋರಿಸಿದ್ದಾರೆಯೇ ಹೊರತಾಗಿ ನಿಮ್ಮ ಸರ್ಕಾರಕ್ಕಾಗಲೀ ಗೌರ್ನರ್ ಸರ್ಕಾರಕ್ಕಾಗಲೇ ಉತ್ಸಾಹವನ್ನು ತೋರಿಸಿದ್ದಲ್ಲ. ಈ ರೀತಿ ಹೇಳುವಾಗ ೩ ಕಾರಣಗಳಿಂದ ನಾವು ಅದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ, ಮೊದಲು ನಾನು ಹೇಳಿದ ಹಾಗೆ ೧೯೭೪ರಲ್ಲಿ ಲೋಕನಾಯಕ ಶ್ರೀ ಜಯಪ್ರಕಾಶ್‌ನಾರಾಯಣರಿಂದ ಹೋರಾಟ ಪ್ರಾರಂಭವಾದಾಗ ಅವತ್ತು ಪ್ರಾರಂಭವಾಯಿತು ಜನತೆಯ ಉತ್ಸಾಹ ಈ ದೇಶದ ರಾಜಕೀಯದಲ್ಲಿ. ಅವತ್ತು ಪ್ರಾರಂಭವಾದ ಉತ್ಸಾಹ ಇವತ್ತಿಗೂ ಈ ದೇಶದ ಜನತೆಯಲ್ಲಿದೆ. ನಮ್ಮ ಸ್ನೇಹಿತರು ಆಗಲೇ ಹೇಳುತ್ತಿದ್ದರು, ಏನೆಂದರೆ ಈ ದೇಶದಲ್ಲಿ ೩೦ ವರ್ಷಗಳಿಂದ ಅನಾಚಾರ, ಭ್ರಷ್ಟಾಚಾರ ಇದೆ ಎಂದು. ಮಹಾತ್ಮಾ ಗಾಂಧೀಜಿಯವರು ಈ ದೇಶಕ್ಕೆ ಸ್ವಾತಂತ್ರವನ್ನು ಗಳಿಸಿ ಕೊಟ್ಟಾಗ ನಾವು ಏನು ನೆನೆಸಿಕೊಂಡಿದ್ದೇವೋ ಆ ದಾರಿಯಲ್ಲಿ ಈ ದೇಶ ಹೋಗುತ್ತಾ ಇಲ್ಲ. ಈ ದೇಶದಲ್ಲಿ ಮಾನ್ಯ ಜಯಪ್ರಕಾಶ್‌ನಾರಾಯಣರ ನಾಯಕತ್ವದಲ್ಲಿ ಹೋರಾಟ ಪ್ರಾರಂಭವಾದಾಗ ಜನತೆಯು ಈ ನಾಯಕನ ಹಿಂದೆ ಬೆಂಬಲವಾಗಿ ನಿಂತುಕೊಂಡರು. ಆಗ ಜನತೆಯಲ್ಲಿ ಉತ್ಸಾಹ ಪ್ರಾರಂಭವಾಯಿತು.

ತಾವು ಹೋಗುತ್ತಿದ್ದ ಮಾರ್ಗ ಸರ್ವಾಧಿಕಾರದ ಕಡೆಗೆ ಹೋಗುತ್ತಿತ್ತು. ಅದನ್ನು ತಪ್ಪಿಸು ಪ್ರಜಾಪ್ರಭುತ್ವದ ಕಡೆ ಹೋಗೋಣ ಎನ್ನುವ ಸಂದರ್ಭದಲ್ಲಿ ತುರ್ತು ಪರಿಸ್ಥಿತಿ ಜಾರಿಗೆ ತಂದು ಸುಮಾರು ೧೦ ತಿಂಗಳು ಜನತೆಯ, ಪತ್ರಿಕೆಗಳ ಬಾಯನ್ನು ಮುಚ್ಚಿದ್ದರು. ಜನತೆಯ ಹೋರಾಟ ಜಯಪ್ರಕಾಶ್ ನಾರಾಯಣ್ ಅವರ ಮುಂದಾಳತ್ವದಲ್ಲಿ ಪ್ರಾರಂಭವಾಯಿತು. ನಂತರ ಅವರನ್ನು ಜೈಲಿನಲ್ಲಿ ಹಾಕಿದರು. ಆಗ ಜನತೆ ಬಾಯಿ ಮುಚ್ಚಿಕೊಂಡಿತ್ತು. ಜನವರಿ ೧೯೭೭ರಲ್ಲಿ ಯಾವಾಗ ತುರ್ತು ಪರಿಸ್ಥಿತಿ ಸಡಿಲವಾಯಿತು ಅವತ್ತು ಮತ್ತೆ ಲೋಕಸಭೆ ಚುನಾವಣೆ ವಿಷಯ ಘೋಷಣೆಯಾಗಿ ಚಟುವಟಿಕೆಗಳು ಪ್ರಾರಂಭವಾಯಿತೋ ಅವತ್ತು ಜನತೆಯ ಉತ್ಸಾಹ ಪ್ರಾರಂಭವಾಯಿತು. ಜನತೆಯ

ಉತ್ಸಾಹ ಯಾವರೀತಿ ಉಕ್ಕಿ ಬಂತು ಎಂದರೆ ಮೊದಲನೆಯದಾಗಿ ಜಯಪ್ರಕಾಶ್ ನಾರಾಯಣ್ ಅವರ ನಾಯಕತ್ವದ ಹೋರಾಟ,ಎರಡನೆಯದಾಗಿ ಈ ದೇಶದಲ್ಲಿ ಸರ್ವಾಧಿಕಾರ ಬೆಳೆದು ಪ್ರಜಾಪ್ರಭುತ್ವ ಹೋಗುತ್ತಿದೆಯಲ್ಲಾ ಎಂದು ಜನರಲ್ಲಿ ಅರಿವು ಉಂಟಾಯಿತು. ೩ನೆಯದಾಗಿ, ೩೦ ವರ್ಷವಲ್ಲಿ ಯಾವುದೇ ಸಂಘಟಿತವಾದ ವಿರೋಧಪಕ್ಷ ಇರದೆ ಕಾಂಗ್ರೆಸ್ ಒಂದೇ ದೇಶಕ್ಕೆ, ಇನ್ಯಾವುದೇ ಪ್ರತಿಪಕ್ಷ ಇಲ್ಲ ಎಂಬ ಭಾವನೆ ಎಲ್ಲರಲ್ಲಿ ಮೂಡಿದ್ದು ಜನವರಿ ೨೨ ಆದಮೇಲೆ ಜನತಾ ಪಕ್ಷ ಉದಯವಾದಾಗ ಜನತೆಗೆ ಉತ್ಸಾಹ ಬಂತು. ೨೦ ತಿಂಗಳುಗಳ ಹಿಂದೆ ನಡೆದಂಥ ದುರಾಡಳಿತದಲ್ಲಿ ಜನತೆಯ ಮೇಲೆ ಏನೇನು ಹಿಂಸಾಚಾರಗಳನ್ನು ನಡೆಸಿದ್ದರು ಅದನ್ನು ಕೆಳಗೆ ಇಳಿಸಬೇಕಾದರೆ ಒಂದು ಸಂಘಟಿತವಾದ ಪಕ್ಷ ಇದೆ. ಆ ಪಕ್ಷವೇ ಜನತಾ ಪಕ್ಷ, ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಭಾರತದ ಜನತೆ ಜನತಾಪಕ್ಷದ ಬಗ್ಗೆ ಅತ್ಯಂತ ಉತ್ಸಾಹ ತೋರಿಸಿದರು. ಹೋದ ಲೋಕಸಭಾ ಚುನಾವಣೆಗೂ ಇಂದಿನ ವಿಧಾನಸಭಾ ಚುನಾವಣೆಗೂ ಹೋಲಿಸಿ ನೋಡಿದಾಗ ನಮ್ಮ ರಾಜ್ಯದ ಜನತೆ ಜನತಾ ಪಕ್ಷಕ್ಕೆ ಹೆಚ್ಚಿನ ಮತ ನೀಡಿದ್ದಾರೆ, - ಇದು ಒಂದು ಶುಭಸೂಚನೆ. ಜನತೆ ಆಳುವ ಪಕ್ಷಕ್ಕೆ ಶೇಕಡ ೪೪ರಷ್ಟು ಮತ ನೀಡಿದ್ದರೆ ವಿರೋಧವಾಗಿ ಶೇಕಡ ೫೬ರಷ್ಟು ಮತ ನೀಡಿದೆ, ಆದರೆ ರಾಜ್ಯಪಾಲರ ಭಾಷಣದಲ್ಲಿ ಆಳುವ ಪಕ್ಷಕ್ಕೇ ಜನತೆ ಹೆಚ್ಚು ಬೆಂಬಲ ಮತ್ತು ಉತ್ಸಾಹ ತೋರಿಸಿದ್ದಾರೆ ಎಂಬ ರೀತಿಯಲ್ಲಿ ಒಕ್ಕಣೆ ಇದೆ. ಅದು ತಪ್ಪು ಎಂದು ನಾನು ಹೇಳಬೇಕಾಗುತ್ತದೆ.

ಅನೇಕ ವಿಚಾರಗಳನ್ನು ನಮ್ಮ ಮಾನ್ಯ ಸ್ನೇಹಿತರುಗಳು ಮಾತನಾಡಿದ್ದಾರೆ. ಆದರೆ ನಾನು ಕೆಲವು ಮುಖ್ಯವಾದ ಅಂಶಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಒಂದು ಅಂಶ ಹೇಳಿದ್ದಾರೆ. ಆಂಧ್ರ ಮತ್ತು ತಮಿಳುನಾಡು ಚಂಡಮಾರುತ ಸಂತ್ರಸ್ತರ ನೆರವಿಗಾಗಿ ೩ ಲಕ್ಷ ರೂಪಾಯಿಯನ್ನು ಕಳುಹಿಸಿದ್ದೇವೆ ಎಂದು ಹೇಳಿದ್ದಾರೆ. ಮತ್ತು ಚಂಡಮಾರುತ ಸಂತ್ರಸ್ತ ಪರಿಹಾರ ಸಮಿತಿಯನ್ನು ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚನೆ ಮಾಡಿದ್ದು ೯೦ ಲಕ್ಷ ರೂಪಾಯಿ ಸಂಗ್ರಹವಾಗಿದೆ ಎಂದು ಹೇಳಿದ್ದಾರೆ. ಅಷ್ಟು ಹಣ ಸಂಗ್ರಹವಾಗಿದ್ದರೆ ಆ ಸಮಯದಲ್ಲಿ ಸಂಗ್ರಹವಾಗಿದ್ದು ಆಂಧ್ರ ಮತ್ತು ತಮಿಳುನಾಡಿಗೆ ಕಳಿಸಿದ್ದಾರೆಯೋ ಅಥವಾ ಮುಂದೆ ಆಗುವ ಅನಾಹುತಕ್ಕೋಸ್ಕರವಾಗಿ ಏನಾದರೂ ರಿಸರ್ವ್ ಆಗಿ ಇಟ್ಟಿದ್ದಾರೆಯೋ ಏನು ಎಂಬುದನ್ನು ತಿಳಿಸಿಲ್ಲ. ಮುಂದೆ ಇನ್ನೊಂದು ವಿಷಯವನ್ನು ಹೇಳಿದ್ದಾರೆ. ಸಂತಾನ ಶಕ್ತಿ ಹರಣ ಮಾಡಿಸಿಕೊಳ್ಳಲು ೧೯೭೭ರ ಜನವರಿ ಕೊನೆಯಲ್ಲಿ ಸುಮಾರು ೪ ಲಕ್ಷ ಜನ ಮುಂದಾಗಿದ್ದರು, ತಮಗೆಲ್ಲಾ ತಿಳಿದಿರುವಂತೆ ಅಂದರೆ ಸದನದಲ್ಲಿರುವ ಎಲ್ಲರಿಗೂ ತಿಳಿದಿರುವಂತೆ ದುರ್ದೈವದಿಂದ ಈ ಕ್ಷೇತ್ರದಲ್ಲಿ ಪ್ರಗತಿ ಕುಗ್ಗಿದೆ ಎಂದು ಹೇಳಿದ್ದಾರೆ. ೧೯೭೮ರ ಜನವರಿ ಕೊನೆಯವರೆಗೂ ಜನ ಮುಂದಾಗಿದ್ದರು ನಂತರ ಆ ಕ್ಷೇತ್ರದಲ್ಲ ಪ್ರಗತಿ ಕುಗ್ಗಿದೆ ಎಂಬ ರೀತಿಯಲ್ಲಿ ಹೇಳಿದ್ದಾರೆ. ಯಾತಕ್ಕೋಸ್ಕರ ಆ ಕ್ಷೇತ್ರದಲ್ಲಿ ಪ್ರಗತಿ ಕುಗ್ಗಿದೆ ಎಂಬುದಕ್ಕೆ ಕಾರಣ ಹೇಳುತ್ತೇನೆ. ನಿಮಗೆಲ್ಲಾ ತಿಳಿದಿರುವಂತೆ ಕೆಲವು ವಿಚಾರಗಳನ್ನು ಮುಚ್ಚಿಟ್ಟಿದ್ದಾರೆ. ಯಾವ ಒಂದು ಪಕ್ಷ ಹರಿಜನರನ್ನು, ದೀನರನ್ನು ಹಿಂದುಳಿದವರನ್ನು, ಅಲ್ಪಸಂಖ್ಯಾತರನ್ನು ಮೇಲಕ್ಕೆತ್ತುತ್ತೇವೆ ಅವರು ನಮ್ಮ ಹಿಂದಿದ್ದಾರೆ ಎಂದು ಹೇಳುತ್ತಿತ್ತು ಆ ಪಕ್ಷ ೨೫ ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತಂದಾಗ ಉತ್ತರ ಭಾರತದಲ್ಲಿ ಸಂತಾನ ಶಸ್ತ್ರಚಿಕಿತ್ಸೆ ಮಾಡುವಾಗ ಏನು ಅತ್ಯಾಚಾರಗಳು ಹೆಚ್ಚಿನ ಪ್ರಮಾಣದಲ್ಲಿ ನಡೆಯಿತು ಆ ಅತ್ಯಾಚಾರಗಳನ್ನು ಮುಚ್ಚಿಟ್ಟಿದ್ದು ಜನವರಿ ಕೊನೆಯಲ್ಲಿ ಲೋಕಸಭೆ ಚುನಾವಣೆಗಳು ಘೋಷಣೆಯಾದಂಥ ಕಾಲದಲ್ಲಿ ಜನತೆಗೆ ವಿಷಯ ಗೊತ್ತಾದಾಗ ಪ್ರಗತಿ ಕುಗ್ಗಿದೆ. ಉತ್ತರ ಭಾರತದಲ್ಲಿ ಏನೂ ಅತ್ಯಾಚಾರಗಳು ನಡೆಯಿತು ಅದೇ ರೀತಿ ದಕ್ಷಿಣ ಭಾರತದಲ್ಲೂ ನಡೆದಿವೆ, ಕರ್ನಾಟಕದಲ್ಲೂ ಆಗಿವೆ. ಹೋದ ವರ್ಷ ಶ್ರೀಮಾನ್ ಬಾಪೂರಾವ್ ದೇಶಪಾಂಡೆ ಅವರ ನಾಯಕತ್ವದಲ್ಲಿ, ತುರ್ತು ಪರಿಸ್ಥಿತಿಯ ಸಮಯದಲ್ಲಿ ನಡೆದಂತ ಅನೇಕ ಅತ್ಯಾಚಾರಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದಕ್ಕೋಸ್ಕರ ಏರ್ಪಾಡು ಮಾಡಲಾಗಿತ್ತು. ಕರ್ನಾಟಕದಲ್ಲೂ ಕೂಡ ನೂರಾರು ಜನ ಅತ್ಯಾಚಾರಕ್ಕೊಳಪಟ್ಟಿದ್ದಾರೆ. ೧೦-೧೫ ವರ್ಷದ ಹುಡುಗನಿಂದ ೭೫ ವರ್ಷದ ಮುದುಕರಿಗೂ ಶಸ್ತ್ರಚಿಕಿತ್ಸೆ ಮಾಡಿದ್ದಾರೆ. ಆ ಬಗ್ಗೆ ಮಾಹಿತಿ ಕೂಡ ಇದೆ. ಷಾ ಕಮಿಷನ್‌ಗೆ ಕೂಡ ಅದನ್ನು ಕಳುಹಿಸಿದ್ದೇವೆ. ಈ ವಿಷಯವನ್ನು ಮುಚ್ಚಿಟ್ಟಿದ್ದು ನಂತರ ಪತ್ರಿಕೆಯಲ್ಲಿ ಹೊರಗೆ ಬಂತು. ಈ ಕಾರಣದಿಂದ ಕುಟುಂಬ ಯೋಜನೆ ಕಾರ್ಯಕ್ರಮದಲ್ಲಿ ಪ್ರಗತಿ ಕಡಿಮೆಯಾಗಿದೆ. ವಾಲೆಂಟಿಯರಾಗಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವಂತೆ ಮಾಡಲು ಜನತಾಪಕ್ಷ ಯಾವರೀತಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂಬ ಬಗ್ಗೆ ಯೋಚನೆ ಮಾಡುತ್ತಿದೆ.

ವಿದ್ಯಾಭ್ಯಾಸದ ವಿಚಾರವಾಗಿ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಪ್ರೈಮರಿ ಮತ್ತು ಪ್ರೌಢಶಾಲೆಗಳಿಗೋಸ್ಕರವಾಗಿ ಅನೇಕ ಕಟ್ಟಡಗಳಿಗೆ ಹಣ ಮಂಜೂರು ಮಾಡಿರುವುದಾಗಿ ಹೇಳಿದೆ. ಇಲ್ಲಿರುವ ಅನೇಕ ಸದಸ್ಯರು ಹಳ್ಳಿಗಾಡಿನಿಂದ ಬಂದಿರತಕ್ಕವರಿದ್ದೀರಿ. ತಮಗೆ ಗೊತ್ತಿದೆ ಅಲ್ಲಿ ಯಾವ ರೀತಿ ಕಟ್ಟಡಗಳಿರುತ್ತವೆಂದು ಬೆಂಗಳೂರಿನಲ್ಲಿ ಒಂದು ಕಡೆ ಪ್ರೈಮರಿ ಸ್ಕೂಲ್ ಹೇಗೆ ನಡೆಯುತ್ತಿದೆ ಎಂಬುದರ ಬಗ್ಗೆ ಹೇಳುತ್ತಿದ್ದೇನೆ. ಬೆಂಗಳೂರು ನಗರದ ಮಾವಳ್ಳಿಯಲ್ಲಿ ತಾವುಗಳೆಲ್ಲ ಯಾರಾದರೂ ಹೋಗಿ ನೋಡಿದರೆ ಗೊತ್ತಾಗುತ್ತದೆ. ಆ ಶಾಲೆಯ ಎರಡು ಕೊಠಡಿಗಳು ಕೆಳಗೆ ಬೀಳುವ ಸ್ಥಿತಿಯಲ್ಲಿದೆ. ಇಂಥ ಕಟ್ಟಡದಲ್ಲಿ ಅಲ್ಲಿ ಪ್ರೈಮರಿ ಸ್ಕೂಲ್ ನಡೆಯುತ್ತಿದೆ. ಪ್ರಾಥಮಿಕ ಶಾಲೆಯ ಪ್ರತಿ ಕೊಠಡಿಗೆ ತಾನು ಕೊಡುವ ಅಂಶದಾನವನ್ನು ಸರ್ಕಾರ ೨,೫೦೦ ರೂಪಾಯಿನಿಂದ ೪,೫೦೦ ರೂಪಾಯಿಗೆ ಹೆಚ್ಚಿಸಿದೆ. ಕಳೆದ ೩ ವರ್ಷಗಳಲ್ಲಿ ೩,೭೫೫ ಶಾಲಾ ಕೊಠಡಿಗಳನ್ನು ಕಟ್ಟಲಾಗಿದೆ ಎಂದು ಹೇಳಿದ್ದೀರಿ, ಅಂದಮೇಲೆ ಬೆಂಗಳೂರಿನಲ್ಲಿರುವಂತಹ ಶಾಲಾ ಕಟ್ಟಡವನ್ನು ಯಾತಕ್ಕೆ ರಿಪೇರಿ ಮಾಡಲಿಲ್ಲ. ಅಲ್ಲಿರುವ ಸ್ಥಳೀಯ ಜನ ವಿದ್ಯಾ ಇಲಾಖೆಯ ಮೊರೆ ಹೋಗಿದ್ದಾರೆ, ಅದು ವಿದ್ಯಾ ಇಲಾಖೆ ಗಮನಕ್ಕೂ ಬಂದಿದೆ. ಅದಕೆ ಎಸ್ಟಿಮೇಟ್ ಕೂಡ ಆಗಿದೆ. ಕಟ್ಟಡಕ್ಕೆ ೪ ಲಕ್ಷ ರೂಪಾಯಿ ಎಸ್ಟಿಮೇಟ್ ಆಗಿದ್ದು ವರ್ಷಾನುಗಟ್ಟಲೆ ಆಗಿದೆ. ಇದುವರೆಗೆ ಆ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಕೇರಳ ಮತ್ತು ತಮಿಳುನಾಡಿನಲ್ಲಿ ಮಳೆಗಾಲದಲ್ಲಿ ಬಿಲ್ಡಿಂಗ್ ಬಿತ್ತಲ್ಲಾ ಹಾಗೆ ಆದಾಗ ಏನಾದರೂ ಕ್ರಮ ತೆಗೆದುಕೊಳ್ಳುತ್ತಾರೋ ಏನೋ ಗೊತ್ತಿಲ್ಲ. ಅಂಕಿ ಅಂಶದಲ್ಲಿ ಮಾತ್ರ ಬಹಳ ಪ್ರಗತಿಯಾಗಿದೆ ಎಂದು ತೋರಿಸುತ್ತಿದ್ದಾರೆ. ಜನ ನೀವು ಕೊಡುವ ಅಂಕಿಅಂಶಗಳನ್ನು ನಂಬಿ ಇದುವರೆಗೂ ಮತ ನೀಡುತ್ತಿದ್ದರು ಎಂದು ಅನ್ನಿಸುತ್ತೆ. ಈಗ ಜನ ನಂಬುವುದಿಲ್ಲ, ಕಣ್ಣಾರೆ ಕಂಡು ಮತ ನೀಡುತ್ತಾರೆ. ಈಗಾಗಲೇ ಗೊತ್ತಾಗಿದೆ, ಹೋದ ಸಾರಿ ನಡೆದಂಥ ಚುನಾವಣೆಯಲ್ಲಿ ತೋರಿಸಿದಂಥ ಬೆಂಬಲವನ್ನು ಈ ಸಾರಿ ನಿಮಗೆ (ಕಾಂಗ್ರೆಸ್‌ಗೆ) ತೋರಿಸಿಲ್ಲ ವಿರೋಧಪಕ್ಷಕ್ಕೂ ನಿಮಗೂ ಇದ್ದಂಥ ವ್ಯತ್ಯಾಸ ಕಡಿಮೆಯಾಗಿದೆ. ಹೆಚ್ಚು ಮತಗಳು ಆಳುವ ಪಕ್ಷಕ್ಕೆ ವಿರೋಧವಾಗಿ ಬಂದಿವೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಬೆಂಗಳೂರಿಗೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ನಗರಾಭಿವೃದ್ಧಿ ಪ್ರಾಧಿಕಾರ ಕೆಲವು ವರ್ಷದಿಂದ ಸೈಟುಗಳನ್ನು ಮಾಡುತ್ತಿದೆ. ಅನೇಕ ಬಾರ್ಡರ್ ಏರಿಯಾದಲ್ಲಿ ಕಾರ್ಪೊರೇಷನ್ ಮತ್ತು ಬಿ.ಡಿ.ಎ. ಸಂಬಂಧದಲ್ಲಿ ಅನೇಕ ಬದಲಾವಣೆಗಳು ಆಗಬೇಕಾಗಿವೆ. ಸರಿಯಾಗಿ ಟ್ರಾನ್ಸ್‌ಫರ್ ಆಗಿಲ್ಲ. ವರ್ಷಾನುಗಟ್ಟಲೆಯಿಂದ ಹಾಗೇ ಇದೆ ಜಾಗ ಯಾರಿಗೆ ಸೇರಬೇಕು ಎಂಬುದು ತೀರ್ಮಾನವಾಗದೆ ಪೌರರಿಗೆ ಬೇಕಾದಂಥ ಅನೇಕ ಸಲಕರಣೆಗಳಿಲ್ಲದೆ ತೊಂದರೆಯಾಗುತ್ತಿದೆ. ಬೆಂಗಳೂರು ನಗರದಲ್ಲಿರುವ ಅನೇಕ ಕೊಳಚೆ ಪ್ರದೇಸಗಳಲ್ಲಿ ಹೆಚ್ಚು ಮಂದಿ ಹರಿಜನರು ಮತ್ತು ಅಲ್ಪಸಂಖ್ಯಾತರು ವಾಸ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿರುವ ಅನೇಕ ಕೊಳಚೆ ಪ್ರದೇಶಗಳು ಕಾರ್ಪೊರೇಷನ್ ಏರಿಯಾಕ್ಕೆ ಸೇರಿಸಿದ್ದರೆ ಅನೇಕ ಕೆಲಸಗಳನ್ನು ಮಾಡಿಸುವುದಕ್ಕಾಗುತ್ತದೆ. ಅದಕ್ಕೂ ಅವಕಾಶವಿಲ್ಲದೆ ಬಿ.ಡಿ.ಎ. ಕಂಟ್ರೋಲ್‌ನಲ್ಲಿಟ್ಟುಕೊಂಡು ಪೌರರಿಗೆ ಬೇಕಾದಂಥ ಅನೇಕ ಸಲಕರಣೆಗಳು ಇಲ್ಲದೆ ಜನ ಬಹಳ ತೊಂದರೆಪಡುತ್ತಿದ್ದಾರೆ. ಈ ರೀತಿಯಾಗಿ ಬಿ.ಡಿ.ಎ ಕೆಲಸ ಮಾಡುತ್ತಿದೆ.

ಇನ್ನು ಕೊಳಚೆ ನಿರ್ಮೂಲನ ವಿಚಾರದಲ್ಲಿ ಹೇಳುವುದಾದರೆ, ಬೆಂಗಳೂರು ನಗರದಲ್ಲಿ ಕೇವಲ ೧೩ ಸ್ಥಳಗಳನ್ನು ಮಾತ್ರ ಮಂಡಳಿಯವರು ತೆಗೆದುಕೊಂಡಿದ್ದಾರೆ. ಇನ್ನೂ ಬೇಕಾದಷ್ಟು ಕೊಳಚೆ ಪ್ರದೇಶಗಳನ್ನು ಮಂಡಳಿಯವರು ತೆಗೆದುಕೊಂಡಿಲ್ಲ. ಈ ಮಂಡಳಿಯವರ ಮಾಡಿರುವಂಥ ಕೆಲಸಗಳು ಅಪಾರವಾದುವು. ಇದಕ್ಕೆ ಕೇಂದ್ರ ಸರ್ಕಾರದಿಂದಲೂ ಗ್ರಾಂಟ್‌ಗಳು ಬಂದಿವೆ. ರಾಜ್ಯ ಸರ್ಕಾರವೂ ಹಣವನ್ನು ಕೊಟ್ಟಿದೆ. ಆದರೆ ಕೇಂದ್ರ ಸರ್ಕಾರದಿಂದ ಬಂದಂಥ ಗ್ರಾಂಟನ್ನು ಇವರು ಬೇರೆ ಕಡೆಗೆ ಡೈವರ್ಟ್ ಮಾಡಿ ಉಪಯೋಗಿಸಿದ್ದಾರೆ. ಇನ್ನೂ ಕೆಲವು ಕಡೆಗಳಲ್ಲಿ, ಕೊಳಚೆ ಇರುವ ಪ್ರದೇಶದಲ್ಲಿ, ಬಡವರು ಇರುವಂಥ ಕಡೆಗಳಲ್ಲಿ ಇವರನ್ನು ಬೇರೆ ಕಡೆಗೆ ವರ್ಗಾಯಿಸಿ, ಅವರಿಗೆ ಸರಿಯಾದ ವ್ಯವಸ್ಥೆಯನ್ನೂ ಮಾಡದೆ, ಅವರು ಮೊದಲು ಇದ್ದ ಜಾಗವನ್ನು ಒಂದು ಟ್ರಾನ್ಸ್‌ಪೋರ್ಟ್ ಕಂಪನಿಗೆ ಹರಾಜು ಮಾಡಿ ಕೊಟ್ಟಿದ್ದಾರೆ. ಅಲ್ಲಿದ್ದ ವಾಟರ್ ಮೇನ್ ಆ ಗ್ಯಾರೇಜ್‌ನವರಿಗೆ ಉಪಯೋಗವಾಗುತ್ತಿದೆ. ಆದರೆ ಈ ಬಡ ಜನತೆಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಇಂಥ ಒಂದು ರೀತಿಯಲ್ಲಿ ಕೊಳಚೆ ನಿರ್ಮೂಲನ ಮಂಡಳಿ ಕೆಲಸ ಮಾಡುತ್ತಿದೆ.

ಇನ್ನು ಹೌಸಿಂಗ್ ಬೋರ್ಡ್ ವಿಚಾರವಾಗಿ ಕೆಲವು ಮಾತುಗಳನ್ನು ಹೇಳುತ್ತೇನೆ. ಈ ಸಭೆಯ ಅಧ್ಯಕ್ಷರು, ಅದರ ಹಿಂದಿನ ಅಧ್ಯಕ್ಷರಾಗಿದ್ದರು. ಅವರು ಕೆಲವು ಒಳ್ಳೆಯ ಕೆಲಸಗಳನ್ನು ಮಾಡಿರ

ಬಹುದು. ಆದರೂ ಅದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ಬೋರ್ಡಿನವರು ನಗರಗಳಲ್ಲಿ ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗಳನ್ನು ಕಟ್ಟಿದ್ದಾರೆ. ಇದರ ಡಿಸೈನ್ ಮಾಡುವಾಗ, ಇದಕ್ಕೆ ಓವರ್ ಹೆಡ್ ಟ್ಯಾಂಕ್ಸ್ ಇಲ್ಲದೆ, ಮಾಡಿದ್ದಾರೆ. ಇದರಿಂದಾಗಿ ಅಲ್ಲಿ ವಾಸ ಮಾಡತಕ್ಕ ಮೂರನೆ ಅಂತಸ್ತಿನ ಜನರಿಗೆ ನೀರಿನ ವ್ಯವಸ್ಥೆ ಇಲ್ಲವಾಗಿದೆ. ಅವರು ಮೂರನೆಯ ಮಹಡಿಯಿಂದ ಕೆಳಗೆ ಬಂದು ನೀರನ್ನು ತೆಗೆದುಕೊಂಡು ಹೋಗಬೇಕಾಗಿದೆ. ಇನ್ನೊಂದು ಉದಾಹರಣೆ ಎಂದರೆ, ಜಯನಗರದ ಒಂದು ಭಾಗದಲ್ಲಿ, ಸಿದ್ದಾಪುರ ಇದೆ, ಅಲ್ಲಿ ಮಲ್ಟಿಸ್ಟೋರೀಡ್ ಬಿಲ್ಡಿಂಗ್ಸ್ ೪-೫ ಬ್ಲಾಕ್‌ಗಳು ಇವೆ. ಅ ಏನಾಗಿದೆ ಎಂದರೆ, ಕಾರಣಾಂತರದಿಂದ, ಇದನ್ನು ಬೋರ್ಡಿನವರು ಕಾರ್ಪೊರೇಷನ್‌ಗೆ ಬಿಟ್ಟು ಕೊಟ್ಟಿಲ್ಲ. ಈ ರೀತಿಯಾಗಿ ಮಾಡದೆ ಇರುವುದರಿಂದ, ಈ ಬ್ಲಾಕ್‌ಗಳ ಅಸೆಸ್‌ಮೆಂಟ್ ಆಗಿಲ್ಲ, ಅಸೆಸ್‌ಮೆಂಟ್ ಆಗದೆ ಇರುವುದರಿಂದ, ಕಾರ್ಪೊರೇಷನ್‌ನವರು ಈ ಸ್ಥಳಗಳನ್ನು ಶುದ್ಧಿ ಮಾಡುವ ಕೆಲಸವಾಗಲೀ, ರಸ್ತೆಗಳನ್ನು ಮಾಡುವುದಾಗಲೀ, ಅಪ್ರೋಚ್ ರೋಡುಗಳನ್ನು ಮಾಡುವುದಾಗಲೀ ಏನನ್ನೂ ಮಾಡಿಲ್ಲ. ಅಲ್ಲಿ ಅನೇಕ ಜನ ಸರ್ಕಾರಿ ಆಫೀಸರ್ಸ್ ಇದ್ದಾರೆ, ಕಾರ್ಖಾನೆಯಲ್ಲಿ ಕೆಲಸ ಮಾಡುವವರು ಇದ್ದಾರೆ, ಅವರೆಲ್ಲರಿಗೂ ನೀರಿನ ವ್ಯವಸ್ಥೆ ಇಲ್ಲವಾಗಿದೆ. ಅವರೇ ನಾವು ಬಂದು ಸಪರೇಟ್ ಮೋಟರ್ ಅನ್ನು ಹಾಕಿಕೊಳ್ಳುತ್ತೇವೆ ಅವಕಾಶ ಮಾಡಿಕೊಡಿ ಎಂದು ಕೇಳಿದರೂ ಸಹ ಆಗುವಂತಿಲ್ಲ. ಏನಾದರೂ ಅನುಕೂಲ ಆಗಬೇಕು ಎಂದರೂ ಆಗುವಂತಿಲ್ಲ. ಇದು ಹೌಸಿಂಗ್ ಬೋರ್ಡಿನವರು ಮಾಡಿರುವ ಕೆಲಸದ ವೈಖರಿ ಬೆಂಗಳೂರು ನಗರದಲ್ಲಿ ಈ ರೀತಿಯಾಗಿದೆ. ಬೇರೆ ಕಡೆಗಳಲ್ಲಿ, ಅದರಲ್ಲಿಯೂ ಹಳ್ಳಿಗಾಡುಗಳಲ್ಲಿ ಯಾವ ರೀತಿ ನಡೆಯುತ್ತದೆಯೋ ಗೊತ್ತಿಲ್ಲ.

ಆಮೇಲೆ ಭೂ ಸುಧಾರಣೆ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳುತ್ತೇನೆ. ಈ ಭೂಸುಧಾರಣೆಯಿಂದ ಎಷ್ಟು ಅನುಕೂಲವಾಗಿದೆ, ಯಾರಿಗೆ ಅನುಕೂಲವಾಗಿದೆ ಎನ್ನುವುದು ಆ ಕಡೆ ಇರತಕ್ಕ ಸದಸ್ಯರಿಗೆ ಚೆನ್ನಾಗಿ ಗೊತ್ತು. ಆದರೆ ಅವರಿಗೆ ಹೇಳುವುದಕ್ಕೆ ಧೈರ್ಯ ಇಲ್ಲ. ರಾಜ್ಯಪಾಲರ ಭಾಷಣದಲ್ಲಿ ಅವರೇ ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ೭ ಲಕ್ಷ ೪೮ ಸಾವಿರ ಅರ್ಜಿಗಳ ಪೈಕಿ ಸುಮಾರು ೪೦ ಲಕ್ಷ ಎಕರೆ ಭೂಮಿಯ ವಿಲೇವಾರಿಯಾಗಿದೆ, ಬಾಕಿ ೩ ಲಕ್ಷದ ಆವ್ರೇಜ್ ತೆಗೆದುಕೊಂಡರೆ, ಜಮೀನು ವಿಲೇವಾರಿ ಆಗಬೇಕಾಗಿರುವವರು ಯಾರು ? ಸಾಮಾನ್ಯವಾದ ಸಣ್ಣ ರೈತನ ಜಮೀನಿನ ವಿಲೇವಾರಿಯಾಗಿದೆ ಅಂದರೆ ಯಾರಿಗೆ ಪ್ರತಿಭಟನೆ ಮಾಡುವಂಥ ಶಕ್ತಿ ಇಲ್ಲವೋ ಅವರ ಜಮೀನಿನ ವಿಲೇವಾರಿಯಾಗಿದೆ. ಸುಮಾರು ೫ ಎಕರೆಯಿಂದ ೧೦-೧೨ ಎಕರೆಯವರೆಗೆ ಭೂಮಿ ಇರತಕ್ಕ ಭೂ ಮಾಲೀಕರ ಜಮೀನನ್ನು ವಿಲೇವಾರಿ ಮಾಡುವುದು ಆಗಿಲ್ಲ ಎಂದು ಇವರು ಕೊಟ್ಟಿರತಕ್ಕ ಅಂಕಿ ಅಂಶಗಳಿಂದಲೇ ಗೊತ್ತಾಗುತ್ತದೆ. ಸಾಮಾನ್ಯ ರೈತರು, ಅಲ್ಪಸಂಖ್ಯಾತರು, ಹಿಂದುಳಿದವರು, ಕುಂಬಾರರು, ನೇಯ್ಗಾರರು ಮತ್ತು ಕಮ್ಮಾರರು ಇವರು ಸ್ವಲ್ಪ ಸ್ವಲ್ಪ ಜಮೀನನ್ನು ಇಟ್ಟುಕೊಂಡು, ತಮ್ಮ ಕಸಬನ್ನೂ ಮಾಡಿಕೊಂಡು ಜೀವನ ಮಾಡುತ್ತಿದ್ದವರ ಬಗ್ಗೆ ವಿಲೇವಾರಿಯಾಗಿದೆ ಹೊರತು ದೊಡ್ಡ ದೊಡ್ಡ ಭೂ ಮಾಲಿಕರ ಬಗ್ಗೆ ಇವರು ಯಾವ ಕೆಲಸ ಮಾಡಿಲ್ಲ. ಜಮೀನ್ದಾರರು ತಮ್ಮ ಜಮೀನನ್ನು ಇನ್ನೂ ಇಟ್ಟುಕೊಂಡೇ ಇದ್ದಾರೆ. ಯಾರು ಜಮೀನಿನ ಒಡೆಯನಾಗಬೇಕೋ ಅವರು ಜಮೀನಿನ ಒಡೆಯನಾಗದೆ, ಗೇಣಿದಾರನಾಗಿಯೇ ಉಳಿದಿರುವ ಪ್ರಸಂಗಗಳು ಅನೇಕ ಇವೆ. ಭೂ ಮಾಲೀಕರು ಅಧಿಕಾರಿಗಳ ಮುಖಾಂತರ, ಕೋರ್ಟಿನ ಮುಖಾಂತರ, ಈ ಕೆಲಸವನ್ನು ತಡೆ ಹಿಡಿದು ಈ ಕೆಲಸಕ್ಕೆ ಅಡ್ಡಿ ಹಾಕುತ್ತಿದ್ದಾರೆ. ಈ ವಿಷಯ ನಮಗೆ, ಸರಿಯಾದ ಅಂಕಿ ಅಂಶಗಳನ್ನು ಇದರ ಬಗ್ಗೆ ಕೊಟ್ಟಿರುವುದರಿಂದ ಅರ್ಥವಾಗಿದೆ. ಬರೀ ಅರ್ಜಿಗಳ ಇಷ್ಟು ಬಂದಿವೆ ಎಂದು ಹೇಳಿದ್ದರೆ ನಮಗೆ ಇದು ಅರ್ಥವಾಗುತ್ತಾ ಇರಲಿಲ್ಲ.

ಶ್ರೀ ಡಿ. ಟಿ. ರಾಮು.—ಒಟ್ಟಾರೆ ಬಡವರಿಗೆ ಅನುಕೂಲವಾಗಿದೆಯೋ ಇಲ್ಲವೇ ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ರಾಜ್ಯಪಾಲರು, ತಮ್ಮ ಭಾಷಣವನ್ನು ಇಲ್ಲಿ ಓದಿದ ಮಾರನೆಯ ದಿವಸ ಪತ್ರಿಕಾ ಕರ್ತರು, ಭೂ ಸುಧಾರಣೆ ಬಗ್ಗೆ ಭೂಮಿ ಕಳೆದುಕೊಂಡ ವಿಧವೆಯರಿಗೆ ಸರ್ಕಾರದವರು ಕಾಂಪನ್ಸೇಷನ್ ಕೊಡುತ್ತಾರೆ ಎಂದು ದೊಡ್ಡದಾಗಿ ಪತ್ರಿಕೆಯಲ್ಲಿ ಪ್ರಕಟಿಸಿದರು. ಆದರೆ ಇದರ ಬಗ್ಗೆ ಹೋರಾಟ ಮಾಡಿದವರು ಯಾರು ? ಅವರಿಗೆ ಕಾನೂನಿನಲ್ಲಿ ಅವಕಾಶ ಇಲ್ಲದಾಗ, ಅನೇಕ ಜನ ಪ್ರಗತಿಪರ ಮಹಿಳೆಯರು ಮುಂದೆ ಬಂದು ಹೋರಾಟ ನಡೆಸಿದ್ದಾರೆ. ಅದರಲ್ಲಿ ನಮ್ಮ ಶಾಸಕಿಯರಾದ ಶ್ರೀಮತಿ ಪ್ರಮಿಳ ಅವರು, ಇಂದಿರಾಗಾಂಧಿಯವರು ಮಂಗಳೂರಿಗೆ ಬಂದಾಗ ಅನೇಕ ಜನ ಮಹಿಳೆಯರನು ಅಲ್ಲಿಗೆ ಕರೆದುಕೊಂಡು ಹೋಗಿ ಬ್ಲಾಕ್ ಫ್ಲಾಗ್ ಡೆಮಾನ್‌ಸ್ಟ್ರೇಷನ್ ಮಾಡಿ

ಹೋರಾಟ ಮಾಡಿರುವುದು ತಮಗೆ ಗೊತ್ತಿದೆ. ಇದಕ್ಕೆ ನಿಜವಾಗಿಯೂ ಹೋರಾಡಿದವರು ನಮ್ಮ ಪಕ್ಷದವರು. ಈ ನಮ್ಮ ಒಂದು ನೀತಿಯನ್ನು ನೀವು ಒಪ್ಪಿಕೊಂಡಿದ್ದೀರಿ. ಅದಕ್ಕೆ ನಮ್ಮ ಧನ್ಯವಾದಗಳು,

ಸರ್ಕಾರದವರು ನಿರುದ್ಯೋಗಿಗಳಿಗೆ ಮತ್ತೊಂದು ಸ್ಕೀಂನ್ನು ತಂದಿದ್ದಾರೆ. ಇವರಿಗೆ ತಿಂಗಳಿಗೆ ೧೫೦ ರೂಪಾಯಿಗಳ ಸಂಭಾವನೆಯನ್ನು ಕೊಡಬೇಕು ಎಂದು. ಹಿಂದೆ ಹಾಫ್ ಮಿಲಿಯನ್ ಜಾಬ್ ಸ್ಕೀಂ ಎಂದು ಮಾಡಿದ್ದರು. ಅದರಿಂದ ಯಾರಿಗೂ ಸರಿಯಾಗಿ ಉಪಯೋಗವಾಗಲಿಲ್ಲ. ಆ ರೀತಿ ಇದೂ ಆಗಬಾರದು. ಸ್ಟೈಪೆಂಡ್ ಕೊಡತಕ್ಕ ಕಾಲದಲ್ಲಿ ಅವರಿಗೆ ಸರಿಯಾದ ತರಬೇತಿಯನ್ನು ಕೊಟ್ಟು ಅವರನ್ನೆ ಮುಂದೆ ಖಾಯಂ ಹುದ್ದೆಗೆ ತೆಗೆದುಕೊಳ್ಳಬೇಕು. ರಾಜ್ಯದಲ್ಲಿ ಅನೇಕ ಕಾರ್ಖಾನೆಗಳು ಇವೆ, ಸರ್ಕಾರಿ ಸಂಸ್ಥೆಗಳು ಇವೆ, ಇವುಗಳಲ್ಲಿ ಈ ತಮ್ಮ ಒಂದು ಸ್ಕೀಂನಲ್ಲಿ ತರಬೇತಿಯನ್ನು ಪಡೆದವರನ್ನು ನೇಮಿಸಿಕೊಳ್ಳಬೇಕು. ಇಂಥ ಒಂದು ಕೆಲಸವನ್ನು ತಾವು ಮಾಡಿದರೆ ತರಬೇತಿಯನ್ನು ಪಡೆದವರಿಗೂ ಉಪಯೋಗವಾಗುತ್ತದೆ, ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ, ಇಲ್ಲದೆ ಹೋದರೆ, ನೀವು ಬರೀ ೧೫೦ ರೂಪಾಯಿಗಳನ್ನು ಅವರಿಗೆ ಕೊಡುವುದರಿಂದ ಅವರು ತಮ್ಮ ಜೀವನ ನಡೆಸುವುದಕ್ಕಾಗುವುದಿಲ್ಲ. ಅವರಿಗೆ ಜೀವನಕ್ರಮ ಹುಟ್ಟಿಸುವುದಕೋಸ್ಕರ ಇದೊಂದು ಸೈಫಂಡ್. ಇನ್ನು ಕೊನೆಯದಾಗಿ ತಪ್ಪು ಕಲ್ಪನೆ ಏನು ಮಾಡಿದ್ದಾರೆ, ಜನತೆ ನಮ್ಮ ಹಿಂದೆ ಇದ್ದಾರೆ ಎಂದು ಏನು ಹೇಳುತ್ತಿದ್ದಾರೆ ಆ ಬಗ್ಗೆ ಒಂದೆರಡು ಉದಾಹರಣೆಗಳನ್ನು ನಿಮಗೆ ನಾನು ಕೊಡುತ್ತೇನೆ. ಜೀತ ಪದ್ಧತಿ ರದ್ದು ಮಾಡಿದಿರಿ, ಇದು ಬಹಳ ಶ್ಲಾಘನೀಯವಾದ ಕಾರ್ಯಕ್ರಮ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಸಮಾಜವಾದಿ ಕಾರ್ಯಕ್ರಮಕ್ಕೆ, ಜನಹಿತ ಕಾರ್ಯಕ್ರಮಕ್ಕೆ ನಾವು ಎಂದೂ ಅಡ್ಡಿ ಬರುವುದಿಲ್ಲ. ನಮ್ಮನ್ನು ಯಾವುದೇ ವಿಚಾರದಲ್ಲೂ ಜಮೀನ್ದಾರರು, ಬಂಡವಾಳಗಾರರು ಅಂದುಕೊಳ್ಳಬೇಡಿ. ಅಂತ ಜನ ಬೇಕಾದಷ್ಟು ಜನ ನಿಮ್ಮ ಪಕ್ಷದಲ್ಲಿಯೂ ಇದ್ದಾರೆ. ಇಂಥ ವಿಚಾರಗಳಲ್ಲಿ ನಿಮ್ಮ ಪಕ್ಷ ನಮ್ಮ ಪಕ್ಷ ಎಂದು ಹೇಳುವುದು ಬೇಡ.

5-00 ಪಿ.ಎಂ

ಒಬ್ಬ ಸದಸ್ಯರು.—ಹಿಂದುಳಿದ ವರ್ಗದವರಿಗೆ, ಮುಸಲ್ಮಾನ್ ಪಂಗಡದವರಿಗೆ ಚುನಾವಣೆಗೆ ಮೊದಲೇ ಹೆಚ್ಚಿನ ನೈಜ ಸತ್ಯಸಂಗತಿಯನ್ನು ಹೊರಪಡಿಸಿದೆವು.

ಶ್ರೀ ಎಂ. ಚಂದ್ರಶೇಖರ್.—ಬೆಂಗಳೂರಿನಲ್ಲಿ ಕೃಷ್ಣರಾಜಪುರ ಹೋಬಳಿಯಲ್ಲಿ ಒಂದು ಗ್ರಾಮದಲ್ಲಿ ಬಿಸಿಲಿನಲ್ಲಿ ಬಂಡೆ ಹೊಡೆದು ಕೆಲಸ ಮಾಡುವ ಹರಿಜನರು ಹಾಗೂ ಬೋವಿ ಜನಾಂಗಕ್ಕೆ ಸೇರಿದ ಸುಮಾರು ೨೦೦–೩೦೦ ಜನ ಇದ್ದಾರೆ. ಜೀತಪದ್ಧತಿ ರದ್ದಾದಾಗ ಇಲ್ಲಿನ ಕಂಟ್ರಾಕ್ಟ್‌ದಾರನನ್ನು ಮೀಸಾದಲ್ಲಿ ಹಾಕಿ ಅವನ ಗತಿ ತೋರಿಸಿದರು. ಆ ೨೦೦–೩೦೦ ಜನ ಕೆಲಸ ಇಲ್ಲದೇ ಇದ್ದಾಗ ಒಂದು ಕ್ರಿಶ್ಚಿಯನ್ ಮಿಷನರಿ ಒಂದು ಸಂಸ್ಥೆ ಆ ಮುನ್ನೂರು ಜನಕ್ಕೆ ಒಂದು ಸೊಸೈಟಿಯನ್ನು ಮಾಡಿ ಕೊಟ್ಟು ಸೊಸೈಟಿ ಮುಖಾಂತರ ಕೆಲಸಗಳನ್ನು ಮಾಡಿಸುತ್ತಾ. ಬಂದ ಲಾಭವನ್ನು ಅವರೆಲ್ಲಾ ಹಂಚಿಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿ ಬಂಡೆಗೆ ರಾಯಲ್ಟಿ ಕೊಡಬೇಕು. ಅಲ್ಲಿ ಕಂಟ್ರಾಕ್ಟರ್ಸ್ ಯಾರು ಇರುತ್ತಾರೊ ಅವರು ಎಕರೆಗೆ ೪೦೦ ರೂಪಾಯಿ ತೆಗೆದುಕೊಂಡು ಒಂದು ಮೆಟ್ರಿಕ್‌ಟನ್‌ಗೆ ೬ ರೂಪಾಯಿ ಕೊಡಬೇಕು. ಆದರೆ ಯಾವನೇ ಕಂಟ್ರಾಕ್ಟ್‌ದಾರ ಆಗಲಿ ಲೆಕ್ಕ ಇಡುವುದಿಲ್ಲ; ಅವನು ಎಷ್ಟು ಮೆಟ್ರಿಕ್ ಟನ್ ಖರ್ಚು ಮಾಡಿದರೂ ಕೂಡ ಅರ್ಥವಾಗುವುದಿಲ್ಲ. ಅಧಿಕಾರಿಗಳನ್ನು ಒಳಗೆ ಹಾಕಿಕೊಂಡಿರುತ್ತಾರೆ; ಸೊಸೈಟಿ ಮಾತ್ರ ರಾಯಲ್ಟಿ ಕಟ್ಟಬೇಕಾಗುತ್ತದೆ; ಲೆಕ್ಕಪತ್ರಗಳನ್ನು ಬರೆಯಬೇಕು. ಇದೆಲ್ಲಾ ಹೋಗುತ್ತಾ ಉಳಿಕೆ ಹಣವನ್ನು ಸೊಸೈಟಿಯವರು ಹಂಚಿಕೊಳ್ಳುತ್ತಾರೆ. ಅದಕ್ಕೆ ಅವರು ಸರ್ಕಾರಕ್ಕೆ ಕೇಳಿಕೊಂಡಿದ್ದಾರೆ; ಸರ್ಕಾರ ಹರಿಜನರಿಗೆ ಗಿರಿಜನರಿಗೆ ಸಹಾಯ ಮಾಡುತ್ತೇವೆ; ದಲಿತರಿಗೆ ಸಹಾಯ ಮಾಡುತ್ತೇವೆ; ಎಂದು ಹೇಳುತ್ತಾರೆ. ಇವರು ಕೂಡ ಜೀತ ಪದ್ಧತಿಯಿಂದ ರದ್ದಾದವರು ಸರ್ಕಾರದಲ್ಲಿ ಅದಕ್ಕಾಗಿ ಬೇರೆ ಹಣ ಇಟ್ಟಿದೆ, ಅವರು ನಾವು ಕಟ್ಟತಕ್ಕ ೬ ರೂಪಾಯಿಯನ್ನು ಮುಫತ್ತಾಗಿ ಮಾಡಿಕೊಡಿ ಎಂದು ಸರ್ಕಾರಕ್ಕೆ ಕೇಳುತ್ತಿದ್ದಾರೆ. ಇವತ್ತು ಜಿಯಾಲಾಜಿಕಲ್ ಡಿಪಾರ್ಟಮೆಂಟ್‌ನವರು ನೋಟೀಸ್ ಸರ್ವ್ ಮಾಡಿದ್ದಾರೆ ಕೆಲಸಗಳನ್ನು ನಿಲ್ಲಿಸಬೇಕಾಗುತ್ತದೆ. ನಾಲ್ಕೈದು ಪಕ್ಷಗಳವರನ್ನು ಒಂದು ಸಾರಿ ಕರೆಸಿದ್ದರು. ಪ್ರಭಾಕರ್‌ರವರನ್ನು ಆ ಸಭೆಗೆ ಕರೆಸಿದ್ದರು ಮಾನ್ಯ ಮಂತ್ರಿಗಳು ಆ ಸಭೆಗೆ ಬರಲಿಲ್ಲ. ಕಾರಣ ಏನು ಇರಬೇಕೋ ಗೊತ್ತಿಲ್ಲ. ಏನು ಸಮಸ್ಯೆ ಇರಲಿ ಏನು ತೊಂದರೆ ಇರಲಿ ಆ ಜನಕ್ಕೆ ಆ ಸಂಸ್ಥೆಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಮೊನೆ ಅಧ್ಯಕ್ಷರನ್ನು ಆಯ್ಕೆ ಮಾಡುವಾಗ ಹರಿಜನರಿಗೆ ಅವಕಾಶ ಕೊಟ್ಟಿದ್ದೇವೆ; ಯಾರು ಹಿಂದೆ ಮಾಡಿರಲಿಲ್ಲ ಇಂತಹ ಘನವಾದ ಕೆಲಸವನ್ನು ಮಾಡಿದ್ದೇವೆಂದು ಹೇಳಿದರು. ಆದೇ ಹರಿಜನರ ಪಂಗಡ ದವರಾದ ಬಸವಲಿಂಗಪ್ಪನವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುವ ಬಗ್ಗೆ ಅವರ ಮೇಲೆ ಇಲ್ಲ ಸಲ್ಲದ ಆರೋಪಗಳನ್ನು ಮಾಡಿದರು. ಯಾವುದೋ ಒಂದು ಕ್ಷೇತ್ರದಲ್ಲಿ ಕಾಂಗ್ರೆಸ್ (ಐ) ವಿರುದ್ಧವಾಗಿ ಕೆಲಸ ಮಾಡಿದರು ಎಂದು ದೊಡ್ಡ ಒಂದು ಬೊಬ್ಬೆ ಉಂಟು ಮಾಡಿದರು.

(ಗೊಂದಲ)

ಒಬ್ಬ ಸದಸ್ಯರು.—ಇದು ನಮ್ಮ ಪಕ್ಷದ ವಿಚಾರ ನಿಮಗೆ ಮಾತನಾಡುವುದಕ್ಕೆ ಅಧಿಕಾರ ಇಲ್ಲ.

ಶ್ರೀ ಎಂ. ಚಂದ್ರಶೇಖರ್.—ನಮಗೆ ಬೇಕಾಗಿರುವುದು ಹರಿಜನರ ಉದ್ಧಾರ. ಪಕ್ಷದ ವಿಚಾರವಲ್ಲ

ಒಬ್ಬ ಸದಸ್ಯರು.—ಕೇಂದ್ರದಲ್ಲಿ ಅವರ ಪಕ್ಷದವರು ಒಬ್ಬ ಹರಿಜನರನ್ನು ಪ್ರಧಾನಿಯಾಗಿ ಮಾಡಲಿ. ಬಾಬು ಜಗಜೀವನರಾಂ ರವರನ್ನು ಪ್ರಧಾನಿಯಾಗಿ ಇವರು ಮಾಡಲಿಲ್ಲ.

ಶ್ರೀ ಜೆ ಹೆಚ್. ಪಟೇಲ್.—ಅವರ ಪಕ್ಷದ ವಿಚಾರದಲ್ಲಿ ನಾವು ತಲೆ ಹಾಕೋದಿಲ್ಲ, ಈಗಲಾದರೂ ಅವರು ಮಾಡಲಿ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು.—ಯಾರಾದರೂ ಒಬ್ಬರು ಮಾತನಾಡಿ.

ಶ್ರೀ ಮಳ್ಳೂರು ಆನಂದರಾವ್.—ಚಂದ್ರಶೇಖರ್‌ರವರು ಮಾತನಾಡುತ್ತಿದ್ದಾಗ ೮-೯ ಜನ ಒಂದೇ ಬಾರಿ ಮಾತನಾಡಿದರೆ ಹೇಗೆ? ಈ ರೀತಿಯಾಗುವುದನ್ನು ತಾವು ತಡೆಯಬೇಕು. ನಾವು ಮಾತ ನಾಡಬೇಕಾದರೆ ಮಾತನಾಡುತ್ತಾರೆ.

ಶ್ರೀ ಮಳ್ಳೂರು ಆನಂದರಾವ್.—ನನ್ನ ಕ್ರಿಯಾಲೋಪ ಏನೆಂದರೆ, ಒಬ್ಬರು ಮಾತನಾಡುವಾಗ, ಇನ್ನೊಬ್ಬರಿಗೆ ಈಲ್ಡ್ ಆಗದಿದ್ದಾಗ, ಒಂದೇ ಸಲ ಹತ್ತಾರು ಜನ ಸದಸ್ಯರು ಎದ್ದು ನಿಂತು ಮಾತನಾಡು ವುದು ಸರಿಯೇ? ಇದನ್ನು ತಾವು ತಡೆಯಬೇಕು.

ಶ್ರೀ ಎಸ್.ಎಂ. ಶ್ರೀರ್‍ನಾಳಿ ಚಂದ್ರಶೇಖರ್.—ಮಾನ್ಯ ಸದಸ್ಯರು ಮಾತನಾಡುವಾಗ ಮಾನ್ಯ ಬಸವಲಿಂಗಪ್ಪನವರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಲಿಲ್ಲವೆಂದು ಹೇಳಿದರು. ಅವರು ನಮ್ಮ ಪಕ್ಷದ ವಿಚಾರವನ್ನು ಎತ್ತಿಕೊಂಡು ಅವರ ಭಾಷಣದಲ್ಲಿ ಒಂದು ರೀತಿಯಲ್ಲಿ ಹೀಯಾಳಿಸುವಂತಹ ಕೆಲಸ ಮಾಡುತ್ತಿದ್ದಾರೆ. ನೆನ್ನೆದಿವಸ ನಾನು ಮಾತನಾಡುವಾಗ, ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ಕೊಂಡು ನೋಡಿದರು ಎಂದು ಹೇಳಿದ್ದಕ್ಕೆ ನಮ್ಮ ಆ ಕಡೆ ಸ್ನೇಹಿತರೆಲ್ಲಾ ನನ್ನ ಮೇಲೆ ರೇಗಿದರು. ಆದರೆ ಇಂದು ಅವರು ಇಂದು ನಮ್ಮ ಪಕ್ಷದ ವಿಚಾರ ಏಕೆ ಮಾತನಾಡಬೇಕು? ಅದೇ ಕೇಂದ್ರದಲ್ಲಿ ಬಾಪೂಜಿಯವರು ಬಹಳ ಕಾಲದಿಂದ ರಾಜಕೀಯ ಮಾಡಿಕೊಂಡು ಬಂದವರು, ಅಂತಹವರನ್ನು ಪ್ರಧಾನಮಂತ್ರಿಯನ್ನಾಗಿ ಮಾಡದೆ ಕಂದಾಚಾರದ ಬ್ರಾಹ್ಮಣರೊಬ್ಬರನ್ನು ಪ್ರಧಾನಮಂತ್ರಿಗಳನ್ನಾಗಿ ಮಾಡಿದ್ದು ಸರಿಯೇ? ಬಾಪೂಜಿಯವರನ್ನೇ ಏತಕ್ಕೆ ಮಾಡಲಿಲ್ಲ? ಹೀಗೆ ತಾವು ಒಂದು ಹೇಳಿದರೆ, ನಾವು ಒಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಯಾವ ಪಕ್ಷದವರೇ ಆಗಲೀ, ಒಬ್ಬರು ಮತ್ತೊಬ್ಬರ ಬಗ್ಗೆ ಆರೋಪಿಸುವುದು ಇಲ್ಲ ಮಾತನಾಡುವುದು ಬೇಡ.

ಶ್ರೀ ಎಂ. ಚಂದ್ರಶೇಖರ.—ಹರಿಜನರ, ದೀನದಲಿತರ, ಅಲ್ಪಸಂಖ್ಯಾತರ ಉದ್ಧಾರಕರು ನಾವು. ಅವರಿಂದಲೇ ನಾವು ಗೆದ್ದು ಬಂದಿದ್ದು ಎಂದು ತಾವು ಹೇಳಿಕೊಂಡಿದ್ದಕ್ಕೆ ನಾನು ಈ ಒಂದು ಉದಾಹರಣೆ ಯನ್ನು ಕೊಟ್ಟೆ. ಅದಕ್ಕೇ ಅವರಿಗೆ ಕೋಪ ಬಂತು. ೫ ವರ್ಷಕ್ಕೊಂದು ಸಲ ಇವರು ಚುನಾವಣೆ ನಡೆಸುತ್ತಾರೆ. ಆ ಸಮಯದಲ್ಲಿ ಈ ಜನರ ಮೂಗಿನ ಹತ್ತಿರ ಇವರು ಹೋಗಿ ತುಪ್ಪ ಸವರುತ್ತಾರೆ. ಅವರು ಇವರಿಗೆ ಮತ ಕೊಟ್ಟು ಆ ತುಪ್ಪವನ್ನು ನೆಕ್ಕುವುದಕ್ಕೆ ಮೊದಲೇ ಅವರ ಎದುರಿಗೆ ಇರುವಂತಹ ಪುಡಾರಿಗಳು ಬಂದು ಅದನ್ನು ನೆಕ್ಕಿಬಿಡುತ್ತಾರೆ. ನಂತರ ಆ ಜನರು ಆ ತುಪ್ಪಕ್ಕಾಗಿ ಮತ್ತೆ ೫ ವರ್ಷ ಕಾಯಬೇಕಾಗುತ್ತದೆ. ಚುನಾವಣೆ ಸಮಯದಲ್ಲಿ ದೀನದಲಿತರಿಗೆ ಸಹಾಯ ಮಾಡುತ್ತೇವೆಂದು ಒಂದು

ರೀತಿಯಾದಂಥ ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ. ಅದನ್ನು ನಂಬಿ ಅವರು ಮತ ಕೊಡುತ್ತಾರೆ. ಈ ಒಂದು ಮೌಢ್ಯ ಹೋಗಬೇಕು. ತಮಗೆ ಮತ ಕೊಟ್ಟವರೆಲ್ಲಾ ಅಲ್ಪಸಂಖ್ಯಾತರು, ಹರಿಜನರು ಮತ್ತು ಬಡವರು ಎಂದು ಇವರು ಹೇಳುತ್ತಾರೆ. ಆದರೆ ಬೆಂಗಳೂರು ನಗರದಲ್ಲಿರತಕ್ಕಂಥ ೨೨ ಕ್ಷೇತ್ರಗಳ ಪೈಕಿ ೯ ಕ್ಷೇತ್ರಗಳಲ್ಲಿ ನಮ್ಮ ಪಕ್ಷದವರೇ ಆರಿಸಿ ಬಂದಿದ್ದಾರೆ. ಈ ಬೆಂಗಳೂರು ನಗರದಲ್ಲಿ ೧೩೦ ರಿಂದ ೧೪೦ ರ ವರೆಗೆ ಕೊಳಚೆ ಪ್ರದೇಶಗಳಿವೆ. ಇಲ್ಲಿರತಕ್ಕಂಥ ಜನರು, ಕಾರ್ಮಿಕರು, ಮುಸಲ್ಮಾನರು ಮತ್ತು ಬಡವರು ನಮಗೂ ಸಹ ಮತ ಕೊಟ್ಟಿದ್ದಾರೆ.

ಅಧ್ಯಕ್ಷರು.—ಚುನಾವಣೆ ವಿಷಯ ಈಗ ಬೇಡ.

ಶ್ರೀ ಎಂ. ಚಂದ್ರಶೇಖರ್.—ಈ ಬಗ್ಗೆ ತಪ್ಪು ಕಲ್ಪನೆ ಬರುವಂತೆ ಮಾತನಾಡುವುದು ಬೇಡ ಎಂಬುದಕ್ಕಾಗಿ ನಾನು ಇದನ್ನು ಹೇಳಬೇಕಾಯಿತು. ನಾವು ಇನ್ನು ಮುಂದೆ ಜಾತೀಯತೆಯನ್ನು ಎತ್ತಿ ಕಟ್ಟುವುದು ಬೇಡ. ಈಗ ಏನಿದ್ದರೂ ಉಳ್ಳವರ ಮತ್ತು ಇಲ್ಲದವರ ನಡುವೆ ಮಾತ್ರ ವರ್ಗ ಕಲಹವಿರುವುದು. ಆದಕಾರಣ ಈ ೨ ಜಾತಿಗಳಿಗೆ ಮಾತ್ರ ಮಾತನಾಡುವುದಕ್ಕೆ ನಾವು ಮತ್ತು ನೀವು ಅವಕಾಶ ಮಾಡಿಕೊಡೋಣವೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ವಿ. ಪತ್ತಾರ್ (ಜಮಖಂಡಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಮಾಡಿದ ಭಾಷಣಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತಾ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ನಾಯಕರಾದಂಥ ಮಾನ್ಯ ರಂಗನಾಥ್ ಮತ್ತು ಮಾನ್ಯ ಬಸವಲಿಂಗಪ್ಪನವರ ಬಗ್ಗೆ ಮಾನ್ಯ ವಿರೋಧಪಕ್ಷದ ಸದಸ್ಯರು ಪ್ರಸ್ತಾಪ ಮಾಡಿ, ಬೇಟೆಗಾರರಿಗೆ ನಮ್ಮ ನಾಯಕರನ್ನು ಹೋಲಿಕೆ ಮಾಡಿ, ಇವರನ್ನು ಗೌಜಿಗನ ಹಕ್ಕಿಗಳಂತೆ ಉಪಯೋಗಿಸಿಕೊಳ್ಳಲಾಗುತ್ತಿದೆ ಎಂದು ಹೇಳಿದರು. ಆ ರೀತಿ ಹೋಲಿಕೆ ಮಾಡುವುದು ಸರಿಯಲ್ಲ. ಏಕೆಂದರೆ ವಿರೋಧಪಕ್ಷದ ಕಡೆಯೂ ಸಹ ಮಾನ್ಯ ಇಬ್ರಾಹಿಂ ಅವರು, ಮಾನ್ಯ ಅರಕೇರಿಯವರು, ಮಾನ್ಯ ವೈ. ರಾಮಕೃಷ್ಣ ಅವರು ಇದ್ದಾರೆ. ಇವರುಗಳು ಆ ಕಡೆ ಇದ್ದರೂ ಸಹ ಗೌಜಿಗನ ಹಕ್ಕಿಗಳು ಅವರ ಕಡೆಗೆ ಹೋಗಲಿಲ್ಲ. ದೇಶದ ಎಲ್ಲ ಜನರೂ ನಮ್ಮ ಪಕ್ಷವೇ ಅಧಿಕಾರಕ್ಕೆ ಬರುವಂತೆ ಮತ ಕೊಟ್ಟರು. ಮಾನ್ಯ ರಂಗನಾಥ ಅವರು ಮತ್ತು ಮಾನ್ಯ ಬಸವಲಿಂಗಪ್ಪನವರು ಜನತೆಗೆ ಮಾಡಿದಂಥ ಸೇವೆಗಾಗಿ ಅವರುಗಳನ್ನೇ ಜನರು ಮುಂದೆ ತಂದರು. ಮುಖ್ಯವಾಗಿ ಮಾನ್ಯ ರಂಗನಾಥ್ ಅವರು ನಿಷ್ಕಲ್ಮಶವಾದ ಚಾರಿತ್ರ್ಯವುಳ್ಳವರಾಗಿದ್ದಾರೆಂಬುದನ್ನು ಎಲ್ಲರೂ ತಿಳಿದುಕೊಳ್ಳಬೇಕು. ಜನರು ನಮ್ಮ ಕಡೆಯೇ ಏತಕ್ಕೆ ಬರುತ್ತಿದ್ದಾರೆಂದರೆ, ಸಾಮಾನ್ಯ ಜನರಿಗಾಗಿ ಹರಿಜನ ಮತ್ತು ಗಿರಿಜನರ ಉದ್ಧಾರಕ್ಕಾಗಿ ನಮ್ಮ ಸರ್ಕಾರದವರು ಹಾಕಿಕೊಂಡಿರತಕ್ಕಂಥ ಅನೇಕ ಕಾರ್ಯಕ್ರಮಗಳನ್ನು ನೋಡಿ ಅವರು ನಮ್ಮ ಕಡೆಗೆ ಬರುತ್ತಿದ್ದಾರೆ. ಎದುರು ಪಕ್ಷದ ಕಡೆಗೆ ಈ ಜನರು ಏತಕ್ಕೆ ಹೋಗುತ್ತಿಲ್ಲವೆಂದರೆ, ಕಳೆದ ಹತ್ತು ತಿಂಗಳುಗಳಲ್ಲಿ ಕೇಂದ್ರ ಸರ್ಕಾರದವರು ಉತ್ತರ ಹಿಂದೂಸ್ಥಾನದಲ್ಲಿ ನಡೆಸಿದಂಥ ಒಂದು ರೀತಿಯ ಪ್ರಚೋದನೆಯಿಂದ ಈ ಹರಿಜನರೆಲ್ಲಾ ಬೆದರಿದ್ದಾರೆ. ಆದರೂ ಕೂಡ ವಿನಾಕಾರಣವಾಗಿ ನಮ್ಮ ನಾಯಕರಾದಂಥ ಮಾನ್ಯ ಅರಸ ಅವರನ್ನು ಬೇಟೆಗಾರರೆಂದು ಹೇಳುತ್ತಿರುವುದು ಸರಿಯಲ್ಲ.

ಇನ್ನು ನಮ್ಮ ಕರ್ನಾಟಕ ರಾಜ್ಯದ ಭೂಸುಧಾರಣೆಯ ಬಗ್ಗೆ ಬಹಳ ಟೀಕೆಗಳು ಕೇಳಿ ಬರುತ್ತಿವೆ. ೧೯೩೯ರಲ್ಲಿ ಮೊಟ್ಟಮೊದಲನೆಯದಾಗಿ ಈ ಭೂಸುಧಾರಣಾ ಕಾನೂನು ಜಾರಿಗೆ ಬಂತು. ೧೯೪೭ರಲ್ಲಿ ನಮಗೆ ಸ್ವಾತಂತ್ರ್ಯ ಬಂತು. ೧೯೪೮ರಲ್ಲಿ ಮುಂಬೈ ಟೆನೆನ್ಸಿ ಕಾಯಿದೆಯನ್ನು ಮಾಡಲಾಯಿತು. ಆದರೆ ಈ ರಾಜ್ಯದಲ್ಲಿ ಏನೇನೋ ನೆಪಗಳನ್ನು ಹಾಕಿಕೊಂಡು ಈ ಕಾಯಿದೆಯನ್ನು ಮಾಡದೆ, ೧೯೬೧ ರಲ್ಲಿ ಮಾಡಲಾಯಿತು. ಈ ಕಾಯಿದೆಯನ್ನು ಮಾಡಿದ ಕೂಡಲೇ, ಆಗಿನ ಸರ್ಕಾರ ಅದನ್ನು ಜಾರಿಗೆ ಕೊಡದೆ ತಡ ಮಾಡುತ್ತಾ ಬಂತು. ನಂತರ ಉತ್ತರ ಕರ್ನಾಟಕದ ಕೆಲವು ಪ್ರದೇಶಗಳು ಈ ರಾಜ್ಯಕ್ಕೆ ಸೇರಿದ ಮೇಲೆ ಅದನ್ನೇ ಒಂದು ಕಾರಣವಾಗಿ ಇಟ್ಟುಕೊಂಡು, ಈ ಹಿಂದಿನ ಸರ್ಕಾರದವರು ೧೯೭೦ನೇ ಇಸವಿಯವರೆಗೆ ಈ ಭೂಸುಧಾರಣಾ ಕಾನೂನನ್ನು ಜಾರಿಗೆ ತರಲಿಲ್ಲವೆಂದು ಹೇಳಬಯಸುತ್ತೇನೆ.

೧೯೭೪ನೇ ಇಸವಿಯಲ್ಲಿ ಭೂಸುಧಾರಣಾ ಕಾಯಿದೆ ಬಂದ ನಂತರ ೫ ವರ್ಷಗಳಲ್ಲಿ ನಾವು ಹಲವಾರು ಸಾಧನೆಗಳನ್ನು ಗಳಿಸಿದ್ದೇವೆ. ಮೊದಲನೆಯದಾಗಿ ಮಾನ್ಯ ಸದಸ್ಯರು ಹೇಳಿರುವಂತೆ ೩ ಲಕ್ಷ ೬೫ ಸಾವಿರ ಗೇಣಿದಾರರನ್ನು ಮಾಲೀಕರನ್ನಾಗಿ ಮಾಡಿದ್ದೇವೆ. ಒಂದು ಲಕ್ಷ ಕುಟುಂಬಗಳಿಗೆ ಭೂಮಿ

ಯನ್ನು ಹಂಚತಕ್ಕ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಇದು ಕೇವಲ ಎರಡು ವರ್ಷಗಳಲ್ಲಿ ಭೂ ನ್ಯಾಯ ಮಂಡಲಿಯು ಮಾಡಿದಂತಹ ಒಂದು ಮಹಾ ಸಾಧನೆ ಎಂದು ಹೇಳಬಹುದು. ಮಾನ್ಯ ಸದಸ್ಯರು ಭೂ ನ್ಯಾಯ ಮಂಡಲಿಯಲ್ಲಿ ಬ್ರಷ್ಟಾಚಾರ ಆಗಿದೆ ಎಂದು ಹೇಳಿದರು. ಸರ್ಕಾರದ ಪರ ವಾಗಿ ನಾನು ಹೇಳುತ್ತೇನೆ, ಕಾಯಿದೆಯ ಪ್ರಕಾರ ಭ್ರಷ್ಟಾಚಾರ ಮಾಡಿರುವವರನ್ನು ತೆಗೆದು ಹಾಕಲು ಅವಕಾಶ ಇದೆ ಎಂದು. ಆ ರೀತಿ ಭ್ರಷ್ಟಾಚಾರವನ್ನು ಮಾಡಿದಂತಹ ಎಷ್ಟೋ ಭೂ ನ್ಯಾಯ ಮಂಡಲಿ ಗಳನ್ನು ಸರ್ಕಾರದವರು ಪುನರ್‍ರಚನೆ ಮಾಡಿದ್ದಾರೆ. ಹೀಗಿರುವಾಗ ಭ್ರಷ್ಟಾಚಾರ ಮಾಡಿದಂತಹ ನ್ಯಾಯ ಮಂಡಲಿಗಳ ವಿಷಯವನ್ನು ಸರ್ಕಾರದ ಗಮನಕ್ಕೆ ತಂದರೆ ಅದನ್ನು ಸರಿಪಡಿಸುವುದಕ್ಕೆ ಒಂದು ರೆಮೆಡಿ ಇದ್ದೇ ಇದೆ.

ನಾನು ಇಲ್ಲಿ ಒಂದು ವಿಷಯವನ್ನು ಹೇಳಬೇಕು ಎಂದರೆ ಸುಮಾರು ೧೦೦ ಕೇಸುಗಳಲ್ಲಿ ೯೦ರಷ್ಟು ಕೇಸುಗಳು ಅಡ್ಮಿಷನ್‌ನಲ್ಲಿ ಇರುತ್ತವೆ. ೧೦೦ಕ್ಕೆ ೧೦ ರಷ್ಟು ಮಾತ್ರ ಡಿಸ್‌ಪ್ಯೂಟ್ ಕೇಸುಗಳು ಇರು ತ್ತವೆ. ಇದರಲ್ಲಿ ಸುಮಾರು ೫ ರಷ್ಟು ಕೇಸುಗಳು ಯಾವುದೇ ಭ್ರಷ್ಟಾಚಾರ ಇಲ್ಲದೆ ನಿರ್ಣಯಕ್ಕೆ ಬರು ತ್ತವೆ. ಈಗ ನ್ಯಾಯಾಲಯದ ವಿಚಾರಣೆಯನ್ನು ತೆಗೆದುಕೊಂಡರೆ ಕಾನ್‌ಫಿಡೆನ್ಸಿಯಲ್ ರಿಪೋರ್ಟ್ ಪ್ರಕಾರ ನ್ಯಾಯಾಲಯಗಳಲ್ಲಿ ಶೇಕಡಾ ೨೫ ರಷ್ಟು ಕರಪ್ಟ್ ನ್ಯಾಯಾಧೀಶರು ಇದ್ದಾರೆ ಎಂದು ತಿಳಿದು ಬರುತ್ತದೆ. ಎರಡನೆಯದಾಗಿ ರೆವಿನ್ಯೂ ಆಫೀಸರು ಕರಪ್ಟ್ ಇರುತ್ತಾರೆ.

ಶ್ರೀಮತಿ ಎಸ್. ಪ್ರಮಿಳಾ.—ಸ್ವಾಮಿ ಪಾಯಿಂಟ್ ಆಫ್ ಆರ್ಡರ್ ಮಾನ್ಯ ಸದಸ್ಯರು ಮಾತ ನಾಡುತ್ತಾ ನ್ಯಾಯಾಧೀಶರು ಕರಪ್ಟ್ ಇದ್ದಾರೆ ಎಂದು ಹೇಳಿದರು. ಹಾಗಾದರೆ ಯಾರು ನ್ಯಾಯಾ ಧೀಶರು ಕರಪ್ಟ್ ಇದ್ದಾರೆ ಎಂಬುದನ್ನು ತೋರಿಸಬೇಕು.

ಶ್ರೀ ಎಸ್. ಎಂ. ಶಿರ್ನಾಳಿ ಚಂದ್ರಶೇಖರ್.—ಸ್ವಾಮಿ. ಮಾನ್ಯ ಸದಸ್ಯರು ಈಗ ಅವರ ಸೀಟ್ ನಲ್ಲಿ ಇಲ್ಲದೆ ಬೇರೆಯವರ ಸೀಟ್‌ನಲ್ಲಿ ಕುಳಿತುಕೊಂಡು ಮಾತನಾಡುತ್ತಿದ್ದಾರೆ. ಎರಡನೆಯದಾಗಿ ಅವರು ಅಧ್ಯಕ್ಷರ ಅಪ್ಪಣೆಯನ್ನು ಪಡೆದುಕೊಂಡು ಮಾತನಾಡುತ್ತಿಲ್ಲ. ಈ ಎರಡಕ್ಕೂ ಅಧ್ಯಕ್ಷರು ರೂಲಿಂಗ್ ಕೊಡಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಇಂತಿಂಥವರಿಗೆ ಇಂತಿಂಥಾ ಸೀಟು ಎಂದು ನಿಗದಿ ಮಾಡುವುದಕ್ಕೆ ಆ ಕಡೆ ಮತ್ತು ಈ ಕಡೆ ಎರಡೂ ಕಡೆಯ ವಿಪ್‌ಗಳು ಇಂತಿಂಥಾ ಸೀಟುಗಳನ್ನು ಇಂತಿಂಥಾವರಿಗೆ ಕೊಡ ಬೇಕೆಂದು ಅವರ ಒಂದು ಲಿಸ್ಟ್ ನಮಗೆ ಅವರು ಕೊಟ್ಟಿಲ್ಲ. ಅದಕ್ಕಾಗಿ ಮಾನ್ಯ ಸದಸ್ಯರಿಗೆ ಇನ್ನೂ ಸೀಟು ನಿಗದಿ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಮತ್ತು ಮಾನ್ಯ ಸದಸ್ಯರು ಈಗ ಮಾತನಾಡುವುದಕ್ಕೆ ನಾನು ಅನುಮತಿ ಕೊಟ್ಟಿಲ್ಲ. ಆದ್ದರಿಂದ ಮಾನ್ಯ ಸದಸ್ಯರ ಪಾಯಿಂಟ್ ಆಫ್ ಆರ್ಡರಿಗೆ ಹೆಚ್ಚಿಗೆ ಮಹತ್ವವಿಲ್ಲ.

ಶ್ರೀಮತಿ ಎಸ್. ಪ್ರಮೀಳಾ.—ಮಾನ್ಯ ಸದಸ್ಯರು ಮಾತನಾಡುತ್ತಾ ನ್ಯಾಯಾಲಯದಲ್ಲಿ ನ್ಯಾಯಾ ಧೀಶರು ಕರಪ್ಟ್ ಇರುತ್ತಾರೆ ಎಂದು ಹೇಳಿದರು. ಹಾಗಾದರೆ ಯಾವ ನ್ಯಾಯಾಲಯದಲ್ಲಿ ಯಾವ ನ್ಯಾಯಾಧೀಶರು ಕರಪ್ಟ್ ಇರುತ್ತಾರೆ ಎಂಬುದನ್ನು ತೋರಿಸಿ ಕೊಡಬೇಕು. ಅದನ್ನು ಹೇಳದೆ ಸುಮ್ಮನೆ ವೇಗಾಗಿ ಅಲಿಗೇಷನ್ ಮಾಡುವುದು ತಪ್ಪು.

SRI S. R. BOMMAI.—The Legislature is a supreme body. It is an independent institution under the Constitution. ಆದ್ದರಿಂದ ಮಾನ್ಯ ಸದಸ್ಯರು ಮಾತನಾಡುವಾಗ ಸ್ವಲ್ಪ ಎಚ್ಚರಿಕೆಯಿಂದ ಈ ಮನೆಯಲ್ಲಿ ಮಾತನಾಡುವುದು ಒಳ್ಳೆಯದು. ಸ್ವಲ್ಪ ಗಂಭೀರವಾಗಿ ಮಾತನಾಡಬೇಕು. ಜನರಲ್ ಆಗಿ ಮಾತನಾಡಬಾರದು. ಜುಡಿಷಿಯರಿ ವಿಷಯವನ್ನು ಮಾತನಾಡುವಾಗ ಸ್ವಲ್ಪ ಗಂಭೀರವಾಗಿ ಮಾತನಾಡುವುದು ಒಳ್ಳೆಯದು.

ಅಧ್ಯಕ್ಷರು.—ಶ್ರೀಮಾನ್ ಬೊಮ್ಮಾಯಿ ಅವರು ಹೇಳಿದ ಹಾಗೆ ನ್ಯಾಯಾಲಯದ ವಿಷಯವನು ಮಾತನಾಡುವಾಗ ಸ್ವಲ್ಪ ಎಚ್ಚರಿಕೆಯಿಂದ ಮಾತನಾಡುವುದು ಒಳ್ಳೆಯದು. ಮಾನ್ಯ ಸದಸ್ಯರು ನಿರ್ಧಿಷ್ಟವಾಗಿ ಕೆಲವು ನ್ಯಾಯಾಧೀಶರು ಎಂದು ಹೇಳಿದರು. ಅವರು ಅದನ್ನು ಬಿಟ್ಟು ಬಿಟ್ಟು ಮಾತ ನಾಡುವುದು ಒಳ್ಳೆಯದು.

ಶ್ರೀ ಪಿ. ಟಿ. ಚಿತ್ತಾರ್.—ನ್ಯಾಯಾಲಯದಲ್ಲಿಯೂ ಸಹ ಕೆಲವು ಅಪ್ರಾಮಾಣಿಕರು ಇದ್ದಾರೆ ಎಂದು ನಾನು ಹೇಳಬಯಸುತ್ತೇನೆ. ಶ್ರೀಮಾನ್ ಬೊಮ್ಮಾಯಿ ಅವರು ಹೇಳಿದ ಸಲಹೆಯನ್ನು ನಾನು ಸ್ವೀಕರಿಸುತ್ತೇನೆ. ಯಾವುದೇ ಒಂದು ಕ್ಷೇತ್ರದಲ್ಲಿ ಎಲ್ಲರನ್ನೂ ಪ್ರಾಮಾಣಿಕರನ್ನಾಗಿ ಕಾಣುವುದು ಸಾಧ್ಯವಿಲ್ಲ. ಸರ್ಕಾರದವರು ಸಾಧ್ಯವಾದಷ್ಟೂ ಒಳ್ಳೆಯ ಜನರನ್ನು ತೆಗೆದುಕೊಂಡು ಟ್ರಿಬ್ಯೂನಲ್ ರಚಿಸಿದ್ದಾರೆ. ಕೆಲವು ಟ್ರಿಬ್ಯೂನಲ್‌ಗಳಲ್ಲಿ ಕೆಲವು ಕೇಸುಗಳಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಕೆಲವು ಕೇಸುಗಳಲ್ಲಿ ಭ್ರಷ್ಟಾಚಾರ ಆಗುವುದು ಸ್ವಾಭಾವಿಕ. ಅಂಥಾ ಕೇಸುಗಳನ್ನು ಸರ್ಕಾರದ ಗಮನಕ್ಕೆ ತಂದರೆ ಯಾವ ಟ್ರಿಬ್ಯೂನಲ್‌ನಲ್ಲಿ ಆ ರೀತಿ ಭ್ರಷ್ಟಾಚಾರ ನಡೆಯಿತೋ ಅದನ್ನು ಪುನರ್‌ರಚನೆ ಮಾಡುವಂತಹ ಅವಕಾಶ ಕಾಯಿದೆಯಲ್ಲಿ ಇದೆ. ಆದರೆ ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಬೊಮ್ಮಾಯಿ ಅವರು ಮಾತನಾಡುತ್ತಾ ಈ ಭೂಸುಧಾರಣಾ ಶಾಸನ ದುರ್ದೈವದ ಶಾಸನ ಎಂದು ಹೇಳಿದರು. ಅದು ಸರಿಯಲ್ಲ. ಇದು ಸುಂದರವಾದ ಮತ್ತು ಒಳ್ಳೆಯ ಶಾಸನವಾದ್ದರಿಂದ ರೈತರೆಲ್ಲರೂ ಈ ಸಾರಿ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಹಿಡಿ ಹಿಡಿಯಾಗಿ ಓಟು ಕೊಟ್ಟಿದ್ದಾರೆ. ಇಲ್ಲದೆ ಇದ್ದರೆ ಯಾರು ಓಟು ಕೊಡುತ್ತಿದ್ದರು? ಭೂಸುಧಾರಣೆಯ ಕಾಯಿದೆಯ ಪ್ರಕಾರ ಭೂಮಿಯನ್ನು ಪಡೆದ ರೈತ ಭೂನ್ಯಾಯಮಂಡಲಿಯನ್ನೂ ಮತ್ತು ಸರ್ಕಾರವನ್ನೂ ಹರಿಸಿ ಹೋಗುತ್ತಾನೆ. ಹೀಗಿರುವಾಗ ಈ ಶಾಸನವನ್ನು ದುರ್ದೈವದ ಶಾಸನ ಎಂದು ಹೇಳುವುದು ಸರಿಯಲ್ಲ. ಈ ಶಾಸನದಲ್ಲಿ ಏನಾದರೂ ದೋಷಗಳಿದ್ದರೆ ಅವುಗಳನ್ನು ತಿದ್ದಿಕೊಳ್ಳೋಣ. ಇದು ಒಂದು ಕ್ರಾಂತಿಕಾರಕವಾದ ಶಾಸನ ಎಂದು ಹೇಳಬಹುದು. ಇಡೀ ಭಾರತದಲ್ಲಿಯೇ ಇದು ಒಂದು ಪ್ರಗತಿಪರವಾದ ಶಾಸನ ಎಂದು ಕರೆಯಲ್ಪಟ್ಟಿದೆ. ಇತರ ಸರ್ಕಾರಗಳೂ ಕೂಡ ಇದನ್ನು ಅನುಸರಿಸಿಕೊಂಡು ಹೋಗಬೇಕು ಎನ್ನುವ ಭಾವನೆಯನ್ನು ತಳೆದಿದ್ದಾರೆ. ಕೆಲವರಿಗೆ ಏಕೋ ಏನೋ ಇದು ಒಳ್ಳೆಯ ಶಾಸನವಾದರೂ ಕೂಡ ಅಷ್ಟು ಹಿಡಿಸುತ್ತಾ ಇಲ್ಲ. ಇದು ಮನುಷ್ಯನ ಸ್ವಭಾವ. ಅಥವಾ ವರ್ಗದ ಸ್ವಭಾವ. ಕೆಲವರಿಗೆ ಹಾಲು ಉತ್ತಮವಾದ ಆಹಾರವಾದರೂ ಕೂಡ ಅದು ಸೇರುವುದಿಲ್ಲ. ಕೆಲವರಿಗೆ ಸುಗಂಧವಾಸನೆ ಇದ್ದರೂ ಕೂಡ ಅವರ ಮೂಗಿಗೆ ಅದು ಸೇರುವುದಿಲ್ಲ. ಆ ರೀತಿ ವಿರೋಧ ಪಕ್ಷದವರು ಇದು ಪ್ರಗತಿಪರವಾದ ಶಾಸನವಾದರೂ ಕೂಡ ಇದನ್ನು ಖಂಡನೆ ಮಾಡುವುದಕ್ಕೆ ಈ ರೀತಿ ಹೇಳುತ್ತಿದ್ದಾರೆ ಎಂದು ನಾನು ಹೇಳಬಯಸುತ್ತೇನೆ. ಈ ವಿಷಯವಾಗಿ ನಾನು ಇಷ್ಟು ಹೇಳಿದ್ದೇನೆ.

5-30 ಪಿ.ಎಂ.

ಎರಡನೆಯದಾಗಿ, ಒಂದು ವಿಷಯವನ್ನು ಹೇಳಬೇಕಾಗಿದೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ "ರಾಜ್ಯ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮವು ರಾಜ್ಯಕ್ಕೆ ಉತ್ತಮ ದಾಸ್ತಾನು ನೀಡುವುದು" ಎಂದು ಹೇಳಿದ್ದಾರೆ. ಈಗ ಸುಮಾರು ೨೦೦೦ ಟನ್ನುಗಳಷ್ಟು ಭತ್ತ ಇದೆ, ೨೦೦ ಟನ್‌ಗಳಿಗೂ ಮಿಕ್ಕಿ ಇದೆ, ೨೨೪ ಟನ್‌ಗಳಷ್ಟು ಜೋಳ ಇದೆ. ಮುಂದಿನ ೧೨ ತಿಂಗಳಲ್ಲಿ ಪಡಿತರ ಪದ್ಧತಿ ಪ್ರಕಾರ ಹಂಚಲಿಕ್ಕೆ ಸಾಕಷ್ಟು ಆಹಾರ ಸರ್ಕಾರದಲ್ಲಿದೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಲಾಗಿದೆ. ಈ ವಿಷಯದಲ್ಲಿ ಒಂದು ಮಾತನ್ನು ನಾನು ನಮ್ಮ ಸರ್ಕಾರಕ್ಕೆ ಕೇಳಿಕೊಳ್ಳುತ್ತಾ ಇದ್ದೇನೆ. ಇದು ಬಹಳ ಪ್ರಾಮುಖ್ಯವಾದ ಮಾತು, ಮೊನ್ನೆ ತಾನೆ ಕೇಂದ್ರ ಸರ್ಕಾರವು ಮಂಡಿಸಿದಂಥ ಒಂದು ಮುಂಗಡ ಪತ್ರದ ಪರಿಣಾಮವಾಗಿ ದೇಶದಲ್ಲಿ ಬೆಲೆಗಳು ಏರುತ್ತಾ ಇವೆ ಎನ್ನತಕ್ಕಂಥಾದ್ದು ಕೆಲವು ತಜ್ಞರ ಅಭಿಪ್ರಾಯವಾಗಿದೆ. ಈ ಕೊರತೆಯ ವಿನಿಯೋಗ ೧೦೫೦ ಕೋಟಿ ರೂಪಾಯಿಗಳು, ಹೊಸ ಟ್ಯಾಕ್ಸ್ ೫೫೦ ಕೋಟಿ ರೂಪಾಯಿ. ಇವುಗಳನ್ನು ಹಾಕುವುದರಿಂದ ನೂರಕ್ಕೆ ೧೦ರಂತೆ ಬೆಲೆಗಳು ಏರುತ್ತಾ ಇವೆ ಎಂದು ಕೆಲವು ಜನ ತಜ್ಞರು ಅಭಿಪ್ರಾಯ ಪಡುತ್ತಾ ಇದ್ದಾರೆ. ಈಗಾಗಲೇ ಬೆಲೆಗಳ ಏರಿಕೆಯಿಂದ ಜನ ತತ್ತರಿಸಿ ಹೋಗಿದ್ದಾರೆ. ಈಗ ಇನ್ನಷ್ಟು ಬೆಲೆಗಳು ಏರಿದ ಪಕ್ಷದಲ್ಲಿ ಸಾಮಾನ್ಯ ಜನರು ಬಾಳುವೆ ಮಾಡುವುದು ಅಸಾಧ್ಯವಾದೀತು ಎನ್ನುವ ಮಾತನ್ನು ತಮ್ಮ ಲಕ್ಷಕ್ಕೆ ತರುತ್ತಾ ಇದ್ದೇನೆ. ಈ ವಿಷಯಗಳನ್ನು ನೋಡಿದರೆ ನಮ್ಮ ಕಾಯಿದೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ನಾವು ಕೆಲಸ ಮಾಡಬೇಕಾಗಿದೆ. ರೈತನು ಉತ್ಪಾದಿಸತಕ್ಕಂಥ ಕಾಳುಗಳು ಏನಿವೆ ಅವು ಪ್ರಾಮುಖ್ಯವಾಗಿ ಅತ್ಯಗತ್ಯವಾಗಿ ಪ್ರತಿಯೊಬ್ಬರಿಗೂ ಬೇಕಾದಂಥ ವಸ್ತು. ಆದುದರಿಂದ ಕಾಳುಗಳ ಧಾರಣೆಯನ್ನು ತಗ್ಗಿಸಬೇಕಾದರೆ ಅವುಗಳ ಸಗಟು ವ್ಯಾಪಾರವನ್ನು ದಲ್ಲಾಳಿಗಳ ಕೈಯಲ್ಲಾಗಲೀ ಅಥವಾ ಟೋಕ ವ್ಯಾಪಾರಿಗಳ ಕೈಯ್ಯಲ್ಲಾಗಲೀ ಕೊಡತಕ್ಕಂಥಾದಲ್ಲ. ಹಂತಹಂತವಾಗಿ ಈ ಕಾಳುಗಳ ವ್ಯಾಪಾರವನ್ನು ಸರ್ಕಾರ ತೆಗೆದುಕೊಳ್ಳಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ರೈತ ತನ್ನ ಉತ್ಪಾದನೆಯನ್ನು ದಾಟಿದು ಸುಗ್ಗಿಯ ಕಾಲದಲ್ಲಿ ತಂದು ಕೇವಲ ಕಡಿಮೆ ಬೆಲೆಯಲ್ಲಿ, ಅನ್ಯಾಯವಾದ ಬೆಲೆಯಲ್ಲಿ ಮಾರಿ ವ್ಯಾಪಾರಸ್ಥರಿಂದ ಶೋಷಿಸಲ್ಪಡುತ್ತಿದ್ದಾನೆ. ಬಹುಶಃ ಸುಗ್ಗಿಯ ಕಾಲದಲ್ಲಿ ವ್ಯಾಪಾರಸ್ಥರು ಕಡಿಮೆ ರೊಕ್ಕ ಕೊಟ್ಟು ಸರಕನ್ನು ಕೊಳ್ಳುವುದು ತದನಂತರ ಕೃತ್ರಿಮವಾಗಿ ಮತ್ತೆ ಅದೇ ಸರಕನ್ನು ಪೇಟೆಯಲ್ಲಿ ತಂದು ಮಾರಿ ಒಂದಕ್ಕೆರಡರಷ್ಟು ಲಾಭ ಗಳಿಸುವುದು ಸಾಮಾನ್ಯವಾದ ಸ್ಥಿತಿ. ಇಂತಹ ಸ್ಥಿತಿ ಹೋಗಬೇಕು. ಇದರಿಂದ ರೈತನಿಗೂ ಒಳ್ಳೆಯದಲ್ಲ, ಗ್ರಾಹಕನಿಗೂ ಒಳ್ಳೆಯದಲ್ಲ. ಸಮಾಜವಾದೀ ಸಮಾಜ ರಚನೆಯನ್ನು ನಾವು ಕಣ್ಣು ಮುಂದೆ ಇಟ್ಟುಕೊಂಡಾಗ, ನಮ್ಮ ಸರ್ಕಾರ ಸಮಾಜವಾದೀ ಸಮಾಜ ಸ್ಥಾಪನೆಯನ್ನು ಗುರಿಯಾಗಿ ಇಟ್ಟುಕೊಂಡಾಗ ಹಂತಹಂತವಾಗಿ ಈ ಕಾಳುಗಳ ವ್ಯಾಪಾರವನ್ನು ರಾಷ್ಟ್ರೀಕರಣ ಮಾಡಬೇಕು ಎನ್ನುವುದನ್ನು ನಾನು ಅತ್ಯಂತ ಕಳಕಳಿಯಿಂದ ಹೇಳುತ್ತಾ ಇದ್ದೇನೆ. ಒಂದು ವೇಳೆ ಈ ಸಮಾಜವಾದೀ ಕಾರ್ಯಕ್ರಮ ಸಾಧ್ಯವಾಗದೇ ಇದ್ದ ಪಕ್ಷದಲ್ಲಿ ಈಗ ನಮ್ಮ ಸರ್ಕಾರದವರು ಏನು ದಾಸ್ತಾನು ಮಾಡುತ್ತಾ ಇದ್ದಾರೆ ಆ ದಾಸ್ತಾನು ಮಾಡುವುದರಲ್ಲಿ ಸರ್ಕಾರದವರು ತಾಲ್ಲೂಕು ಮಟ್ಟದಲ್ಲಿ ಹೆಚ್ಚು ಅಂಗಡಿಗಳನ್ನು ತೆರೆದು ರೈತನು ತರತಕ್ಕ ಕಾಳುಗಳನ್ನು ನ್ಯಾಯವಾದ ಬೆಲೆಗೆ, ಬೆಂಬಲ ಸಿಕ್ಕುವಂತಹ ಬೆಲೆಗೆ ತೆಗೆದುಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ವಿತರಣೆ ಪದ್ಧತಿಯ ಬಗ್ಗೆ ಒಂದು ವಿಷಯವನ್ನು ಹೇಳಬೇಕಾಗಿದೆ. ಈ ವಿತರಣಾ ಪದ್ಧತಿಯ ಸಲುವಾಗಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಸುಮಾರು ೧೫,೦೦೦ ನ್ಯಾಯ ಬೆಲೆ ಅಂಗಡಿಗಳಿವೆ. ಈ ಅಂಗಡಿಗಳಿಂದ ವಿತರಣಾ ವ್ಯವಸ್ಥೆ ನಡೆದಿದೆ. ಈ ವಿತರಣೆ ಸರ್ವೇ ಸಾಧಾರಣವಾಗಿ ನಡೆದಿದೆ ಎನ್ನುವಂಥಾದ್ದು ನನ್ನ ಅಭಿಮತ. ಈ ನ್ಯಾಯ ಬೆಲೆ ಅಂಗಡಿಗಳು ಹೆಚ್ಚಾಗಿ ಸಹಕಾರ ಸಂಘಗಳ ಆಶ್ರಯದಲ್ಲಿವೆ. ತಾಲ್ಲೂಕು ಆಫೀಸಿನಿಂದ ಅಥವಾ ಇನ್ನಿತರ ಆಫೀಸುಗಳಿಂದ ಆಹಾರ ಪದಾರ್ಥಗಳನ್ನು ಸರಿಯಾಗಿ ಪೂರೈಸುತ್ತಾ ಇಲ್ಲ. ಅದನ್ನು ತೆಗೆದುಕೊಂಡು ಇನ್ನಿತರ ಕಡೆಗಳಲ್ಲಿ ಮಾರುತ್ತಾ ಇದ್ದಾರೆ. ಉದಾಹರಣೆಗೆ ಹೇಳುವುದಾದರೆ ಸಕ್ಕರೆಯನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುತ್ತಾ ಇದ್ದಾರೆ. ಹೀಗೆ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುತ್ತಾ ಇರುವುದರಿಂದ ಗ್ರಾಹಕರಿಗೆ ಸಾಮಾನುಗಳು ಮುಟ್ಟುತ್ತಾ ಇಲ್ಲ. ಈಗ ಸಹಕಾರ ಸಂಘಗಳ ಕಾಯಿದೆಯನ್ನು ತಿದ್ದುಪಡಿ ಮಾಡಿಯಾಗಲೀ ಅಥವಾ ಕೆಲವೊಂದು ನಿಯಮಗಳನ್ನು ರಚಿಸಿಕೊಂಡ ಯಾಗಲೀ ಈ ರೀತಿ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುವಂತಹವರಿಗೆ ಶಿಕ್ಷೆ ಮಾಡುವಂಥಾದ್ದನ್ನು ಮಾಡಬೇಕು ಎಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತಾ ಇದ್ದೇನೆ.

ಇನ್ನೊಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ಸರ್ಕಾರ ಬಹಳ ದೂರದೃಷ್ಟಿಯಿಂದ ಯೋಜನೆಯನ್ನು ಹಾಕಿಕೊಂಡಿದೆ. ಅದು ಯಾವುದೆಂದರೆ ನಿರುದ್ಯೋಗಿಗೆ ಸುಮಾರು ೧೫೦ ರೂಪಾಯಿಗಳ ಸ್ಟೈಫಂಡ್ ಕೊಡತಕ್ಕಂಥಾ ವಿಷಯ. ಇದ ವರೆಗೂ ಯಾರೂ ಮಾಡದೇ ಇದ್ದಂಥ ಈ ಯೋಜನೆ ನಮ್ಮ ರಾಜ್ಯದಲ್ಲಿ ಜಾರಿಗೆ ಬರುತ್ತಾ ಇದೆ ಈ ದೇಶದಲ್ಲಿ ನಿರುದ್ಯೋಗ ಇರಬಾರದು, ಪ್ರತಿಯೊಬ್ಬರಿಗೂ ಕೆಲಸಮಾಡುವ ಹಕ್ಕು ಇರಬೇಕು ಎಂದು ನಾವು ಪ್ರತಿಪಾದನೆ ಮಾಡುತ್ತಾ ಇದ್ದೇವೆ. ಇದು ಸಮಾಜವಾದ ಪದ್ಧತಿ. ಇದು ರಾಜ್ಯದ ಒಂದು ವಿಶೇಷ ಗುಣ. ಈ ಯೋಜನೆ ನಾವು ಅಂದುಕೊಂಡ ರೀತಿಯಲ್ಲಿ ಯಶಸ್ವಿಯಾದರೆ ಸಮಾಜವಾದೀ ಸಮಾಜಸ್ಥಾಪನೆಯ ದಾರಿಯಲ್ಲಿ ಒಂದು ಗುರಿಯನ್ನು ನಾವು ಮುಟ್ಟಿದಂತಾಗುತ್ತದೆ ಎಂದು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ. ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

MR. SPEAKER.—I would like to request such of the hon. Members who have given notice of amendments to the Motion of thanks to Governor's Address to move their amendments before they begin their speech if they have not already finished their speech.

Now Sri Bhimanna Khandre may speak.

† ಶ್ರೀ ಭೀಮಣ್ಣ ಎಸ್. ಖಂಡ್ರೆ (ಭಾಲ್ಕಿ).— ಮಾನ್ಯ ಅಧ್ಯಕ್ಷರೇ, ಹಿಂದಿನ ಕಾಲದಲ್ಲಿ ಕಾಂಗ್ರೆಸ್ ನಮ್ಮ ಸಮಾಜವಾದವನ್ನು ಒಪ್ಪುತ್ತಾ ಇದ್ದಿಲ್ಲ. ೧೫-೨೦ ವರ್ಷಗಳ ಹಿಂದೆ ನಾವು ಪಿ.ಎಸ್.ಪಿ. ಯಲ್ಲಿ ಸಮಾಜವಾದವನ್ನು ತರಬೇಕು ಎಂದು ಹೋರಾಟ ಮಾಡುತ್ತಾ ಇದ್ದೆವು. ಅದರಲ್ಲಿ ನನ್ನ ಸ್ನೇಹಿತರಾದ ಶ್ರೀಮಾನ್ ರಂಗನಾಥ್ ಅವರು ಕೂಡ ಇದ್ದರು. ಇವತ್ತಿನ ದಿವಸ ಆ ವಾದ ಉಳಿದಿಲ್ಲ. ಅದಕ್ಕೆ ಕಾರಣ ನಮ್ಮ ದೇಶದಲ್ಲಿ ಇವತ್ತಿನ ದಿವಸ ಎಷ್ಟೋ ಪಕ್ಷಗಳಿವೆ. ಅವರೆಲ್ಲರೂ ಕೂಡ ಒಂದು ಮಾತನ್ನು ಒಪ್ಪಿದ್ದಾರೆ. ಏನೆಂದರೆ, ಈ ದೇಶದಲ್ಲಿ ಸಮಾಜವಾದ ಬೇಕು ಅದು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಇರಬೇಕು, ಜಾತ್ಯಾತೀತ ರಾಷ್ಟ್ರವಾಗಬೇಕು ಎನ್ನುವ ಮಾತನ್ನು ಒಪ್ಪಿದ್ದಾರೆ. ರಾಜ್ಯಾಂಗ ಘಟನೆಯಲ್ಲಾದರೂ ಕೂಡ ಈ ಪ್ರಕಾರವಾಗಿ ತಿದ್ದುಪಡಿ ಮಾಡಬೇಕಾಗಿದೆ. ಈ ದೇಶದಲ್ಲಿ ಯಾವ ಮನುಷ್ಯ ಇದ್ದಾನೆ ಅವನು ಇವತ್ತು ಈ ವಾದವನ್ನು ಒಪ್ಪುತ್ತಾ ಇಲ್ಲ ಎಂದು ಅಡಲಿಕ್ಕೆ ಬರುವುದಿಲ್ಲ. ಈ ದೇಶದಲ್ಲಿ ಇವತ್ತು ಪ್ರತಿಯೊಬ್ಬರೂ ಕೂಡ ನಾನು ಸಮಾಜವಾದಿ, ನಾನು ಡೆಮಾಕ್ರಟಿಕ್, ನಾನು ಜಾತ್ಯಾತೀತ ರಾಷ್ಟ್ರವನ್ನು ಕಟ್ಟಬೇಕು ಎಂದು ಮುಂದೆ ಬರುತ್ತಾ ಇದ್ದಾರೆ. ಆದರೆ ಈ ಘೋಷಣೆಯಲ್ಲಿ ಎಷ್ಟರಮಟ್ಟಿಗೆ ಶಕ್ತಿ ಇದೆ ಅಥವಾ ಕಾರ್ಯವಾಗುತ್ತಾ ಇದೆ ಎಂದು ನೋಡುವುದಾದರೆ ಅಜಗಜಾಂತರ ವ್ಯತ್ಯಾಸ ಕಂಡುಬರುತ್ತಾ ಇದೆ. ಹಾಗೆಯೇ ಇವತ್ತಿನ ದಿವಸ ಈ ಕಾಂಗ್ರೆಸ್ ಸರ್ಕಾರ ಇಷ್ಟು ಘೋಷಣೆಗಳನ್ನು ಮಾಡಿ ರಾಜ್ಯಪಾಲರಿಂದ ಅವರ ಭಾಷಣದಲ್ಲಿ ಒಳ್ಳೊಳ್ಳೆಯ ಮಾತುಗಳನ್ನು ಆಡಿಸಿದರೂ ಕಾರ್ಯದಲ್ಲಿ ನೋಡಿದರೆ ಮಾತ್ರ ಇದು ಪರಸ್ಪರ ವಿರೋಧವಾಗುತ್ತಾ ಇದೆ ಎನ್ನತಕ್ಕಂಥ ಮಾತನ್ನು ತಮ್ಮ ಮುಂದೆ ಇಡಲಿಕ್ಕೆ ಬಯಸುತ್ತೇನೆ.

ಯಾವುದೇ ಒಂದು ಕಾರ್ಯ ಮಾಡಬೇಕಾದರೆ ಒಂದು ಧೋರಣೆ ಮಾಡಬೇಕು, ಆ ಧೋರಣೆ ಪ್ರಕಾರ ನಡೆಯುವ ಕಾಲದಲ್ಲಿ ಅದನ್ನು ಎಷ್ಟರ ಮಟ್ಟಿಗೆ ಜಾರಿಗೆ ತರುತ್ತಿದ್ದಾರೆ ಎನ್ನುವುದನ್ನು ನೋಡುವಾಗ ಮುಖ್ಯವಾಗಿ ಸಚ್ಚಾರಿತ್ರ್ಯ, ಧಾರ್ಮಿಕ ಶಿಕ್ಷಣ ಮತ್ತು ನೈತಿಕ ಜೀವನ ರಾಷ್ಟ್ರದಲ್ಲಿ ನಿರ್ಮಾಣವಾಗಬೇಕು. ನ್ಯಾಶನಲ್ ಕ್ಯಾರೆಕ್ಟರ್ ಯಾವಾಗ ಆಗುವುದಿಲ್ಲವೋ ಅಲ್ಲಿಯವರೆಗೆ ದೇಶ ಮುಂದಕ್ಕೆ ಬರುವುದಕ್ಕೆ ಸಾಧ್ಯವಿಲ್ಲ, ಇದರ ಬಗ್ಗೆ ಒಂದು ಮಾತು ಕೂಡ ರಾಜ್ಯಪಾಲರ ಭಾಷಣದಲ್ಲಿ ಇಲ್ಲ.

ಇನ್ನು ಪಾನನಿರೋಧದ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಈ ದೇಶದಲ್ಲಿ ಸಮಾಜ ಕೆಡುವುದಕ್ಕೆ ಮೊದಲನೆಯ ಕಾರಣ ಸೆರೆ, ಕುಡಿಯುವುದು ಇದರ ಜೊತೆಗೆ ಭ್ರಷ್ಟಾಚಾರ ಮತ್ತು ಅಧಾರ್ಮಿಕ ಶಿಕ್ಷಣ. ಇದರ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತು ಇಲ್ಲ. ವಾಸ್ತವಿಕವಾಗಿ ಇದನ್ನು ತೆಗೆಯುವ ಸಲುವಾಗಿ ೩೦ ವರ್ಷಗಳ ಹಿಂದೆಯೇ ದಿ. ಮಹಾತ್ಮಾ ಗಾಂಧೀಜಿಯವರು ಆ ಕಾಲಕ್ಕೇ ಪಾನ ನಿರೋಧ ಮಾಡಬೇಕೆಂದು ಹೇಳಿ ಅವರು ಬಹಳ ಕಷ್ಟ ಪಟ್ಟಿದ್ದರು. ಸೇಂದಿ ಗಿಡ ಕಡಿಯಬೇಕೆಂದು ಈ ದೇಶದಲ್ಲಿ ಸತ್ಯಾಗ್ರಹ ಮಾಡಿ ಜೈಲಿಗೆ ಹೋಗಿದ್ದರು. ಆದರೆ ಇವತ್ತು ನೋಡಿದರೆ ಅದೆಲ್ಲಾ ಕನಸಾಗಿ ನಮ್ಮ ಸರ್ಕಾರದವರಿಗೆ ಅದನ್ನು ತೆಗೆಯುವುದಕ್ಕೆ ಧೈರ್ಯವಿಲ್ಲದಂತಾಗಿದೆ ಅಥವಾ ಏತಕ್ಕೆ ಮಾಡಲಿಲ್ಲ ಎನ್ನುವುದು ಅರ್ಥವಾಗುತ್ತಿಲ್ಲ. ಪಾನ ನಿರೋಧ, ಭ್ರಷ್ಟಾಚಾರ ಮತ್ತು ಧಾರ್ಮಿಕ ಶಿಕ್ಷಣದ ವ್ಯವಸ್ಥೆ ಸರಿಯಾಗಿ ಮಾಡಲಾಗುತ್ತಿಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ. ವಾಸ್ತವಿಕವಾಗಿ ಈ ಕುಡಿತದ ಹಣದಿಂದ ನಮ್ಮ ದೇಶಕ್ಕೆ ಒಳ್ಳೆಯ ಇನ್‌ಕಂ ಏನೋ ಬರುತ್ತಿದೆ ಎನ್ನುವುದನ್ನು ಒಪ್ಪುತ್ತೇನೆ ಆದರೆ ನಮ್ಮ ಶರೀರದ ಜೊತೆಗೆ ಮನಸ್ಸು ಆತ್ಮ ಪ್ರಾಮಾಣಿಕವಾಗಿ ಆ ರೀತಿ ಬಂದಂಥ ರೊಕ್ಕದಿಂದ ನಮ್ಮ ದೇಶದ ಅಭಿವೃದ್ಧಿಯನ್ನು ಸಾಧಿಸುತ್ತೇವೆಂದರೆ ಒಪ್ಪುವುದಿಲ್ಲ, ಅಂಥಾ ಅಭಿವೃದ್ಧಿ ಕಾರ್ಯ ಯಾವುದೂ ಆಗುವುದಕ್ಕೆ ಸಾಧ್ಯವಿಲ್ಲ. ಭ್ರಷ್ಟಾಚಾರದ ಬಗ್ಗೆ ಒಂದಲ್ಲ, ಎರಡಲ್ಲ ನೂರಾರು ಉದಾಹರಣೆಗಳನ್ನು ಕೊಡಬಹುದು. ಈಗ ಮಾನ್ಯ ಮಿತ್ರರೊಬ್ಬರು ಹೇಳುತ್ತಿದ್ದರು ಈ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಭ್ರಷ್ಟಾಚಾರವೇನಿದೆ ಅದನ್ನು ತೆಗೆದು ಹಾಕುವುದಕ್ಕೆ ಒಂದು ಸೆಕ್ಷನ್‌ನಲ್ಲಿ ಪ್ರಾವಿಜನ್ ಮಾಡಿದ್ದೇವೆ ಆ ಪ್ರಕಾರ ಅಂಥಾ ಭ್ರಷ್ಟಾಚಾರಿಗಳನ್ನು ದೂರ ಮಾಡುತ್ತೇವೆಂದು ಹೇಳಿದರು, ಆದರೆ ಯಾರು ಭ್ರಷ್ಟ ಅಧಿಕಾರಿಗಳಿದ್ದಾರೆ ಅಂಥವರ ಮೇಲೆ ಎಫ್.ಐ.ಆರ್. ಇಷ್ಯು ಮಾಡಿ ಪನಿಶ್‌ಮೆಂಟ್ ಕೊಡುವುದಕ್ಕೆ ಸಾಧ್ಯವಾಗಿಲ್ಲ, ಯಾರು ಯಾರು ಅದರಲ್ಲಿ ಭ್ರಷ್ಟ ಅಧಿಕಾರಿಗಳಿದ್ದಾರೆ, ಪೂರ್ಣ ಕರಪ್ಟ್ ಇದ್ದಾರೆ, ರೈತರ ಆಸ್ತಿಪಾಸ್ತಿ ಲೂಟಿ ಮಾಡಿ, ಸಮಾಜವಾದದ ಮಾತನ್ನು ಆಡುತ್ತಾ ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಕೊಂಡು ಮತ್ತೆ ಮತ್ತೆ ಶ್ರೀಮಂತರಾಗುತ್ತಿದ್ದಾರೆ, ಅಂಥಾದರಲ್ಲಿ ತಾವು ಬರೀ ಸಮಾಜವಾದವನ್ನು ತರುತ್ತೇವೆಂದು ಹೇಳುವುದನ್ನು ನಂಬುವುದಕ್ಕೆ ಆಗುವುದಿಲ್ಲ ಎನ್ನತಕ್ಕ ಮಾತನ್ನು

ಹೇಳುತ್ತೇನೆ. ಇವತ್ತು ಯೂನಿವರ್ಸಿಟಿಯಲ್ಲಿ ಗಲಾಟೆಯಾಯಿತು ಎನ್ನುವ ಬಗ್ಗೆ ಇಲ್ಲಿ ಮಾತನಾಡಿದೆವು. ಅಲ್ಲಿ ವಿದ್ಯಾರ್ಥಿಗಳು ಗಲಾಟೆ ಮಾಡಿ ಒಬ್ಬ ಹೆಣ್ಣು ಮಗಳ ಮೇಲೆ ದಬ್ಬಾಳಿಕೆ ಮಾಡಿ, ಹೊಡೆಯಲಿಕ್ಕೂ ಹೋಗಿದ್ದಾರೆ, ಅಂದರೆ ಇಂಥಾ ಪ್ರವೃತ್ತಿ ವಿದ್ಯಾರ್ಥಿಗಳಲ್ಲಿ ಏತಕ್ಕೆ ಬಂತು? ನಮಗೆ ಸ್ವಾತಂತ್ರ್ಯ ಬಂದು ೩೦ ವರ್ಷಗಳಾಗಿದ್ದಾಗ್ಯೂ ೫-೬ ಹೊಸ ಶಾಸನ ಸಭೆಗಳು ಬಂದು ಹೋದವು ಇದರ ಬಗ್ಗೆ ಒಬ್ಬರಾದರೂ ಶಿಕ್ಷಣ ಮಂತ್ರಿಗಳಿರಲಿ ಅಥವಾ ಮುಖ್ಯ ಮಂತ್ರಿಗಳವರೇ ಇರಲಿ, ಈ ಶಿಕ್ಷಣ ಪದ್ಧತಿಯಲ್ಲಿರತಕ್ಕಂಥ ಕೆಟ್ಟ ಪದ್ಧತಿಯನ್ನು ದೂರ ಮಾಡಬೇಕು, ವಿದ್ಯಾರ್ಥಿಗಳಿಗೆ ಒಳ್ಳೆಯ ಶಿಕ್ಷಣ ಕೊಡಲಿಕ್ಕೆ ಇಲ್ಲಿಯವರೆಗೂ ಏತಕ್ಕೆ ಪ್ರಯತ್ನ ಮಾಡಲಿಲ್ಲ? ಆ ರೀತಿ ಮಾಡುವ ವಿಚಾರವೂ ಕೂಡ ಇದ್ದ ಹಾಗೆ ಕಾಣುತ್ತಿಲ್ಲ. ಇವತ್ತು ನೀವು ಎಷ್ಟೋ ಹೈಸ್ಕೂಲ್‌ಗಳನ್ನು, ಕಾಲೇಜ್‌ಗಳನ್ನು ಪ್ರಾರಂಭ ಮಾಡಿದರೂ ಅಲ್ಲಿಯು ವಿದ್ಯಾರ್ಥಿಗಳಿಗೆ ಧಾರ್ಮಿಕ ರೀತಿಯಲ್ಲಿ ಶಿಕ್ಷಣ ಕೊಡದೇ ಇರುವುದರಿಂದ ಇವತ್ತು ಹುಡುಗರು ಶಿಕ್ಷಕರನ್ನೇ ಹೊಡೆಯುವುದಕ್ಕೆ ಹೊರಟಿದ್ದಾರೆ. ಪರೀಕ್ಷೆಗಳಲ್ಲಿ ಕಾಪಿ ಮಾಡಿನ್ದರೂ ಪಾಸ್ ಮಾಡಿಸಿ ಎಂದು ವಿದ್ಯಾರ್ಥಿಗಳೇ ಹೊರಟ್ಟಿದ್ದಾರೆ. ಇಂಥಾ ಹಲವಾರು ಘಟನೆಗಳು ನಮ್ಮ ದೇಶದಲ್ಲಿ ನಡೆದು ಕೊಂಡು ಬರುತ್ತಿವೆ. ಇವೆಲ್ಲಾ ಮಾಡುವುದನ್ನು ನೋಡಿದರೆ ವಾಸ್ತವಿಕವಾಗಿ, ಶಿಕ್ಷಣದ ಬುನಾದಿ, ನೈತಿಕ ಮೌಲ್ಯವನ್ನು ಕಳೆದುಕೊಂಡಿರುವುದರಿಂದ ನೀವು ಯಾವ ಅಭಿವೃದ್ಧಿಯನ್ನೂ ಸಾಧಿಸುವುದಕ್ಕಾಗುವುದಿಲ್ಲ. ಇವತ್ತು ಅಧಾರ್ಮಿಕ ಕಾರ್ಯದಲ್ಲಿ, ದೌರ್ಜನ್ಯದಲ್ಲಿ ಮಾತ್ರ ಬಹಳಷ್ಟು ಮುಂದೆ ಹೋಗಿದ್ದೇವೆ, ಇದನ್ನು ತಾವು ಮೊದಲು ಆದಷ್ಟು ಬೇಗನೆ ಬದಲಾವಣೆ ಮಾಡಬೇಕಾಗಿದೆ.

ಇನ್ನು ಚುನಾವಣೆಯ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ಮಾನ್ಯ ಮಿತ್ರರು ಹೇಳಿದರು ಶ್ರೀ ಚಂದ್ರಶೇಖರ್‌ರವರು ಹೇಳುತ್ತಿದ್ದರು ಆದರೆ ಯಾವ ಕ್ರಿಟೀರಿಯಾದಿಂದ ಉತ್ತರ ಹಿಂದೂಸ್ಥಾನದವರು ಜನತಾಗೆ ಓಟು ಕೊಟ್ಟರು ಎಂಬುದನ್ನು ಕೇಳುತ್ತೇನೆ. ಓಟನ್ನು ನನ್ನ ಅನುಭವದ ಪ್ರಕಾರ ಹೇಳುವುದಾದರೆ....

ಅಧ್ಯಕ್ಷರು.—ಚುನಾವಣೆಯ ವಿಚಾರ ಇಲ್ಲಿ ಬೇಡ. ರಾಜ್ಯಪಾಲರ ವಿಷಯದ ಬಗ್ಗೆ ಮಾತನಾಡಿ.

ಶ್ರೀ ಭೀಮಣ್ಣ ಖಂಡ್ರೆ.—ಯಾವ ಪ್ರಕಾರ ಓಟು ಆಗುತ್ತದೆಂಬುದನ್ನು ಹೇಳುತ್ತಿದ್ದೇನೆ ಅಷ್ಟೆ.

ಅಧ್ಯಕ್ಷರು.—ಆ ವಿಚಾರ ಈಗ ಬೇಡ.

ಶ್ರೀ ಭೀಮಣ್ಣ ಖಂಡ್ರೆ.—ನನ್ನ ಅನುಭವದ ಪ್ರಕಾರ ಹೇಳುತ್ತಿದ್ದೇನೆ, ಯಾವ ಪ್ರಕಾರ ಚುನಾವಣೆಯಲ್ಲಿ ನಡೆಯುತ್ತದೆಂದರೆ ***ಒಂದು ಉದಾಹರಣೆ ಹೇಳುತ್ತೇನೆ.

(ಮಧ್ಯೆ ಹಲವಾರು ಸದಸ್ಯರುಗಳು ಮಾತನಾಡಿದರು)

ಅಧ್ಯಕ್ಷರು.—***ಆ ಪದಗಳನ್ನೆಲ್ಲಾ ತಾವು ಇಲ್ಲಿ ಉಪಯೋಗಿಸಬೇಡಿ, ಚುನಾವಣೆ ನಡೆದು ಎಲ್ಲಾ ಆಗಿದೆ ಆ ವಿಚಾರ ಈಗ ಬೇಡ. ಆದುದರಿಂದ ತಾವು ಆ ಪದಗಳನ್ನು ಮತ್ತೆ ಉಪಯೋಗಿಸಬೇಡಿ. ತಾವು ಹೇಳಿರತಕ್ಕಂಥ ***ಪದಗಳನ್ನು ರಿಕಾರ್ಡ್‌ನಿಂದ ತೆಗೆದು ಹಾಕಲಾಗಿರುತ್ತದೆ.

ಶ್ರೀ ಭೀಮಣ್ಣ ಖಂಡ್ರೆ.—ನನ್ನ ಅನುಭವದ ಪ್ರಕಾರ ಓಟು ಯಾವ ರೀತಿ ನಡೆಯುತ್ತದೆ ಎಂದು ಹೇಳುತ್ತೇನೆ ಯಾರನ್ನೂ ಆಕ್ಷೇಪಣೆ ಮಾಡಬೇಕು ಎಂದು ಹೇಳುತ್ತಿಲ್ಲ. ಒಂದು ಸಾರಿ ಮುನಿಸಿಪಲ್ ಎಲೆಕ್ಷನ್‌ನಲ್ಲಿ ನಮ್ಮ ಪಕ್ಕದ ನೇಬರ್ ರಜಾಕ್ ಎಂಬುವವರು ನನಗೆ ತುಂಬಾ ಸ್ನೇಹಿತರಾದವರು, ತುಂಬಾ ಬೇಕಾದವರು ಅಂಥವರೇ ನಮಗೆ ಓಟು ಮಾಡಲಿಲ್ಲ, ನಾನು ೪ ತಿಂಗಳ ನಂತರ ಕೇಳಿದ್ದಕ್ಕೆ ಅವರು ಹೇಳಿದರು ಎದುರು ಪಾರ್ಟಿಯವರು ನಿಮಗೆ ಓಟು ಮಾಡಿದರೆ ಹೊಡೆಯುತ್ತೇವೆಂಬುದಾಗಿ ಭಯ ಹುಟ್ಟಿಸಿದರು ಅದಕ್ಕಾಗಿ ಅವರಿಗೆ ಓಟು ಮಾಡಿದೆವು ಎಂದು ಹೇಳಿದರು.

ಅಧ್ಯಕ್ಷರು.—ಅದೆಲ್ಲಾ ರಾಜ್ಯಪಾಲರ ಭಾಷಣದಲ್ಲಿ ಬರುತ್ತದೆಯೇ?

ಶ್ರೀ ಭೀಮಣ್ಣ ಖಂಡ್ರೆ.—ಅದು ಅದಕ್ಕೆ ಸಂಬಂಧಪಟ್ಟಿದೆ ಸ್ವಾಮಿ, ನಾನು ನನ್ನ ಅನುಭವದ ಪ್ರಕಾರ ಚುನಾವಣೆಯಲ್ಲಿ ಯಾವ ರೀತಿ ಆಗುತ್ತದೆಂಬುದನ್ನು ಹೇಳುತ್ತಿದ್ದೇನೆ, ಏತಕ್ಕೆಂದರೆ ಮಾನ್ಯ ರಾಜ್ಯಪಾಲರೂ ಸಹ ತಮ್ಮ ಭಾಷಣದಲ್ಲಿ ಚುನಾವಣೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿದ್ದಾರಲ್ಲ.

*** Word/Words expunge as ordered by the speaker

ಅಧ್ಯಕ್ಷರು.—ಯಾವ ರೀತಿ ಓಟು ಮಾಡಿದರು, ಯಾವ ರೀತಿಯಲ್ಲಿ ನಡೆಯಿತು ಎನ್ನುವ ಬಗ್ಗೆ ಎಲ್ಲಾ ಚರ್ಚೆ ನಡೆಯಬೇಕಾಗಿದೆಯೋ? ಇನ್‌ಡೈರೆಕ್ಟ್ ಆಗಿ ಮಾತನಾಡಬೇಡಿ ನೇರವಾಗಿ ವಿಷಯದ ಬಗ್ಗೆ ಮಾತನಾಡಿ.

ಶ್ರೀ ಭೀಮಣ್ಣ ಖಂಡ್ರೆ.—ಈ ರೀತಿಯಾಗಿ ಚುನಾವಣೆಯಲ್ಲಿ ಕಲವೊಮ್ಮೆ ಕೆಲವರು ಹೆದರಿಸುವುದು ಅವರು ಅಂಜಿ ಬೇರೆಯವರಿಗೆ ಓಟು ಮಾಡುವಂಥಾ ಪ್ರಸಂಗಗಳು ಸಹ ಇರುತ್ತವೆ. ಹೀಗಾಗಿ ನನಗೆ ಆಗ ಅವರು ಓಟು ಮಾಡಿರಲಿಲ್ಲವೆನ್ನುವುದು ತಿಳಿಯಿತು. ಅದಕೋಸ್ಕರವೇ ತಮಗೆ ನಾನು ಈ ಉದಾಹರಣೆಯನ್ನು ಕೊಟ್ಟಿದ್ದು.

ಅಂತಹ ಸಹಕಾರ ಸಂಘಗಳು ಸರ್ಕಾರದ ವಶಕ್ಕೆ ಬರುತ್ತವೆ. ಯಾವಾಗಬೇಕೋ ಆಗ ಈ ಸೆಕ್ಷನ್ ನನ್ನು ನಿಮ್ಮ ಮನಸ್ಸಿನಂತೆ ತರಬಹುದು. ಈ ವಿಷಯ ನಮ್ಮ ಮಾನ್ಯ ಮಿತ್ರರಿಗೂ ಗೊತ್ತಿದೆ. ಸೆಕ್ಷನ್‌೩೦ರ ಪ್ರಕಾರ ಆ ಫ್ಯಾಕ್ಟರಿಗಳೆಲ್ಲಾ ಗೌರ್ನಮೆಂಟ್ ಕಂಟ್ರೋಲ್‌ಗೆ ಹೋಗಿದ್ದು ಹೈಕೋರ್ಟ್‌ನಿಂದ ರಿಟ್ ವಾಪಸ್ ತೆಗೆದುಕೊಂಡ ನಂತರ. ಈ ಸೆಕ್ಷನ್‌ನಿಂದ ಯಾರ ವಿರುದ್ಧವಾಗಿಯಾದರೂ ಅಭಿಪ್ರಾಯ ನಿಮಗೆ ಮೂಡಬಹುದು. ಇದು ದಬ್ಬಾಳಿಕೆಗೆ ಎಡೆ ಮಾಡಿಕೊಡುತ್ತದೆ. ಆ ಪ್ರಕಾರ ಆಗಬಾರದು.

೬.೦೦ ಪಿ. ಎಂ.

ಶ್ರೀ ಕೆ. ಹೆಚ್. ರಂಗನಾಥ್.—ಇಲ್ಲಿ ಸೆಕ್ಷನ್ ೩೦ ಇದೆ. ಅಲ್ಲದೇ ಸೆಕ್ಷನ್ ೩೦ (ಎ) ಸಹ ಇದೆ. ಸಹಕಾರ ಸಂಘಗಳಲಿ ಹೇಳದೇ ಕೇಳದೇ ಇರುವ ಹಣವನ್ನೆಲ್ಲಾ ನುಂಗಿಕೊಂಡು ಹೋಗುತ್ತಿರುವುದನ್ನು ಸರ್ಕಾರ ಸುಮ್ಮನೆ ಕುಳಿತು ನೋಡುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಮಾನ್ಯಸದಸ್ಯರೂ ಒಪ್ಪುತ್ತಾರೆ. ಈಗ ನಮ್ಮ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಇದೆ, ಅಲ್ಲಿ ೬೦ ಲಕ್ಷ ರೂಪಾಯಿಗಳ ಅವ್ಯವಹಾ ರಾಯಿತು. ಇನ್ನೊಂದು ಸೊಸೈಟಿಯಲ್ಲಿ ೮೭ ಲಕ್ಷ ರೂಪಾಯಿಗಳ ಅವ್ಯವಹಾರವಾಯಿತು. ಹೀಗಾದರೆ ಸರ್ಕಾರ ಅದನ್ನೆಲ್ಲಾ ನೋಡಿಕೊಂಡು ಹೇಗೆ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಸಾಧ್ಯ? ಈ ದೃಷ್ಟಿಯಿಂದಲೇ ಸೆಕ್ಷನ್ ೩೦ (ಎ) ಇದೆ. ಈ ಸೆಕ್ಷನ್ ಪ್ರಕಾರ ಅಂತಹ ಸಹಕಾರ ಸಂಘಗಳನ್ನೆಲ್ಲಾ ಹತೋಟಿಗೆ ತೆಗೆದುಕೊಳ್ಳಬಹುದು. ಈ ಸೆಕ್ಷನ್ ಬಂದ ಮೇಲೆ ೨೬ ಸಾವಿರ ಸಹಕಾರ ಸಂಘಗಳು ಏನಿವೆ ಅವುಗಳನ್ನೆಲ್ಲಾ ನಾವು ತೆಗೆದುಕೊಂಡಿದ್ದೇವೆ. ಈ ಕಾಯಿದೆ ಬಂದಮೇಲೆ ಡಿಸ್ಟ್ರಿಕ್ಟ್ ಬ್ಯಾಂಕ್ ಗಳನ್ನು ಮತ್ತು ಸಹಕಾರ ಸಂಘಗಳನ್ನು ಕಂಟ್ರೋಲ್‌ಗೆ ತೆಗೆದುಕೊಂಡಿದ್ದೇವೆ. ಏಕೆಂದರೆ ಮುಂದೆ ಪ್ರಜಾಪ್ರಭುತ್ವ ಹಾಳಾಗಿ ಹೋಯಿತು ಎಂದು ಯಾರೂ ಹೇಳಬಾರದು. ಮಾನ್ಯ ವಿರೋಧಪಕ್ಷದ ನಾಯಕರು ಈ ಕಾಯಿದೆ ಬಗ್ಗೆ ಮಾತನಾಡುವಾಗ ಒಂದು ಹೆಜ್ಜೆಯನ್ನು ಮುಂದಕ್ಕೆ ಹಾಕಿದರು. ಕಂಪನಿ ಆಕ್ಟ್‌ನಲ್ಲಿ ಹೇಳಿರುವಂತೆ ಸಹಕಾರಸಂಘಗಳ ವ್ಯವಹಾರದಲ್ಲಿ ಅಷ್ಟು ಸುಲಭವಾಗಿ ಆ ರೀತಿ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಆದರೆ ಇವತ್ತು ೧೧ ಸಹಕಾರ ಸಂಘಗಳಲ್ಲಿ ಡೈರೆಕ್ಟರು ಗಳು ನಡೆಸಿಕೊಂಡು ಬಂದ ವ್ಯವಹಾರದಲ್ಲಿ ೧ ಕೋಟಿ ೩೯ ಲಕ್ಷ ರೂಪಾಯಿಗಳಷ್ಟು ಅವ್ಯವಹಾರ ಆಗಿರುವುದರ ಜೊತೆಗೆ ಈ ಕಾಯಿದೆ ಇಲ್ಲದೇ ಹೋಗಿದ್ದರೆ ಸರ್ಕಾರ ಅವುಗಳನ್ನು ಕಂಟ್ರೋಲ್ ಮಾಡು ವುದಕ್ಕೆ ಆಗುತ್ತಾ ಇರಲಿಲ್ಲ. ಅಂತಹ ಸಹಕಾರ ಸಂಘಗಳಲ್ಲಿ ಷೇರ್ ಕ್ಯಾಪಿಟಲ್ ಇರತಕ್ಕಂಥಾದ್ದು ಯಾರದು? ಜಿಲ್ಲಾ ಬ್ಯಾಂಕುಗಳಲ್ಲಿ ಇರತಕ್ಕಂಥ ಷೇರ್ ಕ್ಯಾಪಿಟಲ್ ಯಾರದು? ಅದು ಸರ್ಕಾರದ್ದು ಮತ್ತು ಸಾರ್ವಜನಿಕರದ್ದು. ಇಂತಹ ಸರ್ಕಾರ ಮತ್ತು ಸಾರ್ವಜನಿಕರ ಹಣ ಅಂತಹ ಸಂಸ್ಥೆಗಳಲ್ಲಿ ದುರು ಪಯೋಗವಾಗುವಂತ ಪರಿಸ್ಥಿತಿ ಬಂದಾಗ ಕ್ರಮ ತೆಗೆದುಕೊಳ್ಳುವುದಕ್ಕೋಸ್ಕರ ಈ ಸೆಕ್ಷನ್ ಇರತಕ್ಕಂ ಥಾದ್ದು. ಅದಕ್ಕೋಸ್ಕರವಾಗಿಯೇ ನಾನು ಹೇಳಿದ್ದು ಈ ಕಾನೂನು ಬಂದು ಸುಮಾರು ೨ ವರ್ಷ ಆಗುತ್ತಾ ಬಂತು. ಈ ೨ ವರ್ಷಗಳಲ್ಲಿ ೪ ಸಂಸ್ಥೆಗಳನ್ನಲ್ಲದೇ ಅಂತಹ ಅನೇಕ ಸಹಕಾರ ಸಂಘಗಳನ್ನು ಗೌರ್ನಮೆಂಟ್ ಕಂಟ್ರೋಲ ಗೆ ತೆಗೆದುಕೊಂಡಿದೆ.

ಶ್ರೀ ಭೀಮಣ್ಣ ಖಂಡ್ರೆ.—ನನ್ನ ಸ್ವಂತ ಫ್ಯಾಕ್ಟರಿಯನ್ನೂ ತೆಗೆದುಕೊಂಡಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಆ ಕಾರ್ಖಾನೆ ನಡೆಯದೇ ಇರತಕ್ಕಂಥ ಪರಿಸ್ಥಿತಿಯಲ್ಲಿದ್ದಾಗ, ನೌಕರರಿಗೆ ಸಂಬಳ ಕೊಡದೇ ಇರತಕ್ಕಂಥ ಪರಿಸ್ಥಿತಿಯಲ್ಲಿದ್ದಾಗ ಸರ್ಕಾರ ೨೬ ಲಕ್ಷ ರೂಪಾಯಿಗಳನ್ನು ಕೊಟ್ಟು, ಆ ಕಾರ್ಖಾನೆ ನಡೆಯುವಂತೆ ಮಾಡಿದ್ದು ಈ ಸರ್ಕಾರ.

ಶ್ರೀ ಜಿ. ಹೆಚ್. ಪಟೇಲ್.—ಮಾನ್ಯ ಸಚಿವರು ಹೇಳಿದ್ದು ಸರಿ. ಕೋ ಆಪರೇಟಿವ್ ಸೊಸೈಟಿಗಳಲ್ಲಿ ಕೆಲವೊಂದು ದುಷ್ಟ ಶಕ್ತಿಗಳು ಏನಿದ್ದಾರೆ ಅವರು ಸರಿಯಾದ ರೀತಿಯಲ್ಲಿ ಕೆಲಸಮಾಡುವಂತೆ ಇದ್ದುವುದಕ್ಕೆ ಈ ಪ್ರಾವಿಷನ್ ಮಾಡಿದ್ದೇವೆಂದು ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮೀಸಾ ಕಾನೂನು ಮಾಡಿದ್ದು ಸ್ಮಗ್ಲರ್ಸ್‌ಗೋಸ್ಕರ. ಆದರೆ ಆ ಮೀಸಾ ಕಾನೂನನ್ನು ತೆಗೆದುಕೊಂಡು ಬಂದು ಅವರು ಏನು ಮಾಡಿದರು ಎಂಬುದು ನಮಗೆ ಗೊತ್ತಿದೆ. ಯಾರ್‍ಯಾರ ಮೇಲೋ ಅವರ ಮುಖ ಮೋರೆ ನೋಡದೆ ಆ ಕಾನೂನಿನ ಕ್ರಮವನ್ನು ಪಾಲಿಸಿದಂತವರು ಈ ಕೋ ಆಪರೇಟಿವ ಸೊಸೈಟಿಗಳಿಗೆ ಸಂಬಂಧಪಟ್ಟ ಕಾನೂನಿನಿಂದ ಏನು ಮಾಡುತ್ತಾರೆ ಎಂಬುದನ್ನು ಸ್ವಲ್ಪ ಹೇಳಲಿ.

SRI K. H. RANGANATH.—Let the hon. Member be fair. I said except these 4 institutions, which are those? Which have been taken over, facts are there. ಒಂದು ಗುಲ್ಬರ್ಗ ಡಿ.ಸಿ.ಸಿ. ಬ್ಯಾಂಕ್, ರಾಯಚೂರು ಡಿ.ಸಿ.ಸಿ. ಬ್ಯಾಂಕ್ ಮತ್ತು ೨ ಸೊಸೈಟಿಗಳನ್ನು ತೆಗೆದುಕೊಂಡಿರುವುದನ್ನು ಬಿಟ್ಟರೆ ನಷ್ಟವಿಲ್ಲದೇ ಇರತಕ್ಕಂಥ ಬೇರೆ ಸೊಸೈಟಿಗಳನ್ನು ತೆಗೆದುಕೊಂಡಿರುವುದು ಯಾವುದು ಇದೆ? ಯಾವುದೂ ಇಲ್ಲ. ಆದ್ದರಿಂದ ಈ ಕಾನೂನಿನ ದುರಪಯೋಗ ಮಾಡಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ರಂಗನಾಥ್‌ರವರ ಬಗ್ಗೆ ನನಗೆ ಗೌರವ ಇದೆ. ಅವರು ಕಾನೂನು ಚಲಾವಣೆಯಲ್ಲಿ ನ್ಯಾಯವಾಗೇ ನಡೆದುಕೊಂಡು ಬಂದಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ಎಲ್ಲರೂ ಮಾನ್ಯ ರಂಗನಾಥ್‌ರವರಂತೆ ಇರುವುದಿಲ್ಲ. ಇಂತಹ ಸರ್ವಾಧಿಕಾರ ಇದ್ದರೆ ಅನೇಕ ಸಲ ರಾಜಕೀಯವಾಗಿ ಕಾನೂನು ದುರುಪಯೋಗ ಆಗುವಂಥ ಸಂದರ್ಭ ಇದೆ. ಸರ್ಕಾರ ಕಾಯಿದೆ ಮಾಡಿದಾಗ ಸರ್ಕಾರಕ್ಕೆ ಅದರಲ್ಲಿ ಸರ್ವಾಧಿಕಾರ ಇರಬಾರದು. ನಾನು ಹೇಳುವುದೇನೆಂದರೆ ಎಲ್ಲಿ ಹಣದ ಅಪವ್ಯಯ ಆಗುತ್ತದೆಯೋ ಅಲ್ಲಿ ಹಣದ ಅಪವ್ಯಯ ಮಾಡುವಂತಹವರಿಗೆ ಶಿಕ್ಷೆ ಆಗಲೇಬೇಕು. ಸಹಕಾರ ಸಂಘಗಳಲ್ಲಿ ಎಲ್ಲೆಲ್ಲಿ ಹಣದ ಅಪವ್ಯಯ ಇದೆ ಅಲ್ಲೆಲ್ಲಿ ಅಂತಹವರಿಗೆ ಶಿಕ್ಷೆಯಾಗಬೇಕು. ಆ ಬಗ್ಗೆ ನಾವು ಸರ್ಕಾರಕ್ಕೆ ಬೆಂಬಲವನ್ನು ಕೊಡುತ್ತೇವೆ. ಆದರೆ ಅನೇಕ ಸಲ ನೋಟೀಸ್ ಕೊಡದೇ ಸಹಕಾರ ಸಂಘಗಳನ್ನು ತೆಗೆದುಕೊಳ್ಳತಕ್ಕಂಥ ಅವಕಾಶ ಬಂದಾಗ ಕಾನೂನಿನ ದುರುಪಯೋಗವಾಗತಕ್ಕಂಥ ಸಂಭವಗಳು ಇವೆ. ಆದ್ದರಿಂದ ನೋಟೀಸ್ ಕೊಡುವುದು ಅಗತ್ಯ ಎಂದು ನಾವು ಪದೇಪದೇ ಹೇಳುತ್ತಿದ್ದೇವೆ. ಇದನ್ನು ತಾವು ಮಾಡಿಲ್ಲ. ಇನ್ನು ಮುಂದೆ ಬರತಕ್ಕಂಥ ಮಂತ್ರಿಗಳೂ ಇದನ್ನು ಮಾಡಲಿಕ್ಕಿಲ್ಲ, ಸರ್ಕಾರಕ್ಕೆ ಅಬ್ಸೊಲ್ಯೂಟ್....

ಶ್ರೀ ಕೆ.ಹೆಚ್. ರಂಗನಾಥ್.—ನೋಟೀಸ್ ಕೊಡತಕ್ಕಂಥ ಸೆಕ್ಷನ್ ಯಾವುದೆಂದರೆ ಸೆಕ್ಷನ್ ೩೦. ವಿಶೇಷ ಸಂದರ್ಭ ಬಂದಾಗ ಅವುಗಳನ್ನು ತೆಗೆದುಕೊಳ್ಳುವುದಕ್ಕೆ ಸೆಕ್ಷನ್ ೩೦ (ಎ) ಇರುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ವಿಶೇಷ ಸಂದರ್ಭ ಬಂದಾಗ ಅಂತಹ ಸೊಸೈಟಿಗಳನ್ನು ತೆಗೆದುಕೊಳ್ಳುವುದಕ್ಕೆ ಆ ಕಾನೂನು ಅಮೆಂಡ್‌ಮೆಂಟ್ ಆದರೆ ಒಳ್ಳೆಯದು. ಇಲ್ಲದಿದ್ದರೆ ಕಾನೂನಿನ ದುರುಪಯೋಗವಾಗುತ್ತದೆ.

ಶ್ರೀ ಭೀಮಣ್ಣ ಖಂಡ್ರೆ.—ಅದನ್ನು ಮಾಡದಿದ್ದರೆ ಎಮರ್ಜೆನ್ಸಿಯಲ್ಲಿ ಕಾನೂನಿನ ದುರುಪಯೋಗವಾಯಿತಲ್ಲ ಹಾಗಾಗುತ್ತದೆ. ವಿಶೇಷ ಪರಿಸ್ಥಿತಿ ಬಂದಾಗ ಆ ರೀತಿ ಮಾಡುತ್ತೇವೆಂದು ಮಾನ್ಯಸಚಿವರು ಹೇಳಿದರು. ಆ ಪ್ರಕಾರ ಷುಗರ್ ಫ್ಯಾಕ್ಟರಿಯಲ್ಲಿನ ವ್ಯವಹಾರ ಸರಿಯಾಗಿ ಇಲ್ಲದಿದ್ದರೆ....

ಶ್ರೀ ಕೆ.ಹೆಚ್. ರಂಗನಾಥ್.—ಸರ್ಕಾರ ತೊಂದರೆ ಕೊಡುತ್ತಾ ಇದೆ ಎಂದು ಮಾನ್ಯ ಸದಸ್ಯರು ಹೇಳಿದರು, ಅದಕ್ಕೆ ಹೇಳಿದೆ.

ಶ್ರೀ ಭೀಮಣ್ಣ ಖಂಡ್ರೆ.—ಆದರೆ ಈ ಪರಿಸ್ಥಿತಿ ಏತಕ್ಕೆ ಬಂತು ಎಂಬುದನ್ನು ನಾವು ಯೋಚನೆ ಮಾಡಬೇಕು. ಆ ಷುಗರ್‌ಫ್ಯಾಕ್ಟರಿ ಬಗ್ಗೆ ೨ ವರ್ಷಗಳಿಂದ....

ಅಧ್ಯಕ್ಷರು.—ತಾವು ಹೆಚ್ಚು ಸಮಯನ್ನು ತೆಗೆದುಕೊಂಡಿದ್ದೀರಿ. ಭಾಷಣ ಬೇಗ ಮುಗಿಸಿ.

ಶ್ರೀ ಭೀಮಣ್ಣ ಖಂಡ್ರೆ.—ನನಗೆ ಇನ್ನೂ ೧೫ ನಿಮಿಷಗಳ ಅವಕಾಶ ಬೇಕು.

ಅಧ್ಯಕ್ಷರು.—ಹೆಚ್ಚು ಸಮಯ ಕೊಡುವುದಕ್ಕಾಗುವುದಿಲ್ಲ. ತಮ್ಮ ಭಾಷಣವನ್ನು ಇನ್ನು ೫ ನಿಮಿಷದಲ್ಲಿ ಮುಗಿಸಿ.

ಶ್ರೀ ಭೀಮಣ್ಣ ಖಂಡ್ರೆ.—ನನಗೆ ೫ ನಿಮಿಷ ಸಾಕಾಗುವುದಿಲ್ಲ. ಇನ್ನೂ ಹೇಳತಕ್ಕಂಥ ವಿಷಯ ಬಹಳ ಇದೆ. ನಾಳೆ ಮಾತನಾಡುತ್ತೇನೆ.

ನಾವು ಇಲ್ಲಿ ಕೂಳಿತು ಕೆಲಸ ಮಾಡುವಂತಹ ಸಮಯದಲ್ಲಿ ಸರ್ಕಾರ ನಡೆಸತಕ್ಕಂಥವರು ಒಳ್ಳೆಯ ಕೆಲಸವನ್ನು ಮಾಡಿದರೆ ಅದಕ್ಕೆ ಸ್ವಾಗತ ಮಾಡುತ್ತೇನೆ ಯಾವುದು ಒಳ್ಳೆಯದನ್ನು ಮಾಡುವುದಿಲ್ಲ ಅದರ ಬಗ್ಗೆ ಆಕ್ಷೇಪಣೆ ಮಾಡುತ್ತೇವೆ. ನೀವು ಒಳ್ಳೆಯದನ್ನು ಮಾಡಿದರೂ ಟೀಕೆ ಮಾಡುತ್ತೇವೆಂದು ದಯಮಾಡಿ ಯಾರೂ ತಿಳಿದುಕೊಳ್ಳಬೇಡಿ.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್.—ನೀವು ನಮ್ಮ ದಯಾದಿಗಳು ಆದ್ದರಿಂದ ನೀವು ಯಾವಾಗಲೂ ವಿರೋಧ ಮಾಡುತ್ತೀರಿ?

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಚಂದ್ರಶೇಖರ್‌ರವರು ಪದೇಪದೇ ಎದ್ದು ಮಾತ ನಾಡುತ್ತಿದ್ದಾರೆ. ಸಭೆಯಲ್ಲಿ ಉತ್ತರ ಕೊಡುವುದಕ್ಕೆ ಮಂತ್ರಿಗಳು ಇದ್ದಾರೆ. ಇವರು ಯಾವಾಗ ಮಂತ್ರಿಗಳಾದರು? ಇವರಿಗೆ ಯಾವ ಪೋರ್ಟ್‌ಫೋಲಿಯಾವನ್ನು ಕೊಡದೆ ಮಂತ್ರಿಗಳನ್ನು ಮಾಡಿದ್ದಾರೆಯೇ?

ಅಧ್ಯಕ್ಷರು.—ನಾನು ಪದೇಪದೇ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ದಯವಿಟ್ಟು ಯಾರು ಚೇರ್ ಅನುಮತಿ ಇಲ್ಲದೆ ಸ್ವಿಚ್ ಹಾಕಿ ಪದೇಪದೇ ಮಾತನಾಡುವುದು ಸರಿಯಲ್ಲ, ಇದು ಯಾವ ಪಾರ್ಲಿಮೆಂಟರಿ ಪದ್ಧತಿ? ನಾನು ಎಷ್ಟು ಸಾರಿ ಹೇಳಿದರೂ ಗೊತ್ತಾಗುವುದಿಲ್ಲವೇ? ಇದು ಬಹಳ ಕೆಟ್ಟ ಸಂಪ್ರದಾಯ.

ಶ್ರೀ ಜೆ.ಎಚ್. ಪಾಟೀಲ್–ಅಧ್ಯಕ್ಷರೇ ನನ್ನ ಪಾಯಿಂಟ್ ಆಫ್ ಆರ್ಡರ್ ಏನು ಎಂದರೆ ಚುನಾವಣೆ ಯಲ್ಲಿ ಏನೇನು ಅಭ್ಯಾಸಗಳನ್ನು ಮಾಡಿದರು, ಹಾಗೂ ಕೆಟ್ಟ ಚಾಳಿಗಳನ್ನು ನಡೆಸಿದರು ಎಂದು ಸಾರ್ವ ತ್ರಿಕವಾಗಿ ಹೇಳಿದರೇ ಹೊರತು ಯಾರನ್ನು ಕುರಿತು ಹೇಳಿದ್ದಲ್ಲ. ಈ ರೀತಿ ಹೇಳಿದ್ದನ್ನು ಕೇಳಿ ಯಾರಿಗೆ ಏನಾಗುತ್ತದೆ ಎಂಬುದು ಗೊತ್ತಿಲ್ಲ, ಅವರಿಗೇ ಹೇಳಿದರೋ ಎನ್ನುವ ಹಾಗೆ ಎದ್ದು ಮಾತನಾಡುತ್ತಿದ್ದಾರೆ?

ಅಧ್ಯಕ್ಷರು.—ಯಾವ ವಿಷಯದ ಮೇಲೆ ತಮ್ಮ ಕ್ರಿಯಾಲೋಪ.

ಶ್ರೀ ಜಿ.ಎಚ್. ಪಾಟೀಲ್.—ತಾವು ಕೆಲವು ಶಬ್ದಗಳನ್ನು ತೆಗೆಸಿ ಹಾಕುತ್ತೇವೆಂದು ಹೇಳಿದಿರಿ. ಅದಕ್ಕೆ ಆರೀತಿ ತೆಗೆಸುವಂತಹ ಶಬ್ದಗಳನ್ನು ಬಳಸಿಲ್ಲವೆಂದು ಹೇಳಿದೆ.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್.—ಸ್ಪೀಕರ್ ರೂಲಿಂಗ್ ಮೇಲೆ ಪಾಯಿಂಟ್ ಆಫ್ ಆರ್ಡರ್ ಇದೆಯೇ?

ಅಧ್ಯಕ್ಷರು.—ನಾನು ಸ್ಪಷ್ಟೀಕರಣ ಕೇಳುತ್ತಿದ್ದೇನೆ, ನೀವು ಏತಕ್ಕೆ ನಿಂತು ಮಾತನಾಡುತಿದ್ದೀರಿ? ಇದು ಸರಿಯಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ನಾನು ಏನೇನು ಹೇಳಿದ್ದೇನೆ ಅದು ಯಾರ ಒಬ್ಬರ ಮೇಲೆ ಅಪವಾದ ಮಾಡಲಿಕ್ಕೆ ಹೇಳಿಲ್ಲ, ಸಾರ್ವತ್ರಿಕವಾಗಿ ಹೇಳಿದ್ದೇನೆ ಆ ಹೇಳುವ ಹಕ್ಕು ನನಗೆ ಇದೆ. ನಾನು ಯಾವ ಪಕ್ಷದ ಅಥವಾ ವ್ಯಕ್ತಿಯ ವಿಷಯದಲ್ಲಿ ಮಾತನಾಡಿಲ್ಲ. ಆದ್ದರಿಂದ ಸಾರ್ವತ್ರಿಕವಾಗಿ ಹೇಳುವ ಅಧಿಕಾರವಿದೆ. ಅದನ್ನು ಎಕ್ಸಪಂಜ್ ಮಾಡುವುದು ಸರಿಯಾದುದಲ್ಲ.

ಅಧ್ಯಕ್ಷರು.—ನಾನು ಹೇಳುವುದು ಏನು ಎಂದರೆ ಯಾರೇ ಆಗಲಿ ಚುನಾವಣೆಯ ಬಗ್ಗೆ ಇಲ್ಲಿ ಮಾತನಾಡುವುದು ಬೇಡ. ಚುನಾವಣೆಯ ವಿಷಯ ಮಾತನಾಡಬೇಕಾದರೆ ಅದಕ್ಕೆ ಬೇರೆ ಸ್ಥಳವಿರುತ್ತದೆ.

ಶ್ರೀ ಭೀಮಣ್ಣ ಖಂಡ್ರೆ.—ನಾವು ಇಲ್ಲಿ ಇದ್ದು ಸಮಾಜವಾದ ಹೇಳಿ ಆ ಕಡೆಗೆ ಹೋಗಿ ವಿಚಾರ ಬದಲಾಯಿಸುವುದಿಲ್ಲ. ಮಾನ್ಯ ಬೊಮ್ಮಾಯಿಯವರು ಅಲ್ಲಿ ಇದ್ದಾಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಭೂಸುಧಾರಣೆಗೆ ನಾನು ವಿರೋಧವಿದ್ದೇನೆಂದು ಅದೇ ಅವರು ಮುಖ್ಯಮಂತ್ರಿಯವರು ಆದಮೇಲೆ ನಾನು ಭೂಸುಧಾರಣೆಗೆ ವಿರೋಧವಿಲ್ಲವೆಂದು ಹೇಳಿದರೆಂದು ಹೇಳಿದರು ಹಾಗೆಯೇ ಒಂದು ಸಾರಿ ಮೈಸೂರಿನ ಹೆಸರನ್ನು ಬದಲಾಯಿಸುವ ವಿಚಾರದಲ್ಲಿ ಅವರು ವಿರೋಧವಿದ್ದರು. ಅದೇ ಅವರು ಮುಖ್ಯಮಂತ್ರಿಗಳಾಗಿ ಮೈಸೂರಿನ ಹೆಸರನ್ನು ಕರ್ನಾಟಕವೆಂದು ಬದಲಾಯಿಸುವಾಗ ಅವರ ಪರವಾದರು ಇದು ಇವತ್ತಿನ ನಡವಳಿಕೆ.

ಶ್ರೀ ಕೆ.ಎಚ್. ರಂಗನಾಥ್.—ಒಂದು ಸಾರಿ ಏನಾದರೂ ಹೇಳಿದರೆ ಅದೇ ಅಭಿಪ್ರಾಯ ಇರಬೇಕು ಎಂದು ಇದೆಯೋ?

ಶ್ರೀ ಭೀಮಣ್ಣ ಖಂಡ್ರೆ.—ಮೈಸೂರು ಮತ್ತು ಕರ್ನಾಟಕದ ಹೆಸರಿನ ಸಮಸ್ಯೆ ಬಂದರೆ ನಾನು ಹೋರಾಟ ಮಾಡುತ್ತೇನೆ ಎಂದು ಹೇಳಿದವರು ಮತ್ತೆ ಮುಖ್ಯಮಂತ್ರಿಗಳಾಗಿ ಆದಮೇಲೆ ಅವರೇ ಮೈಸೂರು ಎಂಬ ಹೆಸರನ್ನು ತೆಗೆದು ಕರ್ನಾಟಕವೆಂದು ನಾಮಕರಣ ಮಾಡಿ ಪ್ರಶಸ್ತಿಯನ್ನು ಪಡೆದರು.

ಶ್ರೀ ಕೆ.ಎಚ್. ರಂಗನಾಥ್.—ಕರ್ನಾಟಕಕ್ಕೆ ಮೈಸೂರು ಎಂಬ ಹೆಸರನ್ನು ತೆಗೆದು ಕರ್ನಾಟಕವೆಂದು ಹೆಸರು ಇಡುತ್ತೇವೆಂದು ಹೇಳಿದಾಗ ವಿರೋಧ ಮಾಡಿದ್ದು ಉಂಟು ಎಂದು ಅವರೇ ಒಪ್ಪಿಕೊಂಡು ಪರಿಸ್ಥಿತಿ ಬದಲಾಗಿರುವುದರಿಂದ ಇವತ್ತು ಹೆಸರನ್ನು ಬದಲಾವಣೆ ಮಾಡಲು ನಾನು ಮುಂದೆ ಬರಬೇಕಾಯಿತು ಎಂದು ಅವರೇ ಹೇಳಿದ್ದಾರೆ.

ಶ್ರೀ ಭೀಮಣ್ಣ ಖಂಡ್ರೆ.—ನಾವು ಅದಕ್ಕೆ ಕೈಗೆ ಏತಕ್ಕೆ ಓಟು ಹೆಚ್ಚು ಬಂತು ಎಂದು ಹೇಳಬೇಕಾಗುತ್ತದೆ.

ಶ್ರೀ ಕೆ.ಎಚ್. ರಂಗನಾಥ್.—ಮಾನ್ಯ ಖಂಡ್ರೆಯವರು ನಾವು ಒಟ್ಟಿಗೇ ಇದ್ದೆವು ಕೇವಲ ೨ ತಿಂಗಳು ೨೧ ದಿವಸ ಅಷ್ಟೇ ವ್ಯತ್ಯಾಸವಾಗಿದೆ?

ಶ್ರೀ ಭೀಮಣ್ಣ ಖಂಡ್ರೆ.—ನಾನು ಅಲ್ಲಿ ಇದ್ದಾಗ ಏನು ಹೇಳಿದ್ದೇ ಇಲ್ಲಿ ಬಂದರೂ ಅದನ್ನೇ ಹೇಳುತ್ತೇನೆ, ಬದಲಾಯಿಸುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು.—ಪೊಲಿಟಿಕಲ್ ಕಾರ್ಯಕ್ರಮದ ಬಗ್ಗೆ ಇಲ್ಲಿ ಭಾಷಣ ಮಾಡಿದರೆ ಏನು ಪ್ರಯೋಜನ? ಅದಕ್ಕೆ ಬೇರೆ ವೇದಿಕೆಗಳು ಪ್ರತಿಯೊಬ್ಬರಿಗೂ ಇವೆ.

ಶ್ರೀ ಭೀಮಣ್ಣ ಖಂಡ್ರೆ.—ಇನ್ನು ಕೋ ಆಪರೇಟೀವ್ ಸೊಸೈಟಿ ಆಕ್ಟಿನಲ್ಲಿ ತಾವು ಏನು ಅಮೆಂಡ್‌ಮೆಂಟ್ ಮಾಡಿದಿರಿ ಅದಕ್ಕೆ ತಮ್ಮ ಬಗ್ಗೆ ನನಗೆ ಬಹಳ ಗೌರವವಿದೆ ಆದರೆ ಅಮೆಂಡ್‌ಮೆಂಟ್ ಏನು ಇವೆ ಅದರ ಬಗ್ಗೆ ಏನು ಹೇಳಿದ್ದೀರಿ ಎಂದರೆ ಸೆಕ್ಷನ್ ೩೮ ಪ್ರಕಾರ.

MR. SPEAKER.—The hon. member may continue his speech next day when discussion on the Motion of Thanks to the Governor's Address is taken up.

Constitution of the Business Advisory Committee

ANNOUNCEMENT

MR. SPEAKER.—It has been decided in consultation with the Leader of the House, Leader of the Opposition and leaders of other parties, to take up legislative business tomorrow. The discussion on the Motion of Thanks to the Governor's Address will be resumed after disposing of some urgent Bills.

As required under Rule 224 (1) of the Rules of Procedure and Conduct of Business, I nominate the following hon. Members to the Business Advisory Committee.

1. Sri D. Devaraj Urs, Chief Minister
2. ,, K.H. Ranganath, Minister for Agriculture and Parliamentary Affairs